ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

# ಕಲಿಕಾ ಚೇತರಿಕೆ

## 2022–2023

## ಶಿಕ್ಷಕರ ಕೈಪಿಡಿ

# ಸಮಾಜ ವಿಜ್ಞಾನ

## 8ನೇ ತರಗತಿ

ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು

ಮತ್ತು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು

# ಸಂದೇಶ



**ಆತ್ಮೀಯರೇ,**

ಮಕ್ಕಳ ಶಿಕ್ಷಣವೇ ಭಾರತದ ಭವಿಷ್ಯ. ಇದಕ್ಕಾಗಿ ಕೇಂದ್ರ ಸರ್ಕಾರವು ಹೊಸ ಶಿಕ್ಷಣ ನೀತಿಯನ್ನು 2020ನ್ನು ಜಾರಿಗೊಳಿಸಿದೆ. ಈ ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿದ್ದು, ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗುತ್ತಿದೆ. ಪಠ್ಯಕ್ರಮ ವಿನ್ಯಾಸ, ಕಲಿಸುವಿಕೆಯಲ್ಲಿ ನಾವೀನ್ಯತೆ, ತರಗತಿ ಪ್ರಕ್ರಿಯೆಯ ಮರುವಿನ್ಯಾಸ ಹಾಗೂ ಶಾಲೆಗಳಲ್ಲಿ ಕಲಿಕಾ ಸಮೃದ್ಧ ವಾತಾವರಣ ನಿರ್ಮಾಣ ಮಾಡಲು ಹಲವು ಕಾರ್ಯತಂತ್ರಗಳನ್ನು ರೂಪಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಈಗಾಗಲೇ ನಿಪುಣ್ ಭಾರತ್ ಮಿಷನ್ ಅಡಿಯಲ್ಲಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನ ಕೌಶಲಗಳನ್ನು ಖಾತ್ರಿಪಡಿಸುವಲ್ಲಿ ನಮ್ಮ ರಾಜ್ಯ ಕಾರ್ಯಪ್ರವೃತ್ತಗೊಂಡಿದೆ.

ಪ್ರಸ್ತುತ ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಮಕ್ಕಳು ಔಪಚಾರಿಕ ಶಿಕ್ಷಣ ಪಡೆಯುವಲ್ಲಿ ಅಡೆತಡೆಗಳಾಗಿ, ಎರಡು ವರ್ಷಗಳಲ್ಲಿ ಕಲಿಕಾ ನಷ್ಟವಾಗಿರುತ್ತದೆ. ಔಪಚಾರಿಕ ಹಾಗೂ ಅನೌಪಚಾರಿಕ ಕಾರ್ಯತಂತ್ರಗಳ ಮೂಲಕ ವಿದ್ಯಾರ್ಥಿಗಳ ಕಲಿಕೆಯ ನಿರಂತರತೆಗೆ ಪ್ರಯತ್ನಿಸಿದ್ದಾಗಿಯೂ ಸಹ ನಿರೀಕ್ಷಿತ ಮಟ್ಟದ ಕಲಿಕೆ ಆಗದಿರುವುದನ್ನು ಹಲವು ಅಧ್ಯಯನಗಳು ತಿಳಿಸಿವೆ. ಈ ಕಲಿಕಾ ಅಂತರವನ್ನು ಸರಿಪಡಿಸುವ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯಪ್ರವೃತ್ತರಾಗಬೇಕಿದೆ. ಸದರಿ ಕಲಿಕಾ ಅಂತರವನ್ನು ಸರಿಪಡಿಸುವ ನಿಟ್ಟಿನಲ್ಲಿ ವೈಜ್ಞಾನಿಕ ತಳಹದಿಯ ಮೇಲೆ ಕರ್ನಾಟಕ ಸರ್ಕಾರ **'ಕಲಿಕಾ ಚೇತರಿಕೆ'** ಎಂಬ ವಿನೂತನ ಉಪಕ್ರಮವನ್ನು 2022–23ನೇ ಶೈಕ್ಷಣಿಕ ವರ್ಷದಲ್ಲಿ ಅನುಷ್ಠಾನಗೊಳಿಸುತ್ತಿದೆ.

ಎಲ್ಲಾ ವಿದ್ಯಾರ್ಥಿಗಳು ಹಿಂದಿನ ಎರಡು ತರಗತಿಗಳಲ್ಲಿ ಕಲಿಯಲೇ ಬೇಕಾಗಿದ್ದ ಪ್ರಮುಖ ಸಾಮರ್ಥ್ಯ, ಪರಿಕಲ್ಪನೆಗಳನ್ನು ಗುರುತಿಸಿದೆ. ಇದಕ್ಕೆ ಸಂವಾದಿಯಾಗಿ ಪ್ರಸಕ್ತ ತರಗತಿಯಲ್ಲಿ ಕಲಿಯಲೇ ಬೇಕಾದ ಪ್ರಮುಖ ಸಾಮರ್ಥ್ಯ, ಪರಿಕಲ್ಪನೆಗಳನ್ನು ಜೋಡಿಸಿ ಕಲಿಕಾ ಹಾಳೆಗಳನ್ನು ಮತ್ತು ಶಿಕ್ಷಕರ ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ. ಕಲಿಕಾ ಹಾಳೆಗಳು ಚಟುವಟಿಕೆಗಳಿಂದ ಕೂಡಿದ್ದು, ಮಗುವಿನ ಮುಗ್ಧ ಮನಸ್ಸಿಗೆ ಸಂತೋಷವನ್ನುಂಟು ಮಾಡುವಂತೆ ರೂಪಿಸಲಾಗಿರುತ್ತದೆ. ಇವುಗಳನ್ನು ಪೂರ್ಣಗೊಳಿಸುವುದರಿಂದ ಕಲಿಕಾ ನಷ್ಟವನ್ನು ಸರಿದೂಗಿಸಬಹುದು ಎಂಬ ಆಶಯ ನನ್ನದಾಗಿರುತ್ತದೆ. ಪಠ್ಯಪುಸ್ತಕ, ಶಿಕ್ಷಕರ ಕೈಪಿಡಿಗಳು ಮತ್ತು ಕಲಿಕಾ ಹಾಳೆಗಳು ಪರಸ್ಪರ ಪೂರಕವಾಗಿವೆ. ಶಿಕ್ಷಕರು ಕೈಪಿಡಿಯಲ್ಲಿ ನೀಡಿದ ಮಾರ್ಗಸೂಚಿಯನ್ವಯ ಈ ವಿನೂತನ ಕಾರ್ಯವನ್ನು ಅದರ ಅಂತಸ್ಸತ್ವದಿಂದ ಅನುಷ್ಠಾನಗೊಳಿಸಿ, ಮಕ್ಕಳ ಕಲಿಕೆಯ ಸುಧಾರಣೆಗೆ ಕಾರಣವಾಗುತ್ತೀರಿ ಎಂದು ಹಾರೈಸುತ್ತೇನೆ. ಆದ್ದರಿಂದ ಇಲಾಖೆಯ ಸರ್ವರೂ, ಪೋಷಕವರ್ಗ ಮತ್ತು ಭಾಗೀದಾರರೆಲ್ಲರೂ ಇದರಲ್ಲಿ ಪರಿಣಾಮಕಾರಿಯಾಗಿ ಕೈ ಜೋಡಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತೀರೆಂದು ಆಶಿಸುತ್ತೇನೆ.

ಎಲ್ಲರಿಗೂ ಶುಭವಾಗಲಿ........

**ಶ್ರೀ ಬಿ.ಸಿ. ನಾಗೇಶ್**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**
**ಹಾಗೂ ಸಕಾಲ ಸಚಿವರು**

## ಮುನ್ನುಡಿ



ರಾಷ್ಟ್ರೀಯ ಶಿಕ್ಷಣ ನೀತಿ–2020ರ ಆಶಯದಂತೆ ಮಕ್ಕಳ ಕಲಿಕೆ ಮತ್ತು ಅಭಿವೃದ್ಧಿ ನಮ್ಮೆಲ್ಲರ ಜವಾಬ್ದಾರಿ. ಆದರೆ ಕೋವಿಡ್–19 ಸಾಂಕ್ರಾಮಿಕ ವಿಪತ್ತಿನಿಂದ ಮಕ್ಕಳ ಕಲಿಕೆಯಲ್ಲಿ ವ್ಯತ್ಯಯವಾಗಿ ಕಲಿಕಾ ನಿರಂತರತೆಯನ್ನು ಕಾಪಾಡಿಕೊಳ್ಳಲು ಕಳೆದೆರಡು ವರ್ಷಗಳಿಂದ ಸಾಧ್ಯವಾಗಿರುವುದಿಲ್ಲ. ಸಾಕಷ್ಟು ಕಲಿಕಾ ಅಂತರವಾಗಿರುತ್ತದೆ. ಈ ಅಂತರವನ್ನು ನೀಗಿಸಲು 2022–23ನೇ ಸಾಲಿನಲ್ಲಿ ಕಲಿಕಾ ಚೇತರಿಕೆ ಎಂಬ ವಿನೂತನ ಉಪಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಉಪಕ್ರಮದ ಮೂಲಕ ಎಲ್ಲಾ ವಿದ್ಯಾರ್ಥಿಗಳಿಗೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನಕ್ಕೆ ಒತ್ತು ನೀಡಲಾಗುವುದು ಹಾಗೂ ಮಗು ತನ್ನ ಹಿಂದಿನ ತರಗತಿಗಳಲ್ಲಿ ಅತ್ಯಗತ್ಯವಾಗಿ ಗಳಿಸಲೇಬೇಕಿದ್ದ **ಕಲಿಕಾ ಫಲಗಳು** ಹಾಗೂ ಪ್ರಸಕ್ತ ತರಗತಿಯಲ್ಲಿ ಕಲಿಯಲೇ ಬೇಕಾದ **"ಅತಿ ಮುಖ್ಯ ಕಲಿಕಾ ಫಲ"** ಗಳನ್ನು ಗುರುತಿಸಿ, ಚಟುವಟಿಕೆ ರೂಪಿಸಿ ಕಲಿಕಾ ಹಾಳೆಗಳನ್ನು ಮತ್ತು ಶಿಕ್ಷಕರ ಕೈಪಿಡಿಯನ್ನು ರೂಪಿಸಲಾಗಿದೆ. ಇವುಗಳಲ್ಲಿ **'ನಿಪುಣ್ ಭಾರತ್', 'ವಿದ್ಯಾ ಪ್ರವೇಶ್'ನಂತಹ ಉಪಕ್ರಮಗಳನ್ನು ಅಂತರ್ಗತಗೊಳಿಸಲಾಗಿದೆ.** ಈ ಚಟುವಟಿಕೆಗಳು ಶಿಶುಕೇಂದ್ರಿತ, ಕಲಿಕಾ ಹಾಗೂ ಶಿಕ್ಷಕ ಸ್ನೇಹಿಯಾಗಿವೆ. ಚಟುವಟಿಕಾ ಹಾಳೆಗಳ ಜೊತೆಗೆ, ಶಿಕ್ಷಕರಿಗೆ ಅಗತ್ಯ ಮಾರ್ಗದರ್ಶನ ನೀಡುವ 'ಶಿಕ್ಷಕರ ಕೈಪಿಡಿ'ಯನ್ನೂ ಸಿದ್ಧಪಡಿಸಿ ನೀಡಲಾಗುತ್ತಿದೆ. ಇವುಗಳನ್ನು ಬಳಸಿ ಮಕ್ಕಳ ಕಲಿಕಾ ಅಂತರ ಸರಿದೂಗಿಸುವ ಕಾರ್ಯವನ್ನು ತಾವೆಲ್ಲರೂ ಜವಾಬ್ದಾರಿಯಿಂದ ನಿರ್ವಹಿಸುತ್ತೀರೆಂಬ ಆಶಯವನ್ನು ಹೊಂದಿರುತ್ತೇನೆ. ಈ ಕಾರ್ಯದಲ್ಲಿ ತೊಡಗಿಸಿಕೊಂಡ DSERT ಹಾಗೂ SSK ಯ ಅಧಿಕಾರಿಗಳಿಗೆ ಅಭಿನಂದನೆಗಳು. ಈ ಕಾರ್ಯದಲ್ಲಿ ಸಹಕರಿಸಿದ ಅಜೀಮ್ ಪ್ರೇಮ್‌ಜೀ ಫೌಂಡೇಷನ್ ಸಂಸ್ಥೆಗೂ ಇಲಾಖೆಯ ಪರವಾಗಿ ಅಭಿನಂದನೆಗಳು.

**ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ.**
**ಸರ್ಕಾರದ ಪ್ರಧಾನ ಕಾರ್ಯದರ್ಶಿ**
**ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ**

## ಆಶಯ ನುಡಿ



ವಿದ್ಯಾರ್ಥಿಯ ಶೈಕ್ಷಣಿಕ ಬದುಕಿನಲ್ಲಿ ಪ್ರತೀ ನಿತ್ಯವೂ ಕಲಿಕಾ ನಿರಂತರತೆ ಅತ್ಯಗತ್ಯ. ಆದರೆ ಕೋವಿಡ್–19 ಸಾಂಕ್ರಾಮಿಕದಿಂದಾಗಿ ಜಾಗತಿಕವಾಗಿ ಕಲಿಕಾ ನಿರಂತರತೆಗೆ ವ್ಯತ್ಯಯ ಉಂಟಾಗಿ ಮಕ್ಕಳಲ್ಲಿ ಕಲಿಕಾ ನಷ್ಟವಾಗಿರುವುದು ವೇದ್ಯ. ಇದನ್ನು ಸರಿದೂಗಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ನಮ್ಮ ರಾಜ್ಯದಲ್ಲಿ ಕೋವಿಡ್–19 ನಿಂದಾಗಿ ಶಾಲೆಗಳು ಮುಚ್ಚಲ್ಪಟ್ಟಾಗ ವಿದ್ಯಾಗಮ, ಸಂವೇದ, ವಿಶೇಷ ಸೇತುಬಂಧ ಮುಂತಾದ ಪರ್ಯಾಯ ಕಾರ್ಯಕ್ರಮಗಳನ್ನು ರೂಪಿಸಿದರೂ ಮುಖಾಮುಖಿ ತರಗತಿ ಪ್ರಕ್ರಿಯೆಗೆ ಇವೆಲ್ಲಾ ಸಮಾಂತರವಾಗುವುದಿಲ್ಲ. ಪ್ರಸ್ತುತ **'ಕಲಿಕಾ ಚೇತರಿಕೆ'** ಉಪಕ್ರಮವು ವೈಜ್ಞಾನಿಕ ತಳಹದಿಯ ಮೇಲೆ ಶಿಶು ಕೇಂದ್ರಿತ ಚಟುವಟಿಕೆಗಳನ್ನು ಒಳಗೊಂಡ ಕಲಿಕಾ ಹಾಳೆಗಳನ್ನು ರೂಪಿಸಿ ನೀಡುತ್ತಿರುವ ವಿನೂತನ ಪ್ರಯತ್ನ. ಸರಿಸುಮಾರು ಎರಡು ವರ್ಷಗಳ ಶೈಕ್ಷಣಿಕ ಪ್ರಕ್ರಿಯೆಗಳು ಪೂರ್ಣವಾಗಿ ನಡೆಯದೇ, ಮಕ್ಕಳಲ್ಲಿ ಉಂಟಾಗಿರುವ ಕಲಿಕಾ ಅಂತರವನ್ನು ಸರಿದೂಗಿಸುವ ಸಲುವಾಗಿಯೇ ರೂಪಿಸಿದ ಉಪಕ್ರಮ. ಈ ಕಾರ್ಯವನ್ನು ಒಂದು ವರ್ಷದವರೆಗೆ ರಾಜ್ಯದಾದ್ಯಂತ ಅನುಷ್ಠಾನಗೊಳಿಸಿ ಮಕ್ಕಳ ಕಲಿಕಾ ನಷ್ಟವನ್ನು ತಾವೆಲ್ಲರೂ ತುಂಬಿಕೊಡುತ್ತೀರಿ ಎಂದು ಆಶಿಸುತ್ತೇನೆ. ಉಪಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಎಲ್ಲಾ ಭಾಗೀದಾರರು ಸಕ್ರಿಯವಾಗಿ ತೊಡಗಿಸಿಕೊಳ್ಳುವಿರೆಂದು ನಂಬಿದ್ದೇನೆ.

**ಡಾ. ವಿಶಾಲ್ ಆರ್. ಭಾ.ಆ.ಸೇ.**
**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

## ಆರಂಭಿಕ ನುಡಿ



**ಆತ್ಮೀಯರೇ,**

ಹಿಂದಿನ ಎರಡು ವರ್ಷಗಳ ಕಾಲ ಕೋವಿಡ್–19ರ ಕಾರಣದಿಂದ ಔಪಚಾರಿಕ ತರಗತಿಗಳು ನಿರೀಕ್ಷೆಯಂತೆ ನಡೆಯದೇ ಮಕ್ಕಳಲ್ಲಿ ಕಲಿಕಾ ನಷ್ಟವುಂಟಾಗಿರುವುದು ಶೋಚನೀಯ. ಇದರಿಂದಾಗಿ ಕಲಿಕಾ ಅಂತರ, ಸಾಮಾಜಿಕ ಹಾಗೂ ಭಾವನಾತ್ಮಕ ಏರುಪೇರುಗಳೂ ಉಂಟಾಗಿವೆ. ಈ ಎಲ್ಲ ಅಡೆತಡೆಗಳನ್ನು ನಿವಾರಿಸಿ, ಕಲಿಕಾ ನಿರಂತರತೆಯನ್ನು ಕಾಯ್ದುಕೊಳ್ಳಲು 2022–23ನೇ ಶೈಕ್ಷಣಿಕ ವರ್ಷದಲ್ಲಿ **ಕಲಿಕಾ ಚೇತರಿಕೆ ಉಪಕ್ರಮವನ್ನು** ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನವನ್ನು ಸಾಧಿಸುವುದು ಪ್ರಥಮ ಆದ್ಯತೆಯಾಗಿರುತ್ತದೆ. ಎಲ್ಲಾ ಕಲಿಕೆಗೆ ಮೂಲಭೂತವಾಗಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ ಅತ್ಯಗತ್ಯ. ಆದ್ದರಿಂದ ಆಯಾ ತರಗತಿಯ ನಿರ್ದಿಷ್ಟ ಕಲಿಕಾ ಫಲಗಳೊಂದಿಗೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಕಲಿಕಾ ಚಟುವಟಿಕೆಗಳನ್ನು ಅಂತರ್ಗತಗೊಳಿಸಿ ಕಲಿಕಾ ಚೇತರಿಕೆ ಉಪಕ್ರಮವನ್ನು ರೂಪಿಸಲಾಗಿದೆ. ಇಲ್ಲಿ ನೀಡಿರುವ ಕಲಿಕಾ ಹಾಳೆಗಳನ್ನು ತಾವು ಬಳಸಿಕೊಂಡು ಮಕ್ಕಳಲ್ಲಿ ಬುನಾದಿ ಕಲಿಕಾ ಜ್ಞಾನವನ್ನು ಅನುಕೂಲಿಸುವಿರಿ ಹಾಗೂ ಕಲಿಕಾ ಅಂತರವನ್ನು ಪೂರೈಸುವಿರಿ ಎಂದು ಆಶಿಸುತ್ತೇನೆ. ಇದನ್ನು ಶಾಲಾಧಾರಿತವಾಗಿ ಮೌಲ್ಯಾಂಕನ ಮಾಡುತ್ತಾ ನಿಗದಿತ ಸಾಮರ್ಥ್ಯ ಮತ್ತು ಪರಿಕಲ್ಪನೆ ಗಳಿಕೆಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೀರಿ ಎಂದು ನಂಬಿರುತ್ತೇನೆ. ತಮ್ಮೆಲ್ಲರ ಬೆಂಬಲದಿಂದ ಪರಿಣಾಮಕಾರಿ ಅನುಷ್ಠಾನ ಸಾಧ್ಯ. ಈ ನಿಟ್ಟಿನಲ್ಲಿ ಎಲ್ಲರಿಗೂ ಯಶಸ್ಸನ್ನು ಹಾರೈಸುತ್ತೇನೆ.

**ಶ್ರೀಮತಿ ಪಲ್ಲವಿ ಆಕುರಾತಿ, ಭಾ.ಆ.ಸೇ.**
**ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ**

## ಪ್ರಾಸ್ತಾವಿಕ ನುಡಿ



**ಆತ್ಮೀಯರೇ,**

ಹೊಸ ಶತಮಾನದ ಆಶಯಗಳನ್ನು ಒಳಗೊಂಡ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನ ಸಂದರ್ಭದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿನ ಬದಲಾವಣೆಗೆ ನಾವೆಲ್ಲರೂ ತೆರೆದುಕೊಳ್ಳಬೇಕಿದೆ. ಅದರ ಜೊತೆಗೆ ಕೋವಿಡ್ ಸಂದರ್ಭದಲ್ಲಿ ಉಂಟಾದ ವ್ಯತಿರಿಕ್ತ ಪರಿಣಾಮವನ್ನು ಸರಿಪಡಿಸುವ ಹೊಣೆಗಾರಿಕೆ ಮಹತ್ತ್ವದ್ದಾಗಿದೆ. ಕಳೆದ ಎರಡು ವರ್ಷಗಳಲ್ಲಿ ಬಹು ಮಾಧ್ಯಮಗಳನ್ನು ಬಳಸಿಕೊಂಡು ವಿದ್ಯಾಗಮ, ಸಂವೇದದಂತಹ ಶೈಕ್ಷಣಿಕ ಉಪಕ್ರಮಗಳ ಮೂಲಕ ಮಾಡಿದ ಪ್ರಯತ್ನಗಳ ನಡುವೆಯೂ ವಿದ್ಯಾರ್ಥಿಗಳ ಕಲಿಕೆಯಲ್ಲಿ ಸಾಕಷ್ಟು ಕಲಿಕಾ ಅಂತರ ಉಂಟಾಗಿರುವುದು ವಾಸ್ತವದ ಸಂಗತಿ. ಕಲಿಕಾ ನಷ್ಟ, ಕಲಿಕಾ ಅಂತರ ಪೂರೈಸುವ ಯೋಜನೆಯೇ **‘ಕಲಿಕಾ ಚೇತರಿಕೆ’** ಉಪಕ್ರಮ. ಈ ಸಂದರ್ಭೋಚಿತ ಉಪಕ್ರಮದಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ ಸಾಮರ್ಥ್ಯವನ್ನು ಸಾಧಿಸುವುದರೊಂದಿಗೆ, ಹಿಂದಿನ ಎರಡು ಶೈಕ್ಷಣಿಕ ವರ್ಷಗಳ ಆಯ್ದ ಕಲಿಕಾಫಲಗಳು ಹಾಗೂ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಕಲಿಯಲೇಬೇಕಾದ ಅತ್ಯಗತ್ಯ ಕಲಿಕಾಫಲಗಳನ್ನು ಎಲ್ಲಾ ಮಕ್ಕಳಲ್ಲಿ ಸಾಧಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಈ ಸಾಧನೆಗಾಗಿ ಕಲಿಕಾ ಪ್ರಕ್ರಿಯೆಯ ಸಾಧ್ಯತೆಗಳನ್ನು ಸೂಚಿಸುವ ‘ಶಿಕ್ಷಕರ ಕೈಪಿಡಿ’ ಮತ್ತು ಶಿಶುಕೇಂದ್ರಿತ ಕಲಿಕಾ ಪೂರಕ ಚಟುವಟಿಕೆಗಳನ್ನೊಳಗೊಂಡ ವಿದ್ಯಾರ್ಥಿಗಳ **‘ಕಲಿಕಾ ಹಾಳೆ’**ಗಳ ಪುಸ್ತಕ ಎಂಬ ಎರಡು ಸಾಹಿತ್ಯಗಳನ್ನು ಸೃಜಿಸಲಾಗಿದೆ. ಈ ಕಲಿಕಾ ಹಾಳೆಗಳಲ್ಲಿ ವಿದ್ಯಾರ್ಥಿಗಳು ಕಲಿಯಲೇಬೇಕಾದ ಸಾಮರ್ಥ್ಯ, ಪರಿಕಲ್ಪನೆ ಮತ್ತು ಕಲಿಕಾಫಲಗಳನ್ನು ಕೇಂದ್ರೀಕರಿಸಿದೆ. ಇವುಗಳನ್ನು ಬಳಸಿ ಮಕ್ಕಳ ಕಲಿಕಾ ನಷ್ಟವನ್ನು ಸರಿದೂಗಿಸಲು ಎಲ್ಲಾ ಭಾಗೀದಾರರು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕಾಗಿ ಈ ಮೂಲಕ ವಿನಂತಿಸುತ್ತೇನೆ. ಈ ಕಾರ್ಯಾಭಿವೃದ್ಧಿಯಲ್ಲಿ ತೊಡಗಿಸಿಕೊಂಡ ಇಲಾಖಾ ಮಿತ್ರರು ಮತ್ತು ಅಜೀಮ್ ಪ್ರೇಮ್‌ಜೀ ಫೌಂಡೇಷನ್ ಇವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶುಭವಾಗಲಿ.

**ಶ್ರೀಮತಿ ಸುಮಂಗಲ .ವಿ**
**ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ**

## ಪರಿಕಲ್ಪನೆ & ಮಾರ್ಗದರ್ಶನ

| | |
|---|---|
| **ಡಾ. ಎಸ್. ಸೆಲ್ವಕುಮಾರ್,** ಭಾ. ಆ. ಸೇ.<br>ಪ್ರಧಾನ ಕಾರ್ಯದರ್ಶಿಗಳು,<br>ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ. ಬೆಂಗಳೂರು | **ಡಾ. ವಿಶಾಲ್. ಆರ್** ಭಾ. ಆ. ಸೇ.<br>ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ<br>ಬೆಂಗಳೂರು |
| **ಶ್ರೀಮತಿ ಪಲ್ಲವಿ ಆಕುರಾತಿ,** ಭಾ. ಆ. ಸೇ.<br>ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ<br>ಕರ್ನಾಟಕ, ಬೆಂಗಳೂರು | **ಶ್ರೀಮತಿ ವಿ. ಸುಮಂಗಲ**<br>ನಿರ್ದೇಶಕರು, ಡಿ.ಎಸ್.ಇ.ಆರ್.ಟಿ.<br>ಬೆಂಗಳೂರು. |

**ಸಾಹಿತ್ಯ ರಚನಾ ತಂಡ**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ ರವರ ನೇತೃತ್ವದಲ್ಲಿ**

| | |
|---|---|
| **ಡಾ. ಶಂಕರ ಶಾಸ್ತ್ರಿ,**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಮಾಸೂರು, ಸಾಗರ, ಶಿವಮೊಗ್ಗ. | **ಶ್ರೀಮತಿ ರಜನಿ ಎನ್.**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಕೂಡ್ಲು,<br>ತೀರ್ಥಹಳ್ಳಿ ತಾ. ಶಿವಮೊಗ್ಗ. |
| **ಶ್ರೀ ರಾಘವೇಂದ್ರ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಬೆಳ್ಳೂರು, ಹೊಸನಗರ, ಶಿವಮೊಗ್ಗ | **ಶ್ರೀ ಗಿರೀಶ್ ಬಿ.**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಕುಡುಮಲ್ಲಿಗೆ,<br>ತೀರ್ಥಹಳ್ಳಿ ತಾ. ಶಿವಮೊಗ್ಗ |

**ಶ್ರೀ ರಾಜೇಶ, ಎನ್.**
ಸಹ ಶಿಕ್ಷಕರು, ಸರ್ಕಾರಿ ಪದವಿಪೂರ್ವ ಕಾಲೇಜು,
ಪ್ರೌಢಶಾಲಾ ವಿಭಾಗ, ಶಿಕಾರಿಪುರ, ಶಿವಮೊಗ್ಗ.

**ಅಜೀಮ್ ಪ್ರೇಮ್‌ಜಿ ಫೌಂಡೇಶನ್ ತಂಡ**

**ಪರಿಶೀಲನಾ ತಂಡ**

**ಡಾ. ಹರಿಪ್ರಸಾದ್ ಜಿ.ವಿ.**
ಹಿರಿಯ ಉಪನ್ಯಾಸಕರು,
ಡಯಟ್, ಶಿವಮೊಗ್ಗ

**ಸಂಯೋಜಕರು:**

**ಇ.ವಿ.ಜಿ. ವಿಭಾಗ, ಡಿ.ಎಸ್.ಇ.ಆರ್.ಟಿ.**

## ಪರಿವಿಡಿ


| ಕ್ರಮ ಸಂಖ್ಯೆ | ಕಲಿಕಾಂಶಗಳ ವಿವರ | ಪುಟ ಸಂಖ್ಯೆ |
|---|---|---|
| 1 | ಕಲಿಕಾ ಚೇತರಿಕೆ – ಒಂದು ಉಪಕ್ರಮ | 2 |
| 2 | ಕಲಿಕಾ ಚೇತರಿಕೆ ಹೀಗಾಗಬಾರದು – ಹೀಗಾಗಬೇಕು | 3 |
| 3 | ಇತಿಹಾಸದ ಮೂಲಾಧಾರಗಳು, ಇತಿಹಾಸದಲ್ಲಿ ಕಾಲಗಣನೆ | 6 |
| 4 | ಆರಂಭಿಕ ಸಮಾಜ, ಮಾನವರ ನೆಲೆಯೂರುವಿಕೆ | 6 |
| 5 | ವೇದಗಳ ಕಾಲ | 8 |
| 6 | ಪ್ರಪಂಚದ ಪ್ರಮುಖ ನಾಗರೀಕತೆಗಳ ಬೆಳವಣಿಗೆ | 9 |
| 7 | ಅಂಹಿಸೆಯ ಕಡೆಗೆ | 10 |
| 8 | ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳು | 11 |
| 9 | ಮಧ್ಯಕಾಲೀನ ಭಾರತ : ಕಾಲಗಣನೆ, ಆಡಳಿತ, ಸೂಫಿಗಳ ಪ್ರಭಾವ, ಕಲೆ ಮತ್ತು ವಾಸ್ತು ಶಿಲ್ಪ | 13 |
| 10 | ಆಧುನಿಕ ಭಾರತ : ಕಾಲಾನುಕ್ರಮ, ಜಲಮಾರ್ಗದ ಅನ್ವೇಷಣೆ, ಕಾನ್ಸಾಂಟಿನೋಪಲ್ ನಗರದ ಪತನ, ವ್ಯಾಪಾರಕ್ಕೆ ಬಂದ ಯುರೋಪಿಯನ್ನರಿಗೆ ಭಾರತ ವಶವಾದ ಪ್ರಕ್ರಿಯೆ ಮತ್ತು ಪರಿಣಾಮಗಳು | 15 |
| 11 | ಬ್ರಿಟೀಷ್ ಆಡಳಿತದ ಸುಧಾರಣೆಗಳು ಮತ್ತು ಭಾರತೀಯರ ಪ್ರತಿಕ್ರಿಯೆಗಳು | 17 |
| 12 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು | 21 |
| 13 | ಭಾರತ ಸ್ವಾತಂತ್ರ್ಯ ಚಳುವಳಿಯ ಪ್ರಮುಖ ವ್ಯಕ್ತಿಗಳು ಮತ್ತು ಘಟನೆಗಳು, ಅಹಿಂಸಾ ಮಾರ್ಗ ಮತ್ತು ಸತ್ಯಾಗ್ರಹ | 21 |
| 14 | ಭಾರತದ ವಿಭಜನೆ | 23 |
| 15 | ಭೂಮಿಯ ಪದರಗಳು, ಭೂಮಿಯ ಪದರಗಳ ಪ್ರಮುಖ ಲಕ್ಷಣಗಳು | 23 |
| 16 | ನೈಸರ್ಗಿಕ ವಿಕೋಪಗಳು | 24 |
| 17 | ಭೂ ಖಂಡಗಳು, ಅಕ್ಷಾಂಶ ಮತ್ತು ರೇಖಾಂಶಗಳ ಪರಿಚಯ | 25 |
| 18 | ಭಾರತದ ಭೌಗೋಳಿಕ ಲಕ್ಷಣಗಳ ಪರಿಚಯ | 26 |
| 19 | ಮಕ್ಕಳ ಹಕ್ಕುಗಳು ಮತ್ತು ಮಾನವ ಹಕ್ಕುಗಳು | 27 |
| 20 | ಸ್ಥಳೀಯ ಸರಕಾರ | 27 |
| 21 | ಅರ್ಥ ವ್ಯವಸ್ಥೆಯ ವಲಯಗಳ ಪರಿಚಯ | 28 |
| 22 | ನಮ್ಮ ಜೀವನದಲ್ಲಿ ಬ್ಯಾಂಕುಗಳ ಪಾತ್ರ | 28 |
| 23 | ಸ್ವಸಹಾಯ ಸಂಘಗಳು | 29 |
| 24 | ಸಮಾಜ ವಿಜ್ಞಾನ ಕಲಿಕೆ ಅನುಕೂಲಿಸಬಹುದಾದ ವಿಧಾನಗಳು | 30 |

ಪ್ರೀತಿಯ ಶಿಕ್ಷಕ ಮಿತ್ರರೇ,

ಕೋವಿಡ್–19ರ ಸಾಂಕ್ರಾಮಿಕ ರೋಗದ ಸನ್ನಿವೇಶವನ್ನು ಎದುರಿಸಿ ನಿಮ್ಮ ಮಕ್ಕಳು ಶಾಲೆಗೆ ಬರುತ್ತಿದ್ದಾರೆ. ಎಷ್ಟೋ ದಿನ ಅವರ ಆಟ, ಓದು, ಸಹಜವಾಗಿರೋದನ್ನ ಬಿಟ್ಟು ಮನೆಯಲ್ಲಿರಬೇಕಾದ ಪ್ರಸಂಗವನ್ನು ಸಮರ್ಥರಾಗಿ ಎದುರಿಸಿ ಬಂದಿದ್ದಾರೆ. ಹಾಗೆಯೇ ನೀವೂ ಸಹ ಶಾಲೆ ಆರಂಭವಾದರೆ ಸಾಕು ಎಂದು ಪರಿತಪಿಸಿದ್ದೀರಿ. ಮಾನಸಿಕವಾಗಿ ಮಕ್ಕಳು ಮತ್ತು ತಾವು ಹೆಚ್ಚು ಗೊಂದಲದಲ್ಲಿ ಬಳಲಿದ್ದೀರಿ. ಕಲಿಕಾ ಅಂತರಕ್ಕೆ ಬೇಸರೊಗೊಂಡಿದ್ದೀರಿ. ಈ ಅಂತರವನ್ನು ಸರಿದೂಗಿಸಲು ಇಲ್ಲಿ ಪ್ರಯತ್ನವನ್ನು ಮಾಡಿದ ಇಲಾಖೆ ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ರೂಪಿಸಿದೆ.

ಎಂಟನೆಯ ತರಗತಿಯ ಮಕ್ಕಳು ಹಿಂದಿನ ಎರಡು ತರಗತಿಗಳಲ್ಲಿ ಕಲಿಯಲೇಬೇಕಾದ, ಮುಂದಿನ ವರ್ಷ ಒಂಭತ್ತನೇ ತರಗತಿಗೆ ಹೋದಾಗ ಅರ್ಥವಾಗಬೇಕಾದ ಪರಿಕಲ್ಪನೆಗಳ ಮೂಲವನ್ನು ಈ ಕಲಿಕಾ ಹಾಳೆಗಳ ಪುಸ್ತಕದಲ್ಲಿ ನೀಡಿದೆ. ನೀವು ಅವುಗಳನ್ನೊಮ್ಮೆ ಪರಿಶೀಲಿಸಿರಿ. ಕಲಿಕಾ ಹಾಳೆಗಳು ಸ್ವಕಲಿಯುವಂತೆಯೇ ಇವೆ. ಆದರೆ ಹಾಗೆ ಸ್ವಂತ ಕಲಿಯಲು ಮಕ್ಕಳು ಓದಬಲ್ಲವರಾಗಿರಬೇಕಾಗುತ್ತದೆ. ಇಲ್ಲವಾದಲ್ಲಿ ತಮ್ಮ ಸಹಾಯ ಮಕ್ಕಳಿಗೆ ಬೇಕಾಗುತ್ತದೆ.

ಇಲ್ಲಿ ನೀಡಿರುವ ಕಲಿಕಾ ಹಾಳೆಗಳು ಉದಾಹರಣಾತ್ಮಕವಾಗಿ ಮಾತ್ರ. ತರಗತಿ ಪ್ರಕ್ರಿಯೆಯಲ್ಲಿ ನಿತ್ಯ ಇರುವ ನೀವು ಮಕ್ಕಳ ಅಗತ್ಯವನ್ನು ಉತ್ತಮವಾಗಿ ಅರಿತಿರುತ್ತೀರಿ. ನಿಮ್ಮ ಅಪಾರ ಅನುಭವದ ಹಿನ್ನೆಲೆಯಲ್ಲಿ ಇಲ್ಲಿರುವ ಕಲಿಕಾಹಾಳೆಗಳ ಜೊತೆಯಾಗಿ ನೀವೊಂದಿಷ್ಟು ಸೇರ್ಪಡೆ ಮಾರ್ಪಾಡುಗಳನ್ನು ಮಾಡಿಕೊಳ್ಳಿರಿ. ಅವುಗಳನ್ನು ಬಳಸಿ ನಾವೀನ್ಯಯುತ ರೀತಿಯಿಂದ ಮಕ್ಕಳ ಅಭಿವೃದ್ಧಿಗೆ ಸಹಾಯ ಮಾಡಲು ಕೋರುತ್ತೇವೆ. ನಿಮ್ಮ ಕಲಿಕೆ ಚೆಂದವಾಗಲೆಂದು ಹಾರೈಸುತ್ತೇವೆ.

**ಮಕ್ಕಳ ಪುಸ್ತಕದ ಕಲಿಕಾ ಹಾಳೆಗಳನ್ನು ಅವಲೋಕಿಸಿ ಈ ಕೆಳಕಂಡಂತೆ ಮಾರ್ಗದರ್ಶನ ನೀಡಿರಿ.**

– ಅಗತ್ಯವಿದ್ದಲ್ಲಿ ನೀವೂ ಸ್ವತಃ ಮಕ್ಕಳಿಗೆ ನೀಡಿರುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಿರಿ.
– ನೀಡಿರುವ ವಿಷಯದ ಕುರಿತು ಮಕ್ಕಳು ಆಲೋಚಿಸುವಂತೆ ಮಾಡಿರಿ. ಬರೆಯುವುದಕ್ಕಿಂತಲೂ ಮಕ್ಕಳು ಆ ವಿಷಯದ ಕುರಿತು ಹೆಚ್ಚು ಹೆಚ್ಚು ಅವರ ಸ್ನೇಹಿತರು, ಅಣ್ಣ, ಅಕ್ಕ, ಶಿಕ್ಷಕರೊಂದಿಗೆ ಮಾತಾಡುವಂತೆ ಮಾಡಿರಿ.
– ಪಠ್ಯ ಪುಸ್ತಕದ ಜೊತೆಗೆ ಕಲಿಕಾಹಾಳೆಯ ಚಟುವಟಿಕೆಗಳನ್ನು ನಿರ್ವಹಿಸುವಂತೆ ಅನುಕೂಲಿಸಿರಿ.
– ಪಠ್ಯಪುಸ್ತಕದ ಅಭ್ಯಾಸ ಪ್ರಶ್ನೆಗಳನ್ನು ಈ ವರ್ಷ ಅಗತ್ಯವಿದ್ದಲ್ಲಿ ನೀವೇ ನಿರ್ಧರಿಸಿ ಮಾಡಿಸಿರಿ. ಇಲ್ಲದಿದ್ದಲ್ಲಿ ಈ ವರ್ಷಕ್ಕೆ ಕಲಿಕಾ ಹಾಳೆಗಳ ಚಟುವಟಿಕೆಗಳು ಮತ್ತು ತಾವು ರೂಪಿಸುವ ಚಟುವಟಿಕೆಗಳು ಸಾಕಾಗಬಹುದು.
– ಪ್ರತಿ ಕಲಿಕಾಂಶದ ನಂತರ ಸ್ವಾವಲೋಕನದ ಭಾಗವಾಗಿ ಮಕ್ಕಳು ಕಲಿಕಾ ಪ್ರಗತಿಯನ್ನು ದಾಖಲಿಸಿಕೊಳ್ಳುವರು. ಅಲ್ಲಿ ನಾಲ್ಕು ಹಂತಗಳಿವೆ. ಆ ಮಕ್ಕಳು ನಾಲ್ಕನೇ ಹಂತಕ್ಕೆ ತಲುಪಲು ಸಹಾಯ ಮಾಡಿರಿ. ನಾಲ್ಕನೇ ಹಂತ ತಲುಪಲು ಇರುವ ಸಮಸ್ಯೆಗಳನ್ನು ಪರಿಹರಿಸಿರಿ.
– ಮಕ್ಕಳ ಪ್ರಗತಿ ನೋಟದ ಕೆಳಗೆ ಆ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಮಗು ಸಾಧಿಸಿದ ಹಿಮ್ಮಾಹಿತಿ ದಾಖಲಿಸಿ, ಸಹಿ ಮಾಡಿರಿ.
– ಏನಾದರೂ ಹೆಚ್ಚಿನ ಅಗತ್ಯ ಬೇಕಾದಲ್ಲಿ ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿರಿ. ಹಾಗೂ ಮುಖಪಟದಲ್ಲಿ ನೀಡಿರುವ ಡಿ.ಎಸ್.ಇ.ಆರ್.ಟಿ ವಿಳಾಸಕ್ಕೆ ಪತ್ರ, ಇ–ಮೇಲ್ ಮೂಲಕ ಸಂಪರ್ಕಿಸಿರಿ.
– ಖುಷಿಯಾಗಿ ಕಲಿಸಿರಿ. ಸಂತೋಷದಿಂದ ಸಂತೋಷ ಹಂಚಿರಿ....

## 1. ಕಲಿಕಾ ಚೇತರಿಕೆ

ಕಲಿಕಾಫಲಗಳ ಗಳಿಕೆಗೆ ಕಲಿಕಾಂಶ, ಪಠ್ಯಾಂಶಗಳು, ಪಠ್ಯಪುಸ್ತಕಗಳಲ್ಲಿ ಸಮ್ಮಿಳಿತಗೊಳಿಸಿದೆ. ಅಲ್ಲಿಗೆ ಕಲಿಕಾಫಲಗಳು ನಿರೀಕ್ಷಿಸಿದ್ದನ್ನು ಪಠ್ಯಪುಸ್ತಕ ಒಂದು ಕಲಿಕೋಪಕರಣವಾಗಿ ಒದಗಿಸುತ್ತದೆ. ಈ ಕಲಿಕಾಫಲಗಳ ಗಳಿಕೆಯನ್ನು ಮೂಲಭೂತ ಸಾಮರ್ಥ್ಯಗಳು ನಿರ್ಧರಿಸುತ್ತದೆ.

ಕಲಿಕೆ ಎನ್ನುವ ಪ್ರಕ್ರಿಯೆಗೆ ಭಾಷೆಯೇ ಆವರಣ. ಈ ಭಾಷೆಯಲ್ಲಿನ ಅಂತರ್ ಕ್ರಿಯಾತ್ಮಕತೆ ನಿರಂತರತೆಯ ಮೂಲಕ ಕಲಿಕೆ ಅನುಭವವಾಗಬೇಕಲ್ಲವೆ ? ಈ ಕಲಿಕಾನುಭವ ವೇದ್ಯವಾಗುವ ತರಗತಿ ಪ್ರಕ್ರಿಯೆಯಿಂದ ಪ್ರತ್ಯಕ್ಷವಾಗಿ ವಂಚಿತವಾದ ಮಗು ತನ್ನ ಪೂರ್ವಕಲಿಕಾ ಸನ್ನಿವೇಶದಲ್ಲಿ ಕಳೆದುಕೊಂಡಿದ್ದೆಷ್ಟು? ಅವುಗಳನ್ನು ಮತ್ತೆ ಹೇಗೆ ಸರಿದೂಗಿಸಬೇಕೆಂಬ ಪ್ರಶ್ನೆ ಎದುರಾದಾಗ ನಾವು ನಮ್ಮ ತರಗತಿಯಲ್ಲಿ ನಮ್ಮ ವಿದ್ಯಾರ್ಥಿಗಳೊಂದಿಗೆ ನಾವೇ ರೂಪಿಸಿಕೊಳ್ಳಬಹುದಾದ ಪರಿಹಾರೋಪಾಯವೇ ಕಲಿಕಾ ಚೇತರಿಕೆ. ಇದು ಕೇವಲ ಒಂದು ಸಾಹಿತ್ಯವಲ್ಲ. ಸೇತುಬಂಧದಂತಹ ಯೋಜನೆಯಲ್ಲ. ಪುನರಾವಲೋಕನ ವಿಧಾನವೂ ಅಲ್ಲ. ಕಲಿಕೆಯನ್ನು ಅಮೂರ್ತದಿಂದ ಮೂರ್ತೀಕರಿಸುವ ಪ್ರಕ್ರಿಯೆಯಾಗಿದೆ.

ಈ ಪ್ರಕ್ರಿಯೆಗೆ ಮಗುವಿನಿಂದ ನಿರೀಕ್ಷಿಸುವ ಎಲ್ಲ ಮನಸ್ಸುಗಳು ಹೊಣೆಗಾರರು. ಈ ಕಾರ್ಯ ತರಗತಿ ಪ್ರಕ್ರಿಯೆಗೆ ಸೀಮಿತವಾಗದಂತೆ ನೋಡಿಕೊಳ್ಳಬೇಕಿದೆ. ಇದು ಪಠ್ಯಾಂತರ್ಗತ ತರಗತಿ ಸಮನ್ವಯೀಕರಣ ಹೊಂದಿದ 'ಕ್ರಿಯಾಶೀಲತೆ'. ಕಳೆದುಕೊಂಡಿದ್ದನ್ನು ಎಲ್ಲಿ ಕಳೆದುಕೊಂಡಿದ್ದೇವೋ ಅಲ್ಲಿಯೇ ಹುಡುಕುವ ಶೋಧನೆ. ಅಲ್ಲಿಯೇ ವಿನಿಯೋಗಿಸುವ ಹೃದಯ. ಈ ಆಶಯಕ್ಕೆ ನಾವೆಲ್ಲರೂ ಭಾಗಿದಾರರಾಗೋಣ. ಇಲ್ಲಿ ನೀಡಿರುವ ಪ್ರಸ್ತುತ ಸಾಹಿತ್ಯದ ವಿಸ್ತೃತ ಉದ್ದೇಶಗಳು ಈ ಕೆಳಗಿನಂತಿವೆ.

1. ಸಮಾಜವಿಜ್ಞಾನ ವಿಷಯವನ್ನು ಆಸಕ್ತಿ, ಅಭಿರುಚಿ, ತಾದಾತ್ಮ್ಯದಿಂದ ಓದುವ ಪರಿಷ್ಕೃತ ವಿಧಾನಗಳನ್ನು ಅನ್ವೇಷಿಸುವುದು.
2. ಸಮಾಜವಿಜ್ಞಾನ ಕಲಿಕೆಯೊಂದಿಗೆ ಸಾಮಾಜೀಕರಣ, ಮನೋ–ಸಾಮಾಜಿಕ ಮೌಲ್ಯ, ಸಾಂವಿಧಾನಿಕ ಮೌಲ್ಯ, ನೆಲಮೂಲ ಸಂಸ್ಕೃತಿಯ ಶೋಧದಿಂದ ಇತಿಹಾಸ, ಭೌಗೋಳಿಕತೆಯನ್ನು ಅರಿಯುವುದು.
3. ನಮ್ಮ ಸುತ್ತಮುತ್ತಲಿನ ಸಂಗತಿಗಳು ನಾಳೆ ಇತಿಹಾಸದಲ್ಲಿ ಗರ್ಭೀಕರಿಸುವುದರಿಂದ ವರ್ತಮಾನವನ್ನು ನಿರಂತರವಾಗಿಸುವುದರ ಮೂಲಕ ನಾವು ನಮ್ಮ ಮಕ್ಕಳು ಮೊದಲು ನನ್ನೂರಿನ ಭೌಗೋಳಿಕತೆ, ಇತಿಹಾಸ, ಸಾಮಾಜಿಕ ಸಂರಚನೆ, ಮೌಲ್ಯ, ಸಂಸ್ಕೃತಿ, ಜನಪದೀಯ ನೆಲೆಗಳು, ಪ್ರಜಾಪ್ರಭುತ್ವದ ಮೌಲ್ಯ, ಆಚಾರ–ವಿಚಾರ, ರೂಢಿ ಸಂಪ್ರದಾಯ ನನ್ನ ಕುಟುಂಬದ ಆರ್ಥಿಕತೆ, ವ್ಯಾವಹಾರಿಕತೆಯನ್ನು ಅರ್ಥೈಸಿಕೊಳ್ಳುವುದರ ಮೂಲಕ ಸಮಾಜ ವಿಜ್ಞಾನವನ್ನು ಆಪ್ತಗೊಳಿಸುವುದು.
4. ಸಮಾಜವಿಜ್ಞಾನ ವಿಷಯದ ಪರಿಕಲ್ಪನೆಗಳು ನೈಜ ಬದುಕಿನ ವಾಸ್ತವಿಕ ಸಂಗತಿಗಳ ಸಮನ್ವಯಿಕರಣದಿಂದ ಆಧಾರಗಳು, ನಿಜಜೀವನದ ವಿದ್ಯಾಮಾನಗಳಿಂದ ಭೌಗೋಳಿಕ ಪರಿಕಲ್ಪನೆಗಳು ಸರಳವಾಗಿ ಕಲಿಕೆಯಾಗುವುದನ್ನು ಚಟುವಟಿಕೆಯ ಮೂಲಕ ಪ್ರಾಯೋಗಿಕ ಬೋಧನಾ ವಿಧಾನವನ್ನು ಉಜ್ಜೀವನಗೊಳಿಸುವುದು.
5. ವಯೋಮಾನಕ್ಕೆ ತಕ್ಕಂತೆ ಕಲಿಕಾನುಭವ ಹೊಂದಬೇಕಾದ ಮಗು ಹಲವು ಕಾರಣಗಳಿಂದ ಪೂರ್ವಜ್ಞಾನ, ಮೂಲಸಾಮರ್ಥ್ಯ, ಕಲಿಕಾ ನಿರಂತರತೆಗಳ ಪೂರ್ವಾನುಭವಗಳ ಕೊರತೆಯನ್ನು ಕಂಡುಕೊಂಡು ಮಗುವನ್ನು ಜ್ಞಾನ ಸಮಕಾಲೀನನನ್ನಾಗಿಸುವುದು.
6. ಸಮಾಜವಿಜ್ಞಾನದ ಕಲಿಕೆಯಿಂದ ನೆಲಮೂಲದ ಸಂಸ್ಕೃತಿ ಪರಂಪರೆ; ರೂಢಿ ಸಂಪ್ರದಾಯ ಅಚಾರ–ವಿಚಾರಗಳನ್ನು ಅರ್ಥೈಸಿಕೊಂಡು ಭಾರತದ ವೈವಿಧ್ಯತೆಯ ಕುರಿತು ಹೆಮ್ಮೆಪಡುವುದು.
7. ಕಲಿಕೆಯನ್ನು ಕೃತಕ ಪ್ರಕ್ರಿಯೆಯಾಗಿಸುವ ಬದಲು ವಿವಿಧ ಚಟುವಟಿಕೆಗಳು, ನಾಟಕ, ಹಾಡು, ನೃತ್ಯ, ಪ್ರಾದೇಶಿಕ ಕಲೆ, ಹತ್ತು ಹಲವು ಚಟುವಟಿಕೆಗಳ ಮೂಲಕ ಸಮಾಜವಿಜ್ಞಾನ ಕಲಿಕೆಯನ್ನು ಆಸಕ್ತಿದಾಯಕವಾಗಿಸುವುದು.
8. ಭಾರತದ ಇತಿಹಾಸ, ಭೌಗೋಳಿಕತೆ, ಸಾಮಾಜಿಕತೆ, ಆರ್ಥಿಕತೆ, ವ್ಯವಹಾರಿಕ ಪ್ರಜ್ಞೆಗಳನ್ನು ಸಮೂಲವಾಗಿ ಅರ್ಥೈಸಿಕೊಂಡು ಗೌರವಾದರ, ಹೆಮ್ಮೆಯನ್ನು ಹೊಂದುವುದು.

## ನಿಖರ ಉದ್ದೇಶಗಳು

* ಕೋವಿಡ್–19ರ ಸನ್ನಿವೇಶದಲ್ಲಿ ಉಂಟಾದ ಕಲಿಕಾ ಅಂತರವನ್ನು ಸುಗಮಗೊಳಿಸಲು ಬುನಾದಿ ಕಲಿಕಾ ಸಾಮರ್ಥ್ಯ ಮತ್ತು ಹಿಂದಿನ ಎರಡು ವರ್ಷಗಳಲ್ಲಿ ಮಗು ಕಲಿಯಲೇಬೇಕಾದ ಪರಿಕಲ್ಪನೆಗಳನ್ನು ಸಮನ್ವಯಗೊಳಿಸಿ ಪ್ರಸ್ತುತ ಕಲಿಕಾ ವರ್ಷದ ಕಲಿಕಾ ಫಲಗಳನ್ನು ಮಗು ಸರಳವಾಗಿ ಕಲಿಯಲು ಅನುಕೂಲಿಸುವುದು.
* ಕಲಿಕಾ ಚೇತರಿಕೆಯನ್ನು ಕೇವಲ ವಿದ್ಯಾರ್ಥಿ ಚಟುವಟಿಕೆಗೆ ಸೀಮಿತಗೊಳಿಸದೆ ಮಗುವಿನ ಕಲಿಕಾ ನಿರಂತರತೆಗೆ, ಅನ್ವೇಷಣೆ, ಚೈತನ್ಯದಾಯಕ ಕಲಿಕೆ ಮತ್ತು ಕಲಿಕೆಯ ಹೊಸ ಮಾರ್ಗದ ಅನ್ವೇಷಣೆಗೆ ಪ್ರೇರಕವಾಗಿಸುವುದು.

## 2. ಕಲಿಕಾ ಚೇತರಿಕೆ ಹೀಗಾಗಬಾರದು – ಹೀಗಾಗಬೇಕು

ಯಾವುದೇ ಯೋಜನೆಯ ಕಾರ್ಯಾನುಷ್ಠಾನದಲ್ಲಿ ಹಲವು ಇತಿಮಿತಿಗಳಿರುವುದು ಸಹಜ. ಅಲ್ಲಿನ ಮಿತಿಗಳನ್ನೇ ಮುಂದಿರಿಸಿಕೊಂಡು ಟೀಕಿಸುವ ಪ್ರವೃತ್ತಿಯನ್ನೂ ನಾವು ಕಂಡಿರುತ್ತೇವೆ. ಸಮಸ್ಯೆಗಳ ಸುಳಿಯಿಂದ ಹೊರಬರಲು ರೂಪಿಸಿದ ಯೋಜನೆಗೆ ಧನಾತ್ಮಕ ಮನಸುಗಳು ಬೇಕು. ಅದು ತಾವೇ ಆಗಿರುತ್ತೀರಿ.

### "ಕಲಿಕಾ ಚೇತರಿಕೆ" ಹೀಗಾಗಬಾರದು !

1. ಇದು ಕೇವಲ ಕಾರ್ಯಕ್ರಮವಲ್ಲ. ದಾಖಲೆ ಮಾಡುವ ದಾಖಲೆಗಳಲ್ಲ. ಈ ಪ್ರಕ್ರಿಯೆಯ ಬಗ್ಗೆ ವಿವರಣೆ ನೀಡಿ ಮಕ್ಕಳೇ ನಿರ್ವಹಿಸುತ್ತಾರೆ ಎಂದು ಭ್ರಮಿಸುವಂತಿಲ್ಲ.
2. ಕಲಿಕಾಹಾಳೆ ಮಗುವಿನ ಮನೆಗೆಲಸವಲ್ಲ. ಮಗು ಅವುಗಳನ್ನು ಬರೆದು ಮುಗಿಸುವಷ್ಟಕ್ಕೆ ಸೀಮಿತವಲ್ಲ.
3. 'ಕಲಿಕಾಚೇತರಿಕೆ'ಯು ಯಾವ ಸಾಂಪ್ರದಾಯಿಕ ಬೋಧನಾ ವಿಧಾನದಿಂದಲೂ ನಿರೀಕ್ಷಿತ ಫಲ ನೀಡುವುದಿಲ್ಲ.
4. ಈ ಪ್ರಕ್ರಿಯೆಗೆ ಮಗು ಮಾತ್ರ ಹೊಣೆಗಾರನಲ್ಲ.
5. ಮಗುವಿನ ಕಲಿಕಾ ಪರೀಕ್ಷೆಗಷ್ಟೇ ಕಲಿಕಾ ಹಾಳೆಗಳನ್ನು ಬಳಸುವಂತಿಲ್ಲ.

### ಹೀಗಾದರೆ ಉತ್ತಮ

1. ಕಲಿಕೆಯ ಸಾಧನ ತಂತ್ರಗಳನ್ನು ಉತ್ತೇಜಿಸೋಣ.
2. ಓದು, ಬರಹ, ಮೌಖಿಕ ಅಭಿವ್ಯಕ್ತಿ ಸುಲಲಿತವಾಗಿರುವಂತೆ ಯೋಜಿಸೋಣ.
3. ಕಲಿಕಾ ಹಾಳೆಗಳನ್ನು ನೀಡುವ ಮೊದಲು ಪರಿಕಲ್ಪನೆಗಳನ್ನು ಮಗುವಿನ ಸ್ವ–ಅನುಭವ, ಪೂರ್ವಾನುಭವ, ಸ್ಥಳೀಯ ಸನ್ನಿವೇಶ, ಆಕರಗಳಿಂದ ವಿವರಿಸೋಣ.
4. ಕಲಿಕೆ ಪೂರ್ವಜ್ಞಾನ ಮತ್ತು ವರ್ತಮಾನದ ಅನುಭವಗಳನ್ನು ಸಮನ್ವಯಿಸೋಣ.
5. ಆಟ–ಸ್ಪರ್ಧೆ, ಮೌಖಿಕಾಭಿವ್ಯಕ್ತಿ, ಸ್ಥಳ ಭೇಟಿ, ಸನ್ನಿವೇಶ ನಿರ್ಮಾಣ, ನಿರೂಪಣೆ, ಕಿರುನಾಟಕ, ಪಾತ್ರಾಭಿನಯ, ಸಂದರ್ಶನ ಮೊದಲಾದ ವಿಧಾನಗಳನ್ನು ಬಳಸಿ ಪರಿಕಲ್ಪನೆಯ ಪ್ರತ್ಯಕ್ಷಾನುಭವ ಒದಗುವಂತೆ ಅವಕಾಶ ಕಲ್ಪಿಸೋಣ.

### ತರಗತಿ ಸಮನ್ವಯೀಕರಣ

* ಮಗು ಈ ವರ್ಷ ಕಲಿಯುತ್ತಿರುವ ಕಲಿಕಾಂಶಗಳು ಹಿಂದಿನ ವರ್ಷಗಳ ಕಲಿಕಾನುಭವವನ್ನು ಆಧರಿಸಿದ್ದು, ಬುನಾದಿ ಸಾಮರ್ಥ್ಯಗಳ ಆಧಾರದ ಮೇಲೆ ಪ್ರತಿವರ್ಷದ ಕಲಿಕಾಫಲ ರೂಪಿಸಲ್ಪಟ್ಟಿದೆ. ಈ ಸರಣಿ ಸ್ವರೂಪದ ಕಲಿಕಾ ಪ್ರಕ್ರಿಯೆ ಸುಗಮಗೊಳ್ಳಲು, ಪರಿಕಲ್ಪನೆಯ ಹಿನ್ನೆಲೆ–ಮುನ್ನೆಲೆಗಳನ್ನು ಅರ್ಥೈಸಿಕೊಳ್ಳಬೇಕು. ಈ ಪ್ರಕ್ರಿಯೆಯು ಎರಡು ರೀತಿಗಳಲ್ಲಿ ತರಗತಿಯಲ್ಲಿ ಸಮನ್ವಯೀಕರಣಗೊಳ್ಳುವ ಸಾಧ್ಯತೆಯಿದೆ.

1. ಪ್ರಧಾನ ಪ್ರಾಶಸ್ತ್ಯ ವಿಧಾನ: ಕಲಿಕಾ ಚೇತರಿಕೆ ಕಾರ್ಯಯೋಜನೆಯ ನಿಗದಿತ ಅವಧಿಗಳಲ್ಲಿ ಬುನಾದಿ ಸಾಮರ್ಥ್ಯಗಳನ್ನಾಧರಿಸಿದ ಆಯ್ದ ಕಲಿಕಾಂಶಗಳಿಗೆ ಪ್ರಧಾನ ಪ್ರಾಶಸ್ತ್ಯ ನೀಡಿ ಕಲಿಸುವುದು ಮತ್ತು ಮೌಲ್ಯಾಂಕನ ಮಾಡುವುದು.
2. ಪರೋಕ್ಷ ಪ್ರಾಶಸ್ತ್ಯ ವಿಧಾನ: ಪಠ್ಯಕಲಿಕೆಯ ಸಂದರ್ಭದಲ್ಲಿ ಒಂದು ಅವಧಿಯನ್ನು ಬುನಾಧಿ ಸಾಮರ್ಥ್ಯ ಕಲಿಕೆಯ ನಂತರ ಪಾಠ ನಿರ್ವಹಿಸಿ ಪ್ರಸ್ತುತ ವರ್ಷದ ಕಲಿಕಾ ಫಲಗಳಿಗೆ ಅಗತ್ಯ ಪಾಠಗಳನ್ನು ನಿರ್ವಹಿಸಿ ಘಟಕ ಪರೀಕ್ಷೆಯ ಮೂಲಕ ಮೌಲ್ಯಮಾಪನ ನಡೆಸುವುದು.

### ಸುಗಮಕಾರರ ಸಿದ್ಧತೆ

* ಆಯೋಜಿಸುವ ಕಲಿಕಾ ಚಟುವಟಿಕೆ ಮತ್ತು ಅದರ ಯೋಜನೆ.
* ಆಕರಗಳು, ಕಲಿಕೋಪಕರಣಗಳ ಸಿದ್ಧತೆ.
* ಚಟುವಟಿಕೆಯ ಮೂಲಕ ಪರಿಕಲ್ಪನೆಯ ದೃಷ್ಟಾಂತೀಕರಣ. ಪ್ರತ್ಯಕ್ಷಾನುಭವಕ್ಕೆ ಮಕ್ಕಳಿಗೆ ಪ್ರೇರಣೆ.
* ಪರಿಕಲ್ಪನೆಯ ವಿಸ್ತರಣೆ, ವರ್ತಮಾನದ ಕಲಿಕಾಂಶದ ಸಮನ್ವಯೀಕರಣ.
* ಕಲಿಕಾ ಹಾಳೆಗಳನ್ನು ಪೂರ್ಣಗೊಳಿಸಲು ಅನುಕೂಲಿಸುವುದು.

* ವಿದ್ಯಾರ್ಥಿ ಕಲಿಕಾ ಪ್ರಗತಿ ಅವಲೋಕನ. ನಾಲ್ಕನೆಯ ಸ್ತರ ತಲುಪಲು ಸಹಾಯ.
* ಶಿಕ್ಷಕರ ಹಿಮ್ಮಾಹಿತಿ ನಮೂದಿಸುವುದು.
* ಕಲಿಕಾ ಹಾಳೆಯ ಪ್ರಗತಿಯಿಂದ ಮೌಲ್ಯಾಂಕನ–ಪುನರಾವಲೋಕನ ಚಟುವಟಿಕೆ.

### ಕಲಿಕಾ ಅವಧಿ ನಿರ್ಧಾರ

ತಾವು ಕಲಿಕಾರ್ಥಿಗಳ ವೈಯಕ್ತಿಕ ಭಿನ್ನತೆಗಳನ್ನು ಗಮನದಲ್ಲಿಟ್ಟುಕೊಂಡು ಕಲಿಕಾವಧಿ ನಿರ್ಧರಿಸಿರಿ. ಪ್ರಾದೇಶಿಕ ಭಿನ್ನತೆ, ಕಲಿಕಾಮಟ್ಟ, ವಿದ್ಯಾರ್ಥಿಗಳ ಕಲಿಕಾ ಪರಿಸರ ಮೊದಲಾದ ಅಂಶಗಳು ಅವಧಿ ನಿರ್ಧಾರದ ಮಾನಕಗಳಾಗಿರುತ್ತವೆ.

### ಮೌಲ್ಯಾಂಕನ

ಪ್ರತ್ಯೇಕವಾದ ಸುತ್ತೋಲೆ ಇಲಾಖೆಯಿಂದ ನೀಡಲಾಗುವುದು. ಆದಾಗ್ಯೂ ಕಲಿಕಾ ಹಾಳೆಗಳಲ್ಲಿನ ಚಟುವಟಿಕೆಗಳನ್ನು ವಿದ್ಯಾರ್ಥಿಗಳು ಮಾಡುತ್ತಾ ತೆರಳುವಾಗ ಅವಲೋಕಿಸಿದ ದತ್ತಾಂಶಗಳನ್ನು ತಾವು ಸಂಗ್ರಹಿಸಬಹುದಾಗಿರುತ್ತದೆ.

ನಾಲ್ಕು ಸ್ತರಗಳಲ್ಲಿ ವಿದ್ಯಾರ್ಥಿಯ ಪ್ರಗತಿ ನಿರೀಕ್ಷಿಲಾಗಿದೆ. ಅದಕ್ಕಾಗಿ ವಿದ್ಯಾರ್ಥಿ ಸ್ವಾವಲೋಕನ ನಮೂನೆಯನ್ನು ಕಲಿಕಾ ಹಾಳೆಯ ಪುಸ್ತಕದಲ್ಲಿ ನೀಡಲಾಗಿದೆ. ನಾಲ್ಕು ಸ್ತರಗಳು ಹೀಗಿವೆ.

### ಅಪೇಕ್ಷಿತ ಕಲಿಕಾ ಫಲ :

| ಮುಕ್ತಾಯವಾದ ಕಲಿಕಾಂಶ (ವಿದ್ಯಾರ್ಥಿಗಳು ಬರೆಯುತ್ತಾರೆ) | ತಿಳಿದಿರುತ್ತಾರೆ. (ಶೇ 30 – 49) | ಅರ್ಥೈಸಿ ಕೊಂಡಿರುತ್ತಾರೆ (ಶೇ 50 – 60) | ಅರ್ಥೈಸಿಕೊಂಡ ಅಂಶಗಳನ್ನು ಸಹಪಾಠಿಗಳೊಂದಿಗೆ ಹಂಚಿಕೊಂಡು ಕಲಿಸುತ್ತಾರೆ (ಶೇ 61 – 90) | ಇದಕ್ಕೆ ಸಂಬಂಧಿಸಿದ ಇತರೆ ಅಂಶಗಳನ್ನು ಸ್ವತಃ ಹೇಳುತ್ತೇನೆ (ಶೇ 91 –100) |
|---|---|---|---|---|
| | | | | |
| | | | | |
| | | | | |

### ಮೌಲ್ಯಮಾಪನಕ್ಕೆ ಮುನ್ನ...

| ಸಾಮರ್ಥ್ಯದ ಹಂತ | ವಿವರಣೆ |
|---|---|
| 1. ತಿಳಿದಿರುತ್ತೇನೆ | ಕಲಿಕಾಫಲ ಒಳಗೊಳ್ಳುವ ಅಂಶಗಳು ಸಾಧಿಸಿಲ್ಲ/ ಸೀಮಿತವಾದ ಅಂಶಗಳು ಮಾತ್ರ ಪರಿಚಯವಿದೆ/ ಶಿಕ್ಷಕರ ಸಂಪೂರ್ಣ, ನಿರಂತರ ಬೆಂಬಲದ ಅವಶ್ಯಕತೆ ಇದೆ. |
| 2. ಅರ್ಥೈಸಿಕೊಂಡಿರುತ್ತೇನೆ | ಕಲಿಕಾಫಲದ ಕೆಲವು ಅಂಶಗಳ ಸ್ಪಷ್ಟತೆ ಇದೆ/ ಕೆಲವುದರಲ್ಲಿ ಸ್ಪಷ್ಟತೆಯ ಅವಕಾಶವಿದೆ/<br>ಶಿಕ್ಷಕರ, ಸ್ನೇಹಿತರ ಭಾಗಶಃ ಬೆಂಬಲದ ಅವಶ್ಯಕತೆ ಇದೆ |
| 3. ಅರ್ಥೈಸಿಕೊಂಡಿರುವ ಅಂಶಗಳನ್ನು ಸಹಪಾಠಿಗಳೊಂದಿಗೆ ಹಂಚಿಕೊಳ್ಳುತ್ತೇನೆ | ಕಲಿಕಾಫಲದ ಎಲ್ಲಾ ಅಂಶಗಳ ನಿರೀಕ್ಷಿತ ಸ್ಪಷ್ಟತೆ ಇದೆ/ ಕಲಿತದ್ದನ್ನು ತನ್ನ ಸ್ನೇಹಿತರೊಂದಿಗೆ ಹಂಚಿಕೊಳ್ಳುತ್ತಾರೆ/ ಶಿಕ್ಷಕರು ಮಗುವಿಗೆ ಕಲಿಕಾಂಶಗಳಾಧಾರಿತ ಸವಾಲಿನ ಕಾರ್ಯಗಳನ್ನು ನೀಡುವ ಅವಶ್ಯಕತೆಯಿದೆ. |
| 4. ಇದಕ್ಕೆ ಸಂಬಂಧಿಸಿದ ಇತರೆ ಅಂಶಗಳನ್ನು ಸ್ವತಃ ಹೇಳುತ್ತೇನೆ | ಕಲಿಕಾಫಲದ ಅಂಶಗಳ ಸ್ಥಿರವಾದ ಸ್ಪಷ್ಟತೆ ಇದೆ/ಮೀರಿದ ಸ್ಪಷ್ಟತೆಯಿದೆ/ ಶಿಕ್ಷಕರು ಮಗುವಿನ ಮೂಲಕ ಧನಾತ್ಮಕತೆಯನ್ನು ತರಗತಿಗೆ ವಿಸ್ತರಿಸುವ ಸಂಪೂರ್ಣ ಅವಕಾಶವಿದೆ. |

**ಉದಾಹರಣೆ:**

**ಕಲಿಕಾಫಲ: ಇತಿಹಾಸದ ಮೂಲಾಧಾರಗಳ ಬಗ್ಗೆ ಅರಿಯುವರು.**

* ಇತಿಹಾಸದ ರಚನೆಗೆ ಅಗತ್ಯವಾದ ಮೂಲಾಧಾರಗಳ ಬಗೆಗಳನ್ನು ತಿಳಿಯುತ್ತಾರೆ.
* ಇತಿಹಾಸದ ಮೂಲಾಧಾರಗಳ ಸಂರಕ್ಷಣೆಯ ಮನೋಭಾವವನ್ನು ಬೆಳೆಸಿಕೊಳ್ಳುವರು.

ಮೇಲಿನ ಎರಡು ಮುಖ್ಯ ಉದ್ದೇಶಗಳನ್ನು ಪೂರೈಸಲು ಮಗುವು ಚಟುವಟಿಕೆಯನ್ನು ಅರ್ಥಬದ್ಧವಾಗಿ ಪೂರ್ಣಗೊಳಿಸುವುದು ಅಗತ್ಯವಾಗಿದೆ. ಇಲ್ಲಿ ನೀಡಿರುವ ಕಲಿಕಾಹಾಳೆಗಳಲ್ಲಿ ನೀಡಿರುವ ಚಟುವಟಿಕೆಗಳ ಅಂಶಗಳೇ ಅಂತಿಮವಲ್ಲ. ಮಗುವನ್ನು ಕಲಿಕಾಫಲದ ಹಿನ್ನೆಲೆಯಲ್ಲಿ ಸಮಗ್ರವಾಗಿ ನೋಡಿಕೊಂಡು ಮಗುವಿನ ಕಲಿಕಾ ಮಟ್ಟ ಗುರುತಿಸಿಕೊಳ್ಳುವುದಾಗಿದೆ.

| ಮುಕ್ತಾಯವಾದ ಕಲಿಕಾಂಶ | ಸಾಮರ್ಥ್ಯದ ಹಂತ | ಇತಿಹಾಸದ ಮೂಲಾಧಾರಗಳ ಬಗ್ಗೆ ಅರಿಯುವರು. |
|---|---|---|
| **ತಿಳಿದಿರುತ್ತೇನೆ** | **L1** | ಮಗುವು ಕೆಲವೇ ಕೆಲವು ಆಧಾರಗಳ ಬಗೆಗಳನ್ನು ಗುರುತಿಸಿದರೆ/ ಯಾವುದೇ ಆಧಾರಗಳನ್ನು ತಿಳಿಯದಿದ್ದರೆ, ಗುರುತಿಸದಿದ್ದರೆ. ಚಿತ್ರಗಳನ್ನು ಕಲ್ಲು, ದೇವಸ್ಥಾನ ಎಂದು ಮಾತ್ರ ಗುರುತಿಸಿ ಹೇಳುತ್ತದೆ. |
| **ಅರ್ಥೈಸಿಕೊಂಡಿರುತ್ತೇನೆ** | **L2** | ಮಗುವು ಮೂಲಾಧಾರಗಳನ್ನು ಗುರುತಿಸುತ್ತದೆ, ಕೆಲವೊಮ್ಮೆ ಗೊಂದಲಗಳಿರುವಂತೆ ಕಾಣುವುದು. ಸಂರಕ್ಷಣೆಯ ಕುರಿತು ಲಘುವಾದ ಅಭಿಪ್ರಾಯ ವ್ಯಕ್ತಪಡಿಸಿದರೆ. |
| **ಅರ್ಥೈಸಿಕೊಂಡಿರುವ ಅಂಶಗಳನ್ನು ಸಹಪಾಠಿಗಳೊಂದಿಗೆ ಹಂಚಿಕೊಳ್ಳುತ್ತೇನೆ** | **L3** | ಮಗುವು ಮೂಲಾಧಾರಗಳನ್ನು ಗುರುತಿಸಿ, ಇತಿಹಾಸದ ರಚನೆಯಲ್ಲಿ ಮೂಲಾಧಾರಗಳ ಮಹತ್ವವನ್ನು ತಿಳಿಯುತ್ತದೆ. ಸಂರಕ್ಷಣೆಗೆ ಸಂಬಂಧಿಸಿದ ಸಮಂಜಸ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ತನ್ನ ಸಹಪಾಠಿಗಳೊಂದಿಗೆ ಕಲಿಕಾಂಶಗಳನ್ನು ಹಂಚಿಕೊಳ್ಳುತ್ತದೆ. |
| **ಇದಕ್ಕೆ ಸಂಬಂಧಿಸಿದ ಇತರೆ ಅಂಶಗಳನ್ನು ಸ್ವತಃ ಹೇಳುತ್ತೇನೆ** | **L4** | ಮಗುವು ಇತಿಹಾಸದ ರಚನೆಯಲ್ಲಿ ಮೂಲಾಧಾರಗಳ ಮಹತ್ವವನ್ನು ತಿಳಿಯುತ್ತದೆ. ಮೂಲಾಧಾರಗಳನ್ನು ಉಳಿಸುವ ವಿಶಾಲ ಮನೋಭಾವವನ್ನು ತಳೆಯುತ್ತದೆ. ಅದರ ಸಂರಕ್ಷಣೆಗೆ ತಾನು ಮಾಡಬಹುದಾದ ಸಣ್ಣ ಕಾರ್ಯಗಳನ್ನು ವ್ಯಕ್ತಪಡಿಸುತ್ತದೆ. ಅವಕಾಶ ಸಿಕ್ಕಾಗ ತನ್ನ ಸುತ್ತಲಿನವರಿಗೆ ಸಂರಕ್ಷಣೆಯ ಮಹತ್ವವನ್ನು ತಿಳಿಸಿ ಅವರನ್ನು ಪ್ರೇರೇಪಿಸುತ್ತದೆ. |

ಸುಗಮಕಾರರಿಗೆ ಸೂಚನೆ: ಕಲಿಕಾ ಫಲಗಳನ್ನು ಸಂಪೂರ್ಣವಾಗಿ ಸಾಧಿಸಲು, ನೀಡಿರುವ ಕಲಿಕಾ ಹಾಳೆಗಳು ಒಂದು ಚಿಕ್ಕ ಸಾಧನ ಅಷ್ಟೇ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಕೆಲವೊಮ್ಮೆ ಈ ಕಲಿಕಾ ಹಾಳೆಗಳು ಕಲಿಕಾಫಲದ ಕೆಲವು ಅಂಶಗಳನ್ನು ಮಾತ್ರ ಸಾಧಿಸಲು ನೆರವಾಗಬಹುದು. ಸುಗಮಕಾರರು ಸಮಗ್ರವಾಗಿ ಕಲಿಕಾ ಫಲಗಳನ್ನು ಮಕ್ಕಳು ಸಾಧಿಸಲು ಇನ್ನೂ ಹೆಚ್ಚಿನ, ವಿಭಿನ್ನವಾದ ಚಟುವಟಿಕೆಗಳನ್ನು ಸ್ವತಂತ್ರವಾಗಿ ಕೈಗೊಳ್ಳುವುದು ಅತಿ ಮುಖ್ಯ. ಅಲ್ಲದೇ ತರಗತಿಯಾಚೆಗೂ ಕೂಡ ಮಕ್ಕಳಿಗೆ ಕಲಿಕಾಫಲದ ಈಡೇರಿಕೆಗೆ ಅವಕಾಶವಿರುವುದು ಸುಗಮಕಾರರ ಗಮನದಲ್ಲಿರುವುದು ಅಗತ್ಯ.

ಈ ಮೌಲ್ಯಮಾಪನವು ಖಡಾಖಂಡಿತವಾಗಿ ಮಕ್ಕಳನ್ನು ಗ್ರೇಡ್ ಮಾಡಲು ಅಥವಾ ಅವರನ್ನು ವಿಭಾಗಿಸಲು ಅಲ್ಲ. ಬದಲಾಗಿ ಸುಗಮಕಾರರು ಮಕ್ಕಳ ಕಲಿಕಾ ಮಟ್ಟವನ್ನು ನಿರ್ದಿಷ್ಟವಾಗಿ ಗುರುತಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆ. ಬಹಳ ಮುಖ್ಯವಾಗಿ ಮಕ್ಕಳ ಕಲಿಕಾಮಟ್ಟವನ್ನು ತಿಳಿದ ನಂತರ ಸುಗಮಕಾರರು ಮಕ್ಕಳನ್ನು ಮುಂದಿನ ಕಲಿಕಾ ಹಂತಕ್ಕೆ ತೆಗೆದುಕೊಂಡು ಹೋಗಲು ನೆರವಾಗುವ ಮೂಲ ಉದ್ದೇಶದೊಂದಿಗೆ ರಚಿಸಲಾಗಿದೆ.

## ಕಲಿಕಾಂಶ–1.1 ಇತಿಹಾಸದ ಆಧಾರಗಳು

**ಕಲಿಕಾ ಫಲ: ಇತಿಹಾಸದ ಮೂಲಾಧಾರಗಳನ್ನು ತಿಳಿದುಕೊಳ್ಳುವರು**

**ಉದ್ದೇಶ:**

- ಇತಿಹಾಸ ರಚನೆಗೆ ಮೂಲಾಧಾರಗಳ ಅವಶ್ಯಕತೆಯನ್ನು ಅವುಗಳನ್ನು ಸಂರಕ್ಷಿಸುವಂತಾಗುತ್ತಾರೆ.
- ಮೂಲಾಧಾರಗಳ ಸಂರಕ್ಷಣೆಯ ಮಹತ್ವವನ್ನು ತಿಳಿಸುವುದು.

**ಕಲಿಕಾ ಸಾಮಾಗ್ರಿಗಳು:** ಆಧಾರಗಳ ಚಿತ್ರಗಳು–ಶಾಸನ, ನಾಣ್ಯಗಳು, ಪುಸ್ತಕಗಳು, ಭೂ ಉತ್ಖನನದ ಚಿತ್ರಗಳು, ನಕ್ಷೆಗಳು

**ಕಲಿಕಾ ಪ್ರಕ್ರಿಯೆ:** ಸುಗಮಕಾರರು ಆರಂಭದಲ್ಲಿ ಆಧಾರಗಳ ಬಗ್ಗೆ ಮಕ್ಕಳ ಪೂರ್ವಜ್ಞಾನವನ್ನು ತಿಳಿದುಕೊಂಡು, ತಮ್ಮ ಶಾಲೆಯ ಮುಖ್ಯ ಶಿಕ್ಷಕರು ಅಥವಾ ಊರಿನ ಹಿರಿಯರೊಂದಿಗೆ ಚರ್ಚೆ ಮಾಡಲು ಅವಕಾಶ ನೀಡಿ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳುವ ಅವಕಾಶ ನೀಡಬೇಕು. ಮತ್ತು ಅಗತ್ಯವಿದ್ದಲ್ಲಿ ತಾವೇ ಮಾಹಿತಿಯನ್ನು ಒದಗಿಸಿಕೊಡಿ. ನಂತರ ತಾವು ಮಕ್ಕಳಿಗೆ ಮಾರ್ಗದರ್ಶನ ಮಾಡಬೇಕು. ಕಲಿಕಾ ಹಾಳೆಯ ಚಟುವಟಿಕೆಗಳನ್ನು ಸ್ವತಃ ಮಕ್ಕಳಿಂದಲೇ ಮಾಡಿಸುವುದು, ಅಗತ್ಯವಿದ್ದಲ್ಲಿ ಮಾಹಿತಿ ಸಂಗ್ರಹಣೆ, ಸಂದರ್ಶನಗಳಿಗೆ ಅವಕಾಶ ಮಾಡಿಕೊಡುವುದು.

### ಕಲಿಕಾ ಹಾಳೆ–1

ಚಟುವಟಿಕೆ:1 ನನ್ನ ಶಾಲೆಯ ಬಗ್ಗೆ ನನಗೆಷ್ಟು ಗೊತ್ತು?
ಚಟುವಟಿಕೆ:2 ಶಾಲೆಯ ಇತಿಹಾಸದ ಮೂಲಗಳನ್ನು ಹುಡುಕೋಣ?
ಚಟುವಟಿಕೆ:3 ಶಾಲೆಯ ಇತಿಹಾಸದ ಮೇಲೆ ಚರ್ಚಿಸೋಣ.
ಚಟುವಟಿಕೆ:4 ನಿಮ್ಮ ಸುತ್ತಮುತ್ತಲಿನ ಸ್ಮಾರಕಗಳನ್ನು ಪಟ್ಟಿಮಾಡಿ.
ಚಟುವಟಿಕೆ:5 ಸ್ಮಾರಕಗಳು, ಶಾಸನಗಳು ಹಾಗೂ ಇತರೆ ಅವಶೇಷಗಳನ್ನು ನಾವೇಕೆ ರಕ್ಷಿಸಬೇಕು?

**ಗುಂಪು ಚರ್ಚೆ:** ಮಕ್ಕಳನ್ನು ಎರಡು ಅಥವಾ ಅಗತ್ಯಕ್ಕೆ ತಕ್ಕಂತೆ ಗುಂಪುಗಳಾಗಿ ಮಾಡಿ ಮೇಲಿನ 3 ಚಟುವಟಿಕೆಗಳ ಬಗ್ಗೆ ಚರ್ಚಿಸಿ ಮಂಡನೆ ಮಾಡಲು ಅವಕಾಶ ಒದಗಿಸುವುದು.

ಮಕ್ಕಳ ನಡುವಿನ ಚರ್ಚೆಯಲ್ಲಿ ಅಂಶಗಳನ್ನು ಕ್ರೋಢೀಕರಿಸಿ ಇತಿಹಾಸ ರಚನೆಯಲ್ಲಿ ದಾಖಲೆಗಳು ಹೇಗೆ ಮಹತ್ವದ ಪಾತ್ರ ವಹಿಸುತ್ತವೆ ಎಂಬುದನ್ನು ಮನದಟ್ಟು ಮಾಡಿಸಿ ಇತಿಹಾಸದ ಆಧಾರಗಳನ್ನು ಅರ್ಥಮಾಡಿಸಲು ಪ್ರಯತ್ನಿಸುವುದು.

ಮೌಲ್ಯಮಾಪನ ಚಟುವಟಿಕೆ: ಕಲಿಕಾ ಹಾಳೆ 1ರಲ್ಲಿ ಚಟುವಟಿಕೆ 3

### ಕಲಿಕಾಂಶ: 1.2 – ಕಾಲಗಣನೆ

| |
|---|
| **ಕಲಿಕಾ ಫಲ:** ಇತಿಹಾಸದ ಕಾಲಗಣನೆಯ ವಿಶೇಷತೆಯನ್ನು ಗುರುತಿಸುವರು (ದಶಕ, ಶತಮಾನ, ಸಹಸ್ರಮಾನ, ಸಾಮಾನ್ಯ ಶಕೆ ಮತ್ತು ಸಾಮಾನ್ಯ ಶಕೆ ಪೂರ್ವ) |

**ಉದ್ದೇಶ:**

- ಇತಿಹಾಸ ರಚನೆಯಲ್ಲಿ ಕಾಲಗಣನೆಯ ಮಹತ್ವ ಅರಿಯುವುದು
- ಕಾಲಾನುಕ್ರಮವು ಕ್ರಮಬದ್ಧ ಇತಿಹಾಸ ರಚನೆಗೆ ಸಹಕಾರಿ ಎಂಬುದನ್ನು ತಿಳಿಯಲು
- ಕಾಲಗಣನೆಯು ಇತಿಹಾಸದ ಮೂಲ ಆಧಾರಸ್ಥಂಭ ಎನ್ನುವುದನ್ನು ಅರಿಯುವುದು

**ಕಲಿಕಾ ಸಾಮಾಗ್ರಿಗಳು:** ಅಳತೆಪಟ್ಟಿ, ಪೆನ್ಸಿಲ್, ಹಾಳೆಗಳು, ಪ್ರಮುಖ ಘಟನೆಗಳ ಸರಣಿ ವರ್ಷಗಳ ಮಾಹಿತಿ ಹಾಳೆ

### ಕಲಿಕಾ ಹಾಳೆ–2

ಚಟುವಟಿಕೆ –1 ಶತಮಾನವನ್ನು ಅರ್ಥಮಾಡಿಕೊಳ್ಳೋಣ

**ಮೌಲ್ಯಮಾಪನ ಚಟುವಟಿಕೆ:** ಕಾಲರೇಖೆಯ ಮೇಲೆ ವರ್ಷಗಳನ್ನು ಗುರುತಿಸೋಣ.

### ಕಲಿಕಾಂಶ: 2.1 ಆರಂಭಿಕ ಸಮಾಜ

**ಉದ್ದೇಶ:**

- ಬೇಟೆಗಾರಿಕೆ ಮತ್ತು ಸಂಗ್ರಹಕಾರ ಸಮಾಜದಲ್ಲಿ ವಿಕಾಸ ಹೊಂದಿದ ಪ್ರತಿಯೊಂದು ಆಯುಧಗಳು ಮತ್ತು ಗೃಹಬಳಕೆಯ ವಸ್ತುಗಳು, ಹಣ್ಣು, ಗಿಡಮೂಲಿಕೆಗಳು ಮುಂತಾದ ಅನೇಕ ವಸ್ತುಗಳನ್ನು ನಾವು ಇಂದಿಗೂ ಕೂಡಾ ಬಳಸುತ್ತಿರುವುದು ಅವರು ಕೊಟ್ಟ ಕೊಡುಗೆ ಎಂಬುದನ್ನು ಅರಿಯುವುದು.

- ಅಂದಿನ ಜೀವನ ಕ್ರಮ ಮತ್ತು ಇಂದಿನ ಜೀವನ ಕ್ರಮದೊಂದಿಗೆ ಹೋಲಿಸಿ ನೋಡುವಂತಾಗಲು ಪ್ರೇರೆಪಿಸುವುದು.

**ಕಲಿಕಾ ಸಾಮಾಗ್ರಿಗಳು:** ಪುಸ್ತಕಗಳಿಂದ ಆರಿಸಿದ ಸಂಗ್ರಾಹಕ ಸಮಾಜದ ವಿವಿಧ ಚಿತ್ರಗಳು, ವಿಡಿಯೋ ಕ್ಲಿಪ್ ಗಳು

**ಕಲಿಕಾ ಪ್ರಕ್ರಿಯೆ:** ಸುಗಮಕಾರರು ಮಕ್ಕಳಿಗೆ, ಪ್ರಶ್ನೆಗಳನ್ನು ಕೇಳುತ್ತಾ, ಚಿತ್ರಗಳನ್ನು ತೋರಿಸುತ್ತಾ ಬೇಟೆಗಾರಿಕೆ ಮತ್ತು ಸಂಗ್ರಹಕಾರ ಜೀವನ ಶೈಲಿಯನ್ನು ಪರಿಚಯಿಸುವುದು. ಚರ್ಚೆ ಮಾಡಲು ಅವಕಾಶ ನೀಡಿ, ಅಗತ್ಯವಿದ್ದಲ್ಲಿ ತಾವೇ ಮಾಹಿತಿಯನ್ನು ಒದಗಿಸಿಕೊಡಿ. ನಂತರ ತಾವು ಮಕ್ಕಳಿಗೆ ಮಾರ್ಗದರ್ಶನ ಮಾಡುತ್ತಾ ಕಲಿಕಾ ಹಾಳೆಯ ಚಟುವಟಿಕೆಗಳನ್ನು ಸ್ವತಃ ಮಕ್ಕಳಿಂದಲೇ ಮಾಡಿಸುವುದು. ಈ ಸಮಾಜಕ್ಕೆ ಸಂಬಂಧಿಸಿದ ಯೂಟ್ಯೂಬ್ ಅನಿಮೇಟೆಡ್ ವಿಡಿಯೋಗಳನ್ನು ತೋರಿಸುವುದರಿಂದ ಮಕ್ಕಳಿಗೆ ಹೆಚ್ಚಿನ ಆಸಕ್ತಿ ಮೂಡುತ್ತದೆ. ಆದ್ದರಿಂದ ಅವುಗಳನ್ನು ಬಳಸಿಕೊಂಡು ಅರ್ಥೈಸಲು ಪ್ರಯತ್ನಸಬೇಕು

**ಕಲಿಕಾ ಹಾಳೆ-3**

ಚಟುವಟಿಕೆ-1 ಚಿತ್ರನೋಡಿ ಮಾತಾಡೋಣ

https://www.youtube.com/watch?v=jp2XZtRiWmc ವಿಡಿಯೋ

ತೋರಿಸಿ ಮಾತನಾಡಿಸುವುದು. ಇಲ್ಲಿ ಮುಖ್ಯವಾಗಿ ಚಿತ್ರದಲ್ಲಿನ ವಿವಿಧ ಕಸುಬುಗಳನ್ನು ಗುರುತಿಸುವಂತೆ ಮಾಡುವುದು. ಜನರು ತೊಟ್ಟಿರುವ ಉಡುಗೆ ತೊಡುಗೆಗಳನ್ನು ಗಮನಿಸುವುದು. ಜನರು ವಾಸವಿರುವ ಪ್ರದೇಶಗಳ ಕುರಿತು ಮಾತನಾಡುವುದು.

**ಚಟುವಟಿಕೆ:** 2 ಜೀವನ ಶೈಲಿಯನ್ನು ಅಂದು ಇಂದು ಹೋಲಿಸಿ ಬರೆಯುವಂತಾಗಲು ಪ್ರೋತ್ಸಾಹಿಸಬೇಕು.

**ಕಲಿಕಾ ಹಾಳೆ-4 ಬೇಟೆಗಾರರ ಸಮುದಾಯ**

**ಚಟುವಟಿಕೆ:** 1 ಈ ಕೆಳಗಿನ ಚಿತ್ರದಲ್ಲಿರುವ ಆಯುಧಗಳನ್ನು ಹೆಸರಿಸಿ. ಇವುಗಳನ್ನು ಯಾವುದಕ್ಕೆ ಬಳಸುತ್ತಿದ್ದರು ಬರೆಯೋಣ.

**ಚಟುವಟಿಕೆ:** 2 ಪ್ರಸ್ತುತ ಇಂತಹ ಬೇಟೆಗಾರ ಸಮುದಾಯಗಳಿವೆಯಾ? ಇರುವುದಾದರೆ ಎಲ್ಲಿ ಇವೆ? ನಿಮ್ಮ ಮನೆಯ ಸದಸ್ಯರು ಮತ್ತು ಶಿಕ್ಷಕರ ಜೊತೆ ಚರ್ಚಿಸಿ.

ಮೇಲಿನ ಎರಡು ಚಟುವಟಿಕೆಗಳು ಮುಖ್ಯವಾಗಿ ಬೇಟೆಗಾರರ ಸಮಾಜದ ಜೀವನ ತಿಳಿಸುವುದಾಗಿದೆ. ಇಂದಿನ ಕೆಲವು ಸಮಾಜಗಳು ಅವನ್ನು ಹೋಲುತ್ತವೆ, ಆ ಸಮಾಜಗಳನ್ನು ಪರಿಚಯಿಸುವ ಕೆಲಸವಾಗಬೇಕು. ಜೊತೆಗೆ ಅವರು ಇಂದು ಆಧುನಿಕ ಸಮಾಜದೊಂದಿಗೆ ಮಾಡಿಕೊಂಡಿರುವ ಬದಲಾವಣೆಗಳನ್ನು ಗುರುತಿಸಲು ನೆರವಾಗುವುದು.

**ಮೌಲ್ಯಮಾಪನ ಚಟುವಟಿಕೆ:** ಸುಗಮಕಾರರು ಚಟುವಟಿಕೆ ಹಾಳೆ 4 ನ್ನು ಮೌಲ್ಯಮಾಪನಕ್ಕಾಗಿ ಬಳಸಿಕೊಳ್ಳಬಹುದು ಅಥವಾ ತಾವೇ ಕೆಲವು ಚಿತ್ರಗಳನ್ನು ನೀಡಿ ಮೌಲ್ಯಮಾಪನ ಮಾಡಬಹುದು.

**ಕಲಿಕಾಂಶ-2.2 ಮಾನವನ ನೆಲೆಯೂರುವಿಕೆ**

**ಉದ್ದೇಶ:**

- ಮಾನವನ ನೆಲೆಯೂರುವಿಕೆಯಲ್ಲಿ ಕೃಷಿಯ ಪಾತ್ರವನ್ನು ಅರಿಯುವುದು.
- ಮಾನವನ ಕೃಷಿ ಚಟುವಟಿಕೆಗಳಿಗೆ ಸಹಕಾರಿಯಾದ ಅಂಶಗಳನ್ನು ಗುರುತಿಸುವುದು.
- ಆಧುನಿಕ ಕೃಷಿಗೂ ಮತ್ತು ಅಂದಿನ ಕೃಷಿಗೂ ಇರುವ ಭಿನ್ನತೆಯನ್ನು ಗುರುತಿಸುವುದು.

**ಕಲಿಕಾ ಪ್ರಕ್ರಿಯೆ:** ಸುಗಮಕಾರರು ಮಕ್ಕಳಿಗೆ, ಪ್ರಶ್ನೆಗಳನ್ನು ಕೇಳುತ್ತಾ, ಚಿತ್ರಗಳನ್ನು ತೋರಿಸುತ್ತಾ ಅಂದಿನ ಜೀವನ ಶೈಲಿಯನ್ನು ಪರಿಚಯಿಸುವುದು. ಕೃಷಿಯ ಹುಟ್ಟು ಹೇಗಾಯಿತು ಎಂಬ ಕುತೂಹಲ ಮೂಡಿಸುವ ಸೂಕ್ತ ಪ್ರಶ್ನೆಗಳನ್ನು ಹಾಕುವುದು. ಮಕ್ಕಳಿಗೆ ಹಿಂದಿನ ಸಮಾಜ ಹೀಗಿತ್ತು ಎಂಬ ಕಲ್ಪನೆಯನ್ನು ಮಾಡಲು ಅವಕಾಶ ನೀಡುವುದು. ಮುಕ್ತ ಅಭಿಪ್ರಾಯವನ್ನು ನೀಡಲು ಸರಳ ಪೂರಕ ಕಥೆಗಳನ್ನು ಬಳಸುವುದು. ಈ ಸಮಾಜಕ್ಕೆ ಸಂಬಂಧಿಸಿದ https://www.youtube.com/watch?v=OeiK1ANAouw ಯೂಟ್ಯೂಬ್ ವಿಡಿಯೋಗಳನ್ನು ತೋರಿಸುವುದು ಮಕ್ಕಳಿಗೆ ಹೆಚ್ಚಿನ ಆಸಕ್ತಿ ಮೂಡುವಂತೆ ಮಾಡುತ್ತದೆ.

**ಕಲಿಕಾ ಹಾಳೆ-5 ಮೊದಲ ಬೆಳೆ**

**ಚಟುವಟಿಕೆ :** 1 ಮೊದಲ ಬೆಳೆ ಮನುಷ್ಯನು ಬೆಳೆದ ಮೊದಲ ಬೆಳೆಗಳು ಯಾವುದಿರಬಹುದು ಎಂಬ ಮಕ್ಕಳಲ್ಲಿರಬಹುದಾದ ಸಹಜ ಪ್ರಶ್ನೆಗಳನ್ನು ಕೇಳುತ್ತಾ, ಕುತೂಹಲ ಮೂಡಿಸುವ ಸನ್ನಿವೇಶಗಳನ್ನು ಮಕ್ಕಳ ಮುಂದಿಡುವುದು.

**ಕಲಿಕಾ ಹಾಳೆ-6 ಸೋಲಿಗರ ಕೃಷಿ**

**ಚಟುವಟಿಕೆ:1** ಸೋಲಿಗರ ಕೃಷಿಯನ್ನು ಗುಂಪುಗಳಲ್ಲಿ ಓದಲು ನೀಡಿ, ಅದರ ಮೇಲೆ ಮಕ್ಕಳು ಅರ್ಥೈಸಿಕೊಂಡಿರುವುದನ್ನು ತಿಳಿಯಲು ಬೇಕಾದಷ್ಟು ಪ್ರಶ್ನೆಗಳನ್ನು ಕೇಳಬೇಕು.

**ಕಲಿಕಾ ಹಾಳೆ–7 ವಸ್ತುಗಳ ತಯಾರಿಕೆ**

**ಚಟುವಟಿಕೆ :** 1 ಕೃಷಿಯಲ್ಲಾದ ಬದಲಾವಣೆಯನ್ನು ಕುರಿತು ಈಗ ಒಂದಷ್ಟು ಚರ್ಚೆ ಮಾಡೋಣ.

**ಕಲಿಕಾ ಹಾಳೆ–8 ಉಪಕರಣಗಳ ತಯಾರಿಕೆ**

**ಸಾರಾಂಶೀಕರಣ:** ಮೇಲಿನ ಎಲ್ಲಾ ಕಲಿಕಾ ಹಾಳೆಗಳು ಒಟ್ಟಾರೆಯಾಗಿ ಕೃಷಿಯು ಬೆಳೆದು ಬಂದ ಹಾದಿಯನ್ನು ಪರಿಚಯಿಸುತ್ತವೆ. ಕೃಷಿ ಎಂಬುದು ಬೇಸಾಯ ಮತ್ತು ಅರಣ್ಯಕಲೆಯ ಮೂಲಕ ಆಹಾರ ಮತ್ತು ಸರಕುಗಳನ್ನು ಉತ್ಪಾದಿಸುವ ಒಂದು ವಿಧಾನ. ಕೃಷಿಯು ಮಾನವ ನಾಗರಿಕತೆಯ ಉಗಮಕ್ಕೆ ಕಾರಣವಾದ ಪ್ರಮುಖ ಬೆಳವಣಿಗೆಯಾಗಿತ್ತು. ಅಷ್ಟೇ ಅಲ್ಲ, ಪಳಗಿಸಿದ ಪ್ರಾಣಿಗಳು ಮತ್ತು ಸಸ್ಯಗಳ (ಅಂದರೆ, ಬೆಳೆಗಳ) ಸಂಗೋಪನೆಯಿಂದಾಗಿ ಆಹಾರದ ಮಿಗುತಾಯಗಳು ಸೃಷ್ಟಿಯಾಗುವುದರಿಂದ ಅದು ಹೆಚ್ಚು ಜನಭರಿತವಾದ ಮತ್ತು ಶ್ರೇಣೀಕೃತವಾದ ಸಮಾಜಗಳ ಬೆಳವಣಿಗೆಗೆ ಕಾರಣವಾಯಿತು ಎಂಬ ವಿಚಾರವು ಮಗುವು ಅರಿಯಬೇಕಾಗಿದೆ.

**ಮೌಲ್ಯಮಾಪನ ಚಟುವಟಿಕೆ:** ಕೃಷಿಗೆ ಬೇಕಾಗುವ ಉಪಕರಣಗಳನ್ನು ಪಟ್ಟಿ ಮಾಡಿ. ಯಾವ ಉಪಕರಣಗಳು ಕೃಷಿಯ ಅಭಿವೃದ್ಧಿಗೆ ಸಹಾಯಕವಾಗುತ್ತವೆ?

## ಕಲಿಕಾಂಶ 3 ವೇದಗಳ ಕಾಲ

**ಕಲಿಕಾ ಫಲ: ದನಗಾಯಿ ಸಮಾಜದ ಉದಯ ಮತ್ತು ವೇದಗಳ ಕಾಲದ ಕುರಿತು ವಿವರಿಸುವರು.**

**ಉದ್ದೇಶ:**

- ಪೂರ್ವವೇದ ಮತ್ತು ಉತ್ತರ ವೇದಗಳ ಕಾಲದ ವ್ಯತ್ಯಾಸ ಅರಿಯುವರು.
- ನಮ್ಮ ಸಂವಿಧಾನದಲ್ಲಿ ಪ್ರಸ್ತಾಪವಾಗುವ ಸಮಾನತೆಯ ಸಮಾಜ ಪೂರ್ವವೇದ ಕಾಲದ್ದು ಎಂಬ ಸ್ಪಷ್ಟ ಅರಿವು ಮಕ್ಕಳಲ್ಲಿ ಮೂಡಿಸುವುದು.

**ಕಲಿಕಾ ಸಾಮಾಗ್ರಿಗಳು:** ವೇದಕಾಲಕ್ಕೆ ಸಂಬಂಧಿಸಿದ ಚಿತ್ರಗಳು, ಸಮಾಜದ ವಿವಿಧ ಹಂತದ ಸಾಮಾಜಿಕ ವ್ಯವಸ್ಥೆಗಳ ಚಿತ್ರಗಳು.

**ಕಲಿಕಾ ಪ್ರಕ್ರಿಯೆ:** ಸುಗಮಕಾರರು ಮಕ್ಕಳಿಗೆ, ಪ್ರಶ್ನೆಗಳನ್ನು ಕೇಳುತ್ತಾ, ಚಿತ್ರಗಳನ್ನು ತೋರಿಸುತ್ತಾ ವೇದಕಾಲದ ಜೀವನ ಶೈಲಿಯನ್ನು ಪರಿಚಯಿಸುವುದು. ಸಮಾಜದ ಸ್ತರಗಳನ್ನು ಗುರುತಿಸುವ, ಸಮಾಜದಲ್ಲಿನ ಪದ್ಧತಿಗಳನ್ನು, ಸ್ತ್ರೀ ಸಮಾನತೆಯ ಅಂಶಗಳ ಬಗೆಗೆ ಮುಕ್ತ ಮಾತುಕತೆಯನ್ನು ನಡೆಸುವುದು. ಈ ಸಮಾಜಕ್ಕೆ ಸಂಬಂಧಿಸಿದ ಯೂಟ್ಯೂಬ್, ಅನಿಮೇಟೆಡ್ ವಿಡಿಯೋಗಳನ್ನು ತೋರಿಸುವುದು. ಇದರಿಂದ ಮಕ್ಕಳಿಗೆ ಹೆಚ್ಚಿನ ಆಸಕ್ತಿ ಮೂಡುತ್ತದೆ.

### ಕಲಿಕಾ ಹಾಳೆ–9

ಸುಗಮಕಾರರು ಪೂರ್ವವೇದ ಕಾಲದಲ್ಲಿದ್ದ ಸಮಾನತೆಯ ವಿಚಾರಗಳಿಗೆ ಒತ್ತು ನೀಡುವುದು. ಬಹುಮುಖ್ಯವಾಗಿ ಸ್ತ್ರೀ–ಪುರುಷರು ಸಮಾನವಾದ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಇಲ್ಲಿ ಯಾವುದೇ ನಿರ್ದಿಷ್ಟವಾದ ಕೆಲಸಗಳ ಹಂಚಿಕೆ ಇರಲಿಲ್ಲ, ತಾರತಮ್ಯಗಳಿಲ್ಲದೇ ತಮಗಿಷ್ಟವಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದರು. ನಾವಿಂದು ಸಂವಿಧಾನದಲ್ಲಿ (ಆಶಯದಲ್ಲಿ) ಹೇಳುತ್ತಿರುವ ಸಮಾಜ ಇದೇ ಎಂಬುದನ್ನು ಮಕ್ಕಳಿಗೆ ತಲುಪಿಸಲೇಬೇಕಾದ ಅಗತ್ಯತೆಯಿದೆ. ಈ ಸಾಮರಸ್ಯ, ತಾರತಮ್ಯ ರಹಿತ ಸಮಾಜವು ನಾವು ಭವಿಷ್ಯದಲ್ಲಿ ನೋಡುತ್ತಿರುವ ಭಾರತದ ಆಶಯವಾಗಿದೆ. ಮುಂದೆ ಉತ್ತರ ವೇದಕಾಲದಲ್ಲಿ ಸ್ತ್ರೀಯರ ಸ್ಥಾನಮಾನ ಹೇಗೆ ಕಡಿಮೆಯಾಗುತ್ತಾ ಹೋಯಿತು, ಹೇಗೆ ಅಸಮಾನತೆಯ ಸಮಾಜ ಸೃಷ್ಟಿಯಾಯಿತು ಎಂಬ ಸ್ಪಷ್ಟತೆಯನ್ನು ಮಕ್ಕಳಲ್ಲಿ ತರಬೇಕು. ವೇದಗಳ ಕಾಲದ ಜೀವನ ಕ್ರಮಕ್ಕೂ ಇಂದಿನ ಜೀವನ ಶೈಲಿಗೂ ಇರುವ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಮಕ್ಕಳು ಗುರುತಿಸುವಂತೆ ಚರ್ಚಿಸುವುದು ಬಹುಮುಖ್ಯವಾದ ಅಂಶವಾಗಿದೆ.

**ಚಟುವಟಿಕೆ –1:** ಪೂರ್ವ ವೇದ ಹಾಗೂ ಉತ್ತರ ವೇದ ಕಾಲದಲ್ಲಿನ ಪ್ರಮುಖ ವ್ಯತ್ಯಾಸಗಳು.

**ಚಟುವಟಿಕೆ: 2** ಹೇಳಿಕೆಗಳಲ್ಲಿ ಸರಿ ಅಥವಾ ತಪ್ಪು ಗುರುತಿಸಿ.

**ಸಾರಾಂಶೀಕರಣ:** ಸುಗಮಕಾರರು, ವೈದಿಕ ಕಾಲದ ಶಿಕ್ಷಣ ಪದ್ಧತಿಯು ಹೇಗಿತ್ತು, ಇಂದು ನಾವು ಶಾಲೆಯ ಪರಿಸರದಲ್ಲಿ ಕಲಿಯುವ ಶಿಕ್ಷಣ ಪದ್ಧತಿಯಲ್ಲಿನ ಭಿನ್ನತೆ ಮತ್ತು ಸಾಮ್ಯತೆಯನ್ನು ಗುರುತಿಸಬೇಕು. ಮಕ್ಕಳಿಗೆ ಮುಕ್ತವಾಗಿ ಶಿಕ್ಷಣ ಯಾವ ರೀತಿ ಇದ್ದರೆ ಚೆನ್ನಾಗಿರುತ್ತದೆ ಎಂಬ ಅನಿಸಿಕೆ ಅಭಿಪ್ರಾಯಗಳನ್ನು ಹೇಳಲು ಮುಕ್ತ ಅವಕಾಶ ಕಲ್ಪಿಸುವುದು. ಈ ನಿಟ್ಟಿನಲ್ಲಿ ತರಗತಿ ಪ್ರಕ್ರಿಯೆಗಳನ್ನು ವಿನ್ಯಾಸ ಮಾಡುವುದು ಉತ್ತಮ. ಸುಗಮಕಾರರು, ನಾವಿಂದು ಬಳಸುವ ಪದಗಳಾದ ಅಗ್ನಿ, ವರುಣ, ಇಂದ್ರ ಮತ್ತು ವಾಯು ಇವುಗಳನ್ನು ವೈದಿಕ ಕಾಲದಲ್ಲಿ ಬಳಸಲಾಗಿತ್ತು ಎಂಬುದನ್ನು ಮಕ್ಕಳಿಗೆ ಪರಿಚಯಿಸುವುದು. ವೇದಕಾಲದ ಪೂರಕವಾದ ಚಿತ್ರಗಳನ್ನು ಬಳಸುವ ಅಗತ್ಯತೆ ಇದೆ.

**ಮೌಲ್ಯಮಾಪನ ಚಟುವಟಿಕೆ:** ಗುರುಕುಲ ಶಿಕ್ಷಣದ ಕಾಲ್ಪನಿಕ ಚಿತ್ರಕ್ಕೆ ಬಣ್ಣ ತುಂಬಿ ಮತ್ತು ನಿನ್ನ ಶಾಲೆಯ ಶಿಕ್ಷಣಕ್ಕೂ ಅಂದಿನ ವ್ಯವಸ್ಥೆಯ ಕುರಿತು ನಿಮಗನಿಸಿದ್ದನ್ನು ಬರೆಯಿರಿ.

**ಕಲಿಕಾಂಶ: 4.1**

**ನಾಗರೀಕತೆ – ಪ್ರಪಂಚದ ಪ್ರಮುಖ ನಾಗರೀಕತೆಗಳ ಬೆಳವಣಿಗೆ**

**ಕಲಿಕಾಫಲ: 6 ಜಗತ್ತಿನಲ್ಲಿ ನದಿಯ ದಡದ ಮೇಲೆ ಉದಯವಾದ ನಾಗರೀಕತೆಗಳನ್ನು ಹೆಸರಿಸಿ, ಸಿಂಧೂ ನಾರೀಕತೆಯನ್ನು ಕುರಿತು ವಿವರಣೆ ನೀಡುತ್ತಾರೆ.**

**ಉದ್ದೇಶ:**

- ನಾಗರೀಕತೆಗಳ ಹುಟ್ಟಿಗೆ ಕಾರಣವಾದ ಅಂಶಗಳನ್ನು ತಿಳಿಯುವುದು.
- ಪ್ರಪಂಚದ ನಾಗರೀಕತೆಗಳು ಒಂದಕ್ಕೊಂದು ಏಕೆ ಭಿನ್ನವಾಗಿವೆ ಮತ್ತು ಅವುಗಳ ವಿಶೇಷತೆಗಳನ್ನು ಪಟ್ಟಿ ಮಾಡುವಂತಾಗುತ್ತಾರೆ, ಅಲ್ಲದೆ ಸಿಂಧೂ ನಾಗರೀಕತೆಯೊಂದಿಗೆ ಹೋಲಿಸಿ ನೋಡುವಂತಾಗುತ್ತಾರೆ.
- ಇಂದಿನ ಸಮಾಜಕ್ಕೂ ಮತ್ತು ನಾಗರೀಕತೆಗಳಿಗಿರುವ ಸಾಮ್ಯತೆ, ಭಿನ್ನತೆಯನ್ನು ಗುರುತಿಸುವುದು.

**ಸಾಮಗ್ರಿಗಳು:** ಪ್ರಪಂಚದ ನಕ್ಷೆ, ಚಿತ್ರಗಳು, ಕಲರ್ ಪೆನ್ನು, ಪೇಪರ್

**ಪ್ರಕ್ರಿಯೆ:** ಸುಗಮಕಾರರು ನಾಗರೀಕತೆಗೆ ಸಂಬಂಧಿಸಿದ ಚಿತ್ರಗಳನ್ನು ತೋರಿಸುತ್ತಾ ಮಕ್ಕಳನ್ನು ಮಾತನಾಡಿಸುವುದು. ಮುಖ್ಯವಾಗಿ ನಾಗರೀಕತೆಗಳ ಹುಟ್ಟಿಗೆ ಕಾರಣವಾದ ಅಂಶಗಳನ್ನು ಒಂದೊಂದಾಗಿ ಮಾತನಾಡುತ್ತಾ ಮಕ್ಕಳಿಗೆ ನಾಗರೀಕತೆಯ ಲಕ್ಷಣಗಳನ್ನು ಅವರಿಂದಲೇ ತರುವಂತೆ ಮಾಡುವುದು. ಪ್ರಪಂಚದ ನಕ್ಷೆಗಳಲ್ಲಿ ನಾಗರೀಕತೆಗಳ ಹುಟ್ಟಿಗೆ ಕಾರಣವಾದ ನದಿಗಳನ್ನು ಪರಿಚಯಿಸಿ ಅವುಗಳು ಇಂದಿರುವ ದೇಶಗಳ ಹಿನ್ನೆಲೆಯಲ್ಲಿ ಮಾತುಕತೆ ನಡೆಸುವುದು. ನಾಗರೀಕತೆಗೆ ಸಂಬಂಧಿಸಿದ ಯೂಟ್ಯೂಬ್ ವಿಡಿಯೋಗಳನ್ನು ಬಳಸಿ ತರಗತಿ ನಿರ್ವಹಿಸುವುದು.

**ಸಾರಾಂಶೀಕರಣ:** ಸುಗಮಕಾರರು, ಪ್ರತಿಯೊಂದು ನಾಗರಿಕತೆಗಳ ಹುಟ್ಟು, ಬೆಳವಣಿಗೆ, ಅಲ್ಲಿನ ಪರಿಸರ ಮತ್ತು ಮಣ್ಣಿನ ಫಲವತ್ತತೆ ಮುಂತಾದವುಗಳ ಮೇಲೆ ಅವಲಂಭಿತವಾಗಿರುತ್ತದೆ, ಮತ್ತು ಅವುಗಳು ನಮ್ಮ ಹಿಂದಿನ ಸಂಸ್ಕೃತಿಯ ಪ್ರತೀಕಗಳಾಗಿವೆ ಎಂಬುದನ್ನು ಅರ್ಥೈಸಿಕೊಳ್ಳುವಂತಾಗಬೇಕು.

## ಪ್ರಪಂಚದ ಪ್ರಮುಖ ನಾಗರೀಕತೆಗಳ ಬೆಳವಣಿಗೆ

**ಕಲಿಕಾಫಲ:– ಜಗತ್ತಿನ ನಾಗರಿಕತೆಗಳ ಪರಿಚಯ ಮಾಡಿಕೊಳ್ಳುತ್ತಾರೆ.**

### ಭೂಪಟವನ್ನು ನೋಡಿ ಪ್ರಪಂಚದ ನಾಗರಿಕತೆಗಳ ಪರಿಚಯ ಮಾಡಿಕೊಳ್ಳುತ್ತಾರೆ.

ಸುಗಮಕಾರರು ಪ್ರಪಂಚದ ನಾಗರಿಕತೆಗಳ ಕುರಿತಾಗಿ ಪರಿಚಯಿಸುವುದು. ಇಂದು ಆ ನದಿ ಬಯಲುಗಳು ಯಾವ ದೇಶಗಳಲ್ಲಿವೆ ಎಂಬುದನ್ನು ಮಕ್ಕಳು ತಿಳಿಯುವಂತಾಗಬೇಕು. ಇಂದು ಆ ನದಿ ಬಯಲುಗಳಲ್ಲಿನ ನಗರಗಳು ಯಾವುವು? ಅವು ಈಗ ಹೇಗಿವೆ? ಎಂಬುದನ್ನು ಕುತೂಹಲ ಮೂಡುವಂತೆ ವಿವಿಧ ನಕ್ಷೆ ಮತ್ತು ವಿಡಿಯೋಗಳ ಮೂಲಕ ವಿಶ್ಲೇಷಿಸುವುದು.

**ಚಟುವಟಿಕೆ: 1** ಈ ಮೇಲಿನ ಭೂಪಟದ ಸಹಾಯದೊಂದಿಗೆ ಹೊಂದಿಸಿ ಬರೆಯಿರಿ.

ಸುಗಮಕಾರರು ಪ್ರಪಂಚದ ಭೂಪಟದ ಮೂಲಕ ನದಿಗಳನ್ನು ಅವುಗಳಿರುವ ಇಂದಿನ ದೇಶಗಳನ್ನು ಗುರುತಿಸಲು ಮಕ್ಕಳಿಗೆ ನೆರವಾಗುವುದು.

**ಚಟುವಟಿಕೆ: 2** ಈ ಮೇಲಿನ ಭೂಪಟವನ್ನು ಗಮನಿಸಿದಾಗ ನಾಗರಿಕತೆಗಳೆಲ್ಲವೂ ನದಿ ತೀರದಲ್ಲೇ ಇವೆ. ಇವು ನದಿ ತೀರದಲ್ಲೆ ಏಕೆ ಹುಟ್ಟಿರಬಹುದು?

ಸುಗಮಕಾರರು ಕಲಿಕಾ ಹಾಳೆಯಲ್ಲಿ ಬಳಸಿದ ಚಿತ್ರಗಳ ಕುರಿತಾದ ಅಂಶಗಳನ್ನು ಬಳಸಿಕೊಂಡು ಇತ್ತೀಚಿನ ಚಿತ್ರಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಬಳಕೆ ಮಾಡುತ್ತಾ ಪರಿಕಲ್ಪನೆಯನ್ನು ಗಟ್ಟಿಗೊಳಿಸುವುದು.

**ಚಟುವಟಿಕೆ: 3** ಕೆಳಗಿನ ನಕ್ಷೆಯನ್ನು ಗಮನಿಸಿ. ಸಿಂಧೂ ಬಯಲಿನ ನಾಗರಿಕತೆಯ ನದಿಗಳು ಮತ್ತು ನಗರಗಳನ್ನು ಪಟ್ಟಿಮಾಡಲು ತಿಳಿಸುವುದು.

## ಕಲಿಕಾ ಹಾಳೆ – 11 ನಾಗರಿಕತೆಗಳು

**ಸಾರಾಂಶೀಕರಣ:** ಇತಿಹಾಸದ ಮುಖ್ಯ ಉದ್ದೇಶವೆಂದರೆ ಪೂರ್ವದ ಅಥವಾ ಕಳೆದುಹೋದ ಕಾಲದ ಘಟನೆಗಳ ವಿಚಾರಗಳನ್ನು ಇಂದಿಗೆ ಎಳೆದು ತಂದು ಅವುಗಳ ಪ್ರಸ್ತುತತೆಯನ್ನು ಮಕ್ಕಳಿಗೆ ತಿಳಿಸುವುದೇ ಆಗಿದೆ. ಇಂದಿನ ಮತ್ತು ನಾಗರಿಕತೆಯ ಕಾಲದ ವ್ಯವಸ್ಥೆಗಳ ವ್ಯತ್ಯಾಸ ಮತ್ತು ಸಾಮ್ಯತೆಯನ್ನು ಗುರುತಿಸುವಂತೆ ಸುಗಮಕಾರರು ಇಲ್ಲಿ ಹೆಚ್ಚು ಒತ್ತು ನೀಡುವುದು.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾ ಹಾಳೆ – 11 ಚಟುವಟಿಕೆ –1 ಚಿತ್ರಗಳನ್ನು ನೋಡಿ ಮಾತಾಡೋಣ. ಇಲ್ಲಿ ಕೆಲವು ಸಿಂಧೂ ನಾಗರಿಕತೆಗೆ ಸಂಬಂಧಿಸಿದ ಚಿತ್ರಗಳನ್ನು ನೀಡಲಾಗಿದೆ. ಅವುಗಳನ್ನು ನೋಡಿ ಅಂದಿನ ಕಾಲದ ಜನ ಜೀವನವನ್ನು ಮಕ್ಕಳು ಗುರುತಿಸುತ್ತಾರೆಂದು ಸುಗಮಕಾರರು ಖಾತ್ರಿ ಮಾಡಿಕೊಳ್ಳಬೇಕು.

### ಕಲಿಕಾಂಶ 5 ಅಂಹಿಸೆಯ ಕಡೆಗೆ

**ಕಲಿಕಾಫಲ: 8** ಹೊಸ ಮತಗಳ ಉದಯಕ್ಕೆ ಕಾರಣವಾದ ಅಂಶಗಳನ್ನು ಮತ್ತು ಬೌದ್ಧ, ಜೈನ ಧರ್ಮದ ಬಗ್ಗೆ ತಿಳಿದುಕೊಳ್ಳುತ್ತಾರೆ.

**ಉದ್ದೇಶ:**

- ಹೊಸ ಮತಗಳ ಹುಟ್ಟಿಗೆ ಕಾರಣವಾದ ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳುವರು.
- ಅಂದಿನ ಕಾಲದ ಭಾರತದ ರಾಜಕೀಯ ಸನ್ನಿವೇಶಗಳು ಹೊಸ ಮತಗಳ ಪ್ರಸಾರಕ್ಕೆ ಹೇಗೆ ಸಹಕಾರಿಯಾದವು ಎನ್ನುವುದನ್ನು ತಿಳಿದುಕೊಳ್ಳುವರು.

**ಸಾಮಗ್ರಿಗಳು:** ಪಠ್ಯಪುಸ್ತಕ, ಪೆನ್ನು , ಪೇಪರ್,

**ಪ್ರಕ್ರಿಯೆ:** ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ಪ್ರತಿ ಗುಂಪಿಗೆ ಪಠ್ಯಪುಸ್ತಕವನ್ನು ನೀಡಿ ನಂತರ ಕೆಲವು ಈ ಕೆಳಗಿನ ಪ್ರಶ್ನೆಗಳನ್ನು ನೀಡಬೇಕು ನಂತರ ಪುಸ್ತಕವನ್ನು ಓದಿಕೊಂಡು ಗೆಳೆಯ/ಗೆಳತಿಯರೊಂದಿಗೆ ಚರ್ಚಿಸಿ ತಮಗೆ ತೋಚಿದ ಉತ್ತರವನ್ನು ಬರೆಯಲು ತಿಳಿಸಬೇಕು.

1. ಒಂದು ಧರ್ಮ ಅಸ್ತಿತ್ವದಲ್ಲಿದ್ದಾಗ ಇನ್ನೊಂದು ಧರ್ಮ ಏಕೆ ಉದಯಿಸುತ್ತದೆ?
2. ಜೈನ ಮತ್ತು ಬೌದ್ಧ ಧರ್ಮದ ಮೂಲ ತತ್ವಗಳನ್ನು ಪಟ್ಟಿಮಾಡಿ.
3. ಎರಡು ಧರ್ಮಗಳ ಸಾಮ್ಯತೆ ವ್ಯತ್ಯಾಸಗಳನ್ನು ಗುರುತಿಸಿ.

ನಂತರ ಮಕ್ಕಳಿಗೆ ಧರ್ಮಗಳ ಹುಟ್ಟಿಗೆ ಕಾರಣವಾದ ಅಂಶಗಳನ್ನು ಮಕ್ಕಳು ತಿಳಿಯುವಂತೆ ಮಾಡುವುದು. ಧರ್ಮಗಳು ಮನುಷ್ಯನ ಜೀವನದ ಆಚರಣೆಗಳಿಗೆ ಸಂಬಂಧಿಸಿರುವುದು. ಧರ್ಮಗಳ ಸಾಮರಸ್ಯವೇ ಈ ವಿಶ್ವದ ಶಾಂತಿಯ ಮಂತ್ರ ಎನ್ನುವುದನ್ನು ಮಕ್ಕಳಲ್ಲಿ ಒತ್ತಿ ಹೇಳುವುದು. ಒಳ್ಳೆಯ ಚಾರಿತ್ರ್ಯ ಹೊಂದುವುದು ಎಲ್ಲಾ ಧರ್ಮಗಳಲ್ಲಿಯೂ ಇರುವ ಮೂಲಾಂಶವಾಗಿದೆ. ಇವು ನಮ್ಮ ಜೀವನವನ್ನು ಸರಳ ಹಾಗೂ ಸಾರ್ಥಕತೆಗೆ ಕೊಂಡೊಯ್ಯುತ್ತದೆ ಎಂಬುದನ್ನು ಮಕ್ಕಳ ಮನಸ್ಸಿನಲ್ಲಿ ನಾಟುವಂತೆ ಹೇಳುವುದು ಈ ಕಲಿಕಾಂಶದ ಉದ್ಧೇಶವಾಗಿದೆ.

### ಕಲಿಕಾ ಹಾಳೆ: 12 ವಲಸೆ ಜನರ ಮಾಹಿತಿ ಸಂಗ್ರಹ

**ಚಟುವಟಿಕೆ:** 1 ನಿಮ್ಮ ಊರು ಅಥವಾ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಲಸೆ ಬಂದಂತಹ ಜನರ ಕುರಿತು ಮಾಹಿತಿ ಸಂಗ್ರಹಿಸಿ ತರಗತಿಯಲ್ಲಿ ಚರ್ಚಿಸಿ.

ಮನುಷ್ಯನ ಇತಿಹಾಸದ ವಲಸೆಯ ಕಾಲಘಟ್ಟವನ್ನು ದಾಟಿ ಅವನು ಒಂದೆಡೆ ನೆಲೆಸಲು ಶುರುಮಾಡಿದ ಔಚಿತ್ಯವನ್ನು ಚರ್ಚಿಸುವುದು. ಸುಗಮಕಾರರು ಒಂದು ಪ್ರದೇಶದಲ್ಲಿ ಮಾನವ ನೆಲೆ ನಿಲ್ಲಲು ಬೇಕಾಗುವ ಪ್ರಮುಖ ಅಂಶಗಳನ್ನು ಚರ್ಚಿಸುವುದರಿಂದ, ಇಂದಿನ ಕಾಲದ ಹಳ್ಳಿಗಳ ನಿರ್ಮಾಣವನ್ನು ಅರಿತುಕೊಳ್ಳಲು ಸಹಾಯಕವಾಗುವುದು. ಇಂದು ಜನರು ವಲಸೆ ಹೋಗುವ ಉದ್ದೇಶದೊಂದಿಗೆ ಈ ನಾಗರಿಕತೆಯ ವಿಷಯವನ್ನು ಪ್ರಸ್ತುತಕ್ಕೆ ತರುವುದೇ ಕಲಿಕಾಂಶದ ಉದ್ಧೇಶವಾಗಿದೆ.

**ಚಟುವಟಿಕೆ:** 2 ಜಾನುವಾರುಗಳು ದಿನನಿತ್ಯದ ಕೃಷಿ ಹಾಗೂ ಹೈನುಗಾರಿಕೆಯಲ್ಲಿ ಹೇಗೆ ಪ್ರಮುಖ ಪಾತ್ರವಹಿಸುತ್ತದೆ ಎಂಬುದನ್ನು ಬರೆಯಿರಿ.

ಸುಗಮಕಾರರು ಆದಿ ಕಾಲದಿಂದಲೂ ಜಾನುವಾರುಗಳು ಆರ್ಥಿಕ ಹಾಗೂ ಕೃಷಿ ಅಭಿವೃದ್ಧಿಯಲ್ಲಿ ಹೇಗೆ ಪ್ರಮುಖ ಪಾತ್ರವಹಿಸುತ್ತವೆ ಎಂಬುದನ್ನು ಚರ್ಚಿಸುವುದು. ಇಂದು ಕೃಷಿಯಲ್ಲಿ ಜಾನುವಾರುಗಳ ಪಾತ್ರವನ್ನು ವಿಶ್ಲೇಷಿಸುವುದು. ಜಾನುವಾರುಗಳ ಅವಲಂಬನೆ ಈ ಯಂತ್ರ ಯುಗದಲ್ಲಿ ಹೇಗಿದೆ? ಎಂಬುದನ್ನು ಮಕ್ಕಳು ಅರಿಯುವಂತಾಗಬೇಕು.

ಸುಗಮಕಾರರು ನಾಗರಿಕತೆ ನದಿಯ ಬಯಲಿನಲ್ಲಿಯೇ ಸೃಷ್ಟಿಯಾದವು ಎಂಬುದಕ್ಕೆ ಸ್ಪಷ್ಟತೆಯನ್ನು ಮಕ್ಕಳಲ್ಲಿ ಮೂಡಿಸಬೇಕು. ನಗರೀಕರಣ, ಮನುಷ್ಯ ನಿರ್ದಿಷ್ಟ ಸ್ಥಳದಲ್ಲಿ ನೆಲೆನಿಂತ ಅಂಶಗಳನ್ನು ಚರ್ಚಿಸಿ. ಪ್ರಸ್ತುತ ಜನಜೀವನಕ್ಕೂ ನಾಗರೀಕತೆಗಳ ಕಾಲಕ್ಕೂ ಇರುವ ಸಾಮ್ಯತೆಗಳನ್ನು ಮತ್ತು ವ್ಯತ್ಯಾಸಗಳನ್ನು ಮಕ್ಕಳು ಗುರುತಿಸುವಂತಾಗಬೇಕು.

**ಚಟುವಟಿಕೆ:** 3 ವೃದ್ಧರಿಗೆ ಅಥವಾ ಹಿರಿಯ ವಯಸ್ಕರಿಗೆ ದಿನನಿತ್ಯ ಜೀವನದಲ್ಲಿ ನೀವು ಮಕ್ಕಳಾಗಿ ಮಾಡಬಹುದಾದ ಸಹಾಯವನ್ನು ಗುರುತಿಸಿ ಬರೆಯಿರಿ.

**ಚಟುವಟಿಕೆ:** 4 ಕಿಸಾಗೋತಮಿ ನಾಟಕವನ್ನು ನಿಮ್ಮ ತರಗತಿಯಲ್ಲಿ ಅಭಿನಯಿಸಿ ಚರ್ಚಿಸಿ.

**ಚಟುವಟಿಕೆ: 5** ಇಲ್ಲಿ ಕೆಲವು ಅಭ್ಯಾಸಗಳನ್ನು ಕೊಡಲಾಗಿದೆ. ಅವುಗಳಿಗೆ ಮಾಡುತ್ತೇನೆ ಅಥವಾ ಮಾಡುವುದಿಲ್ಲ ಎಂದು ಬರೆದು, ಕಾರಣವನ್ನು ಬರೆಯಿರಿ.

ಈ ಎಲ್ಲಾ ಚರ್ಚೆಗಳಲ್ಲಿ ಸುಗಮಕಾರರು ಮಕ್ಕಳಿಗೆ ಅಗತ್ಯವಿದ್ದಾಗ ಸಹಾಯ ನೀಡಬೇಕು ಮತ್ತು ಗೊಂದಲಗಳಿದ್ದರೆ ಪರಿಹರಿಸಬೇಕು. ಎಲ್ಲಾ ಮಕ್ಕಳಿಗೂ ಇಲ್ಲಿ ನೀಡಿರುವ ಎಲ್ಲಾ ಚಟುವಟಿಕೆಗಳನ್ನು ಮಾಡಿಸಲೇಬೇಕೆಂಬ ಅವಸರಕ್ಕೆ ಬೀಳದೆ ಅವುಗಳನ್ನು ಅಗತ್ಯಕ್ಕೆ ತಕ್ಕಂತೆ ಸರಳೀಕರಣ ಮಾಡಬಹುದು. ಒಟ್ಟಿನಲ್ಲಿ ಅಹಿಂಸಾ ತತ್ವವನ್ನು ಎರಡು ಧರ್ಮಗಳು ಬಲವಾಗಿ ಪ್ರತಿಪಾದನೆ ಮಾಡಲು ಕಾರಣಗಳನ್ನು ಮಕ್ಕಳು ಅರ್ಥಮಾಡಿಕೊಳ್ಳುವಂತಾಗಬೇಕು.

**ಮೌಲ್ಯಮಾಪನ ಚಟುವಟಿಕೆ:** ಕರ್ನಾಟಕದ ಪ್ರಸಿದ್ದ ಜೈನ ಹಾಗೂ ಬೌದ್ಧ ಧರ್ಮದ ಐತಿಹಾಸಿಕ ಸ್ಥಳಗಳು ಮತ್ತು

ಸ್ಮಾರಕಗಳ ಚಿತ್ರಗಳನ್ನು ಸಂಗ್ರಹಿಸಿ ಅವುಗಳ ಬಗ್ಗೆ ತಿಳಿದುಕೊಳ್ಳಿ.

### ಕಲಿಕಾಂಶ: 6.1 ಭಾರತದ ಪ್ರಮುಖ ರಾಜಮನೆತನಗಳು

**ಕಲಿಕಾಫಲ: 10** ಭಾರತದ ಪ್ರಮುಖ ರಾಜಮನೆತನಗಳ ಬಗ್ಗೆ ತಿಳಿಯುವರು.

**ಉದ್ದೇಶ :**

- ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಕಲೆ ವಾಸ್ತುಶಿಲ್ಪ ಮತ್ತು ಸಂಸ್ಕೃತಿಯಲ್ಲಿನ ಸಾಮ್ಯತೆ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳುವುದು.
- ಉತ್ತರ ಭಾರತದಲ್ಲಿ ಬೃಹತ್ ಸಾಮ್ರಾಜ್ಯಗಳ ಉದಯಕ್ಕೆ ಕಾರಣವಾದ ಅಂಶಗಳನ್ನು ಗುರುತಿಸುವುದು ಮತ್ತು ಅವುಗಳು ಚಿಕ್ಕ ರಾಜ್ಯಗಳಾಗಿ ವಿಭಜನೆಯಾಗಲು ಕಾರಣವಾದ ಅಂಶಗಳನ್ನು ತಿಳಿದುಕೊಳ್ಳುವರು.

**ಕಲಿಕಾ ಸಾಮಗ್ರಿಗಳು :** ಪಠ್ಯಪುಸ್ತಕ, ಕಾಲಾನುಕ್ರಮದ ಪಟ್ಟಿ.

**ಪ್ರಕ್ರಿಯೆ:** ಮಕ್ಕಳಿಗೆ ಈ ಕಾರ್ಯವನ್ನು ವೈಯಕ್ತಿಕವಾಗಿಯೂ ಮತ್ತು ಗುಂಪುಗಳಲ್ಲಿಯೂ ಕೊಡಬಹುದು. ಅಲ್ಲಿಯ ಪರಿಸ್ಥಿತಿಯನ್ನು ನೋಡಿಕೊಂಡು ಸುಗಮಕಾರರು ನಿರ್ಧಾರ ಮಾಡಬಹುದು. ಮಕ್ಕಳಿಗೆ ಕಾಲಾನುಕ್ರಮದ ಪಟ್ಟಿಯನ್ನು ನೀಡಿ ಅವರಿಗೆ ಇತಿಹಾಸದಲ್ಲಿ ಯಾವ ಘಟನೆಯ ನಂತರ ಯಾವ ಘಟನೆ ನಡೆಯಿತು ಎಂದು ಅರ್ಥೈಸಿಕೊಳ್ಳಲು ಗುಂಪುಗಳಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ತಿಳಿಸುವುದು. ಉತ್ತರ ಭಾರತದಲ್ಲಿ ಕಲ್ಲಿನ ಕಟ್ಟಡಗಳಿಗೆ ನಾಂದಿ ಹಾಡಿದ್ದಕ್ಕೆ ಕಾರಣಗಳನ್ನು ಹುಡುಕುವುದು, ಕೊಟ್ಟಿರುವ ಚಿತ್ರಗಳನ್ನು ಬಳಸಿಕೊಂಡು ಅಂದಿನ ಕಲೆ, ವಾಸ್ತು ಶಿಲ್ಪದ ಕುರಿತು ಅರ್ಥಮಾಡಿಕೊಳ್ಳಲು ಸುಗಮಕಾರರು ಸಹಾಯ ಮಾಡಬೇಕು. ಒಂದು ವೇಳೆ ಇನ್ನೂ ಕಡಿಮೆ ಸಾಮರ್ಥ್ಯ ಹೊಂದಿದ ಮಕ್ಕಳಿದ್ದರೆ ಅವರಿಗೆ ಸರಳವಾದ ಒಂದು ಅಥವಾ ಎರಡು ಚಿತ್ರಗಳನ್ನು ಮಾತ್ರ ಕೊಟ್ಟು ಗುರುತಿಸಲು ಹೇಳಬಹುದು. ಇನ್ನೂ ಕಡಿಮೆ ಸಾಮರ್ಥ್ಯ ಹೊಂದಿದ್ದರೆ ಅವರಿಗೆ ಪರಿಚಿತವಿರುವ ಯಾವುದೇ ಚಿತ್ರ ಕೊಟ್ಟು ಅದರಲ್ಲಿಯ ಅಂಶಗಳನ್ನು ಗುರುತಿಸಲು ತಿಳಿಸಬಹುದು.

### ಕಲಿಕಾ ಹಾಳೆ: 13

**ಚಟುವಟಿಕೆ:1 ಕಾಲಾನುಕ್ರಮದಲ್ಲಿ ಬರೆಯಲು ತಿಳಿಸುವುದು.**

ಸುಗಮಕಾರರು ಮಕ್ಕಳಿಗೆ, ಕಾಲರೇಖೆಗಳು ಇತಿಹಾಸದ ಬೋಧನಾ ಕ್ರಮದ ಅವಿಭಾಜ್ಯ ಅಂಗವಾಗಿ ಮಹತ್ವವನ್ನು ಪಡೆದುಕೊಳ್ಳುತ್ತವೆ. ಅಲ್ಲದೆ ಇವು ಇತಿಹಾಸವನ್ನು ಸುಲಭವಾಗಿ ಅರ್ಥೈಸಲು, ಪರಿಕಲ್ಪನೆ ಗಟ್ಟಿಗೊಳಿಸಲು ಸಹಾಯಕವಾಗಿವೆ ಎಂಬುದನ್ನು ಒತ್ತಿ ಹೇಳಬೇಕು. ಜೊತೆಗೆ ಮಕ್ಕಳು ತಮ್ಮ ವೈಯಕ್ತಿಕ ಜೀವನದ ವರ್ಷಗಳ ಆಧಾರದಲ್ಲಿ ಕಾಲ ರೇಖೆಯನ್ನು ರಚಿಸಲು ಅವಕಾಶವನ್ನು ನೀಡುವುದು. ಬಹುಮುಖ್ಯವಾಗಿ ಮಕ್ಕಳು ಸಾಮಾನ್ಯ ಶಕ ಪೂರ್ವ ಮತ್ತು ಸಾಮಾನ್ಯ ಶಕವರ್ಷದ ವ್ಯತ್ಯಾಸಗಳನ್ನು ತಿಳಿಯುವಂತಾಗಬೇಕು.

**ಚಟುವಟಿಕೆ:2** ಕೆಳಗೆ ನೀಡಲಾಗಿರುವ ಚಿತ್ರಗಳನ್ನು ನೋಡಿ ಅವುಗಳನ್ನು ನಿರ್ಮಾಣ ಮಾಡಿದ ರಾಜವಂಶಗಳ ಹೆಸರನ್ನು ಬರೆಯಿರಿ.

ಮಕ್ಕಳು ಗುಪ್ತ ಮತ್ತು ಮೌರ್ಯರ ಕಲೆ ವಾಸ್ತುಶಿಲ್ಪದ ಸರಳ ವ್ಯತ್ಯಾಸಗಳನ್ನು ಅರ್ಥೈಸಿಕೊಳ್ಳುವಂತೆ ಆಗಬೇಕು. ಬಹುಮುಖ್ಯವಾಗಿ ಅವರ ಶಿಲ್ಪಕಲೆಗಳಿಗೆ ಬಳಸುತ್ತಿದ್ದ ವಸ್ತುಗಳು, ದೇವಾಲಯಗಳನ್ನು ನಿರ್ಮಿಸುವ ಕೌಶಲತೆ, ಶ್ರಮದ ಅರಿವನ್ನು ಮಕ್ಕಳಲ್ಲಿ ತರುವುದು ಬಹುಮುಖ್ಯ.

**ಸಾರಾಂಶೀಕರಣ:** ಮೌರ್ಯರ ಅಶೋಕ ಚಕ್ರವರ್ತಿ ಇಂದಿಗೂ ಪ್ರಸ್ತುತ ಏಕೆ ಎಂಬುದನ್ನು ಸ್ಪಷ್ಟಪಡಿಸುವುದು. ಅವನ ಸಂದೇಶಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಭಾರತೀಯರು ರಾಷ್ಟ್ರೀಯ ಲಾಂಛನವಾಗಿ, ರಾಷ್ಟ್ರಧ್ವಜದ ಭಾಗವಾಗಿ ಅಶೋಕನ ಸಿಂಹ ಬೋಧಿಗೆ ಮತ್ತು ಅಶೋಕ ಚಕ್ರವನ್ನು ಬಳಸಿಕೊಳ್ಳುತ್ತಿದ್ದೇವೆ. ಇದರ ಮೂಲ ತಿರುಳನ್ನು ಮಕ್ಕಳು ಅರಿಯುವಂತಾಗಬೇಕು. ಯುದ್ಧವೆಂಬುದು ನಾಶ ಎಂಬ ಸಾರ್ವಕಾಲಿಕ ಸತ್ಯವನ್ನು ಮಕ್ಕಳಿಗೆ ಮನಮುಟ್ಟುವಂತೆ ತಲುಪಿಸುವುದು. ಯುದ್ಧ, ಜಗಳಗಳು ಯಾವಾಗಲೂ ನಷ್ಟವನ್ನು ಉಂಟುಮಾಡುತ್ತವೆ. ಶಾಂತಿಯ ಸಮಾಜವನ್ನು ಕಟ್ಟಲು ನಾವು ಯುದ್ಧದಿಂದ ಹೊರಗುಳಿಯಲೇಬೇಕು ಎಂಬ ಸಂದೇಶವನ್ನು ಅಶೋಕನಿಂದ ಪಡೆಯಬಹುದಾಗಿದೆ. ದೈನಂದಿನ ಜೀವನದ ಜಗಳಗಳು ಕೂಡಾ ನಮಗೆ ಯಾವ ರೀತಿಯ ಧನಾತ್ಮಕತೆಯನ್ನು ನೀಡುವುದಿಲ್ಲ. ಬದಲಾಗಿ ನಷ್ಟವನ್ನು ತರುತ್ತವೆ. ಮಾತುಕತೆಯಿಂದ ಸಮಸ್ಯೆಯನ್ನು ಸುಲಭವಾಗಿ ಶಾಂತಿಯುತವಾಗಿ ಬಗೆಹರಿಸಬಹುದು ಎಂಬುದನ್ನು ಸುಗಮಕಾರರು ಮಕ್ಕಳಿಂದಲೇ ಹೊರಹೊಮ್ಮಿಸಬೇಕು.

ಮೌಲ್ಯಮಾಪನ ಚಟುವಟಿಕೆ: ಕಲಿಕಾಹಾಳೆ 13ರಲ್ಲಿನ ಚಟುವಟಿಕೆ 3, ಬುದ್ಧನ ತತ್ವಗಳಿಗೂ ಹಾಗೂ ಅಶೋಕನ ಧಮ್ಮಕ್ಕೂ ಇರುವ ಸಾಮ್ಯತೆಗಳನ್ನು ಪಟ್ಟಿ ಮಾಡಿರಿ.

## ಕಲಿಕಾಂಶ: 6.2 ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳು

**ಕಲಿಕಾಫಲ: 11 ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳ ಬಗ್ಗೆ ತಿಳಿಯುವರು.**

**ಉದ್ದೇಶ :**

- ದಕ್ಷಿಣ ಭಾರತದ ಆಡಳಿತ ಪದ್ಧತಿ, ಕೃಷಿ, ಆರ್ಥಿಕತೆ, ಕಲೆ ಮತ್ತು ವಾಸ್ತುಶಿಲ್ಪದಲ್ಲಾದ ಬದಲಾವಣೆಗಳನ್ನು ಗುರುತಿಸಿ ಅಂದಿನ ಸಮಾಜವನ್ನು ಅರಿಯುವಂತಾಗಲು ಸುಗಮಕಾರರು ಪ್ರೋತ್ಸಾಹಿಸಬೇಕು.
- ದಕ್ಷಿಣ ಭಾರತವು ತನ್ನದೇ ಸ್ವತಂತ್ರವಾದ, ಆಡಳಿತ ವ್ಯವಸ್ಥೆ, ಸಾಮಾಜಿಕ, ಕಲೆ ವಾಸ್ತುಶಿಲ್ಪ, ಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದರ ಕುರಿತು ಅರ್ಥೈಸಿಕೊಳ್ಳಲು ಮಕ್ಕಳಿಗೆ ನೆರವು ನೀಡುವುದು.

**ಸಾಮಗ್ರಿಗಳು :–** ಪಠ್ಯ ಪುಸ್ತಕ, ಬಿಳಿ ಹಾಳೆ, ಉತ್ತರ ಮತ್ತು ದಕ್ಷಿಣ ಭಾರತದ ವಾಸ್ತು ಶೈಲಿಯ ಚಿತ್ರಗಳು, ಪೆನ್ಸಿಲ್, ಟ್ಯಾಗ್.

**ಪ್ರಕ್ರಿಯೆ :–** ಮಕ್ಕಳಿಗೆ ಗುಂಪುಗಳನ್ನು ಮಾಡಬಹುದು /ವೈಯಕ್ತಿಕವಾಗಿ/ಯೋಜನಾ (ಪ್ರೊಜೆಕ್ಟ್) ರೂಪದಲ್ಲಿ ಈ ಕಾರ್ಯವನ್ನು ನೀಡಬಹುದು. ಮಕ್ಕಳಿಗೆ ಪಠ್ಯಪುಸ್ತಕದ ಸಹಾಯ ಪಡೆದು ದಕ್ಷಿಣ ಭಾರತದ ವಿವಿಧ ಮನೆತನಗಳ ಕಾಲದ ಆಡಳಿತದಲ್ಲಾದ ಬದಲಾವಣೆಗಳನ್ನು ಇಂದಿನ ಆಡಳಿತ ಪದ್ಧತಿಯ ರಾಜರುಗಳ ಪದ್ಧತಿಗಳಿಗೆ ಹೋಲಿಸುವುದು.

### ಕಲಿಕಾ ಹಾಳೆ 14 ದಕ್ಷಿಣ ಭಾರತದ ರಾಜ ಮನೆತನಗಳು

ಸುಗಮಕಾರರು ದಕ್ಷಿಣ ಭಾರತದ ರಾಜರುಗಳನ್ನು ಪರಿಚಯಿಸುವುದು ಈ ಚಟುವಟಿಕೆಯ ಉದ್ದೇಶವಲ್ಲ. ಆದರೆ ಅಂದಿನ ರಾಜರು ಕೃಷಿ, ನೀರಾವರಿ, ಆಡಳಿತ, ಕಲೆ ವಾಸ್ತುಶಿಲ್ಪ, ಸಾಮಾಜಿಕ ಬದಲಾವಣೆಗಳಿಗೆ ನೀಡಿದ ಆದ್ಯತೆಯನ್ನು ಅರ್ಥಮಾಡಿಸುತ್ತಾ ಅವುಗಳನ್ನು ಇಂದಿನ ಕಾಲದ ಪದ್ಧತಿಗಳಿಗೆ ಹೋಲಿಸಿ ಅರ್ಥೈಸಿಕೊಳ್ಳಲು ಪ್ರೋತ್ಸಾಹಿಸುವುದು. ನೀರಾವರಿ ವ್ಯವಸ್ಥೆ, ಚೋಳರ ಗ್ರಾಮಾಡಳಿತ ಪದ್ಧತಿಯನ್ನು ಇಂದಿಗೂ ನಾವು ಆಧುನಿಕ ವ್ಯವಸ್ಥೆಗಳಲ್ಲಿ ಮಾದರಿಯಾಗಿ ಕಾಣುತ್ತಿದ್ದೇವೆ. ಅಂದರೆ ಅನುಕರಿಸುತ್ತಿದ್ದೇವೆ. ಇತಿಹಾಸದಿಂದಾಗುವ ಬಹುಮುಖ್ಯ ಅನುಕೂಲವೆಂದರೆ ಈ 'ಮಾದರಿಗಳ' ಅಂಶಗಳನ್ನು ಇಂದಿನ ಸಮಾಜಕ್ಕೆ ತಕ್ಕಂತೆ ಬಳಸಿಕೊಳ್ಳುವುದಾಗಿದೆ ಎಂಬುದನ್ನು ಮಕ್ಕಳಿಗೆ ತಿಳಿಸುವ ಉದ್ದೇಶವನ್ನು ಈ ಕಲಿಕಾಫಲ ಒಳಗೊಂಡಿದೆ.

**ಚಟುವಟಿಕೆ:**1 ದಕ್ಷಿಣ ಭಾರತದ ಪ್ರಮುಖ ರಾಜಮನೆತನಗಳನ್ನು ನೀಡಲಾಗಿದೆ ಇವುಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ.

**ಸಾರಾಂಶೀಕರಣ:** ಕಾಲಾನುಕ್ರಮಣಿಕೆಗೆ ಸುಗಮಕಾರರು ಮಗು ಎಲ್ಲಾ ಮಹತ್ವದ ವರ್ಷಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಎಂಬ ಗೋಜಿಗೆ ಹೋಗದೆ. ಪ್ರಮುಖ ಘಟನಾವಳಿಗಳನ್ನು ಒಂದು ಕ್ರಮಾನುಗತ ಮಾದರಿಯಲ್ಲಿ ಹಾಗೂ ಪರಿಕಲ್ಪನೆಗಳ ಆಧಾರದಲ್ಲಿ ಅರ್ಥಮಾಡಿಕೊಂಡು ಆ ವರ್ಷದ ಆಧಾರದಿಂದ ಹಿಂದಿನ ಘಟನೆಗಳು ಮತ್ತು ಮುಂದಿನ ಘಟನೆಗಳ ಕಾಲದ ಅಂದಾಜು ಮಾಡುವುದು. ಅದು ಸಹಜವಾಗಿ ವರ್ಷವನ್ನು ನೆನಪಿನಲ್ಲಿಟ್ಟುಕೊಳ್ಳುವಂತೆ ಮಾಡುವುದು. ಮುಂದೆ ಈ ವರ್ಷದ ಆಧಾರದಲ್ಲಿ ಹಿಂದಿನ ಘಟನೆಗಳು ಮತ್ತು ಮುಂದಿನ ಘಟನೆಗಳನ್ನು ಗುರುತಿಸುವಂತಾಗಬೇಕು. ಒಟ್ಟಾರೆಯಾಗಿ ಕಾಲಾನುಕ್ರಮಣಿಕೆ ಇತಿಹಾಸದ ಅವಿಭಾಜ್ಯ ಅಂಗವಾಗಿದೆ ಎಂಬುದನ್ನು ಮಕ್ಕಳು ತಿಳಿಯುವಂತೆ ಮಾಡುವುದು ಸುಗಮಕಾರ ಕಾರ್ಯವಾಗಿದೆ.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾ ಹಾಳೆ – 14 ಚಟುವಟಿಕೆ 2ರಲ್ಲಿ ನೀಡಿರುವ ಭಾರತದ ಭೂಪಟದಲ್ಲಿ ಶಾತವಾಹನರ ಕಾಲದ ಪ್ರಮುಖ ವ್ಯಾಪಾರ ಕೇಂದ್ರಗಳನ್ನ ಗುರುತಿಸಿ ಮತ್ತು ಇವರ ಕಾಲದಲ್ಲಿ ಕೃಷಿ ಮತ್ತು ವ್ಯಾಪಾರ ಅಭಿವೃದ್ಧಿ ಹೊಂದಲು ಪ್ರಮುಖ ಕಾರಣಗಳೇನಿರಬಹುದು ತಿಳಿಯಿರಿ.

## ಕಲಿಕಾ ಹಾಳೆ: 15 ಕಲೆ ಮತ್ತು ವಾಸ್ತುಶಿಲ್ಪ

**ಚಟುವಟಿಕೆ:** 1 ಈ ಕೆಳಗಿನ ದೇವಾಲಯಗಳನ್ನು ಸೂಕ್ಷ್ಮವಾಗಿ ಗಮನಿಸಿ. ಇವುಗಳ ಕಲೆ ಮತ್ತು ವಾಸ್ತುಶಿಲ್ಪದಲ್ಲಿರುವ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಗುರುತಿಸಿ.

## ಕಲಿಕಾ ಹಾಳೆ: 16 ಐತಿಹಾಸಿಕತೆ

ಸುಗಮಕಾರರು ಈ ಕಲಿಕಾ ಹಾಳೆಯಲ್ಲಿ, ಮಕ್ಕಳು ಕಲೆಯನ್ನು ಗೌರವಿಸುವ ಹಾಗೂ ಐತಿಹಾಸಿಕವಾಗಿ ಅವುಗಳ ಮಹತ್ವವನ್ನು ಅರಿಯುವಂತಾಗಬೇಕು. ಹಾಗೆಯೇ ಇತಿಹಾಸದ ಬಹುಮುಖ್ಯ ಉದ್ದೇಶ ಮಕ್ಕಳಲ್ಲಿ 'ಐತಿಹಾಸಿಕ ಪ್ರಜ್ಞೆಯನ್ನು' ಬೆಳೆಸುವುದಾಗಿದೆ. ಐತಿಹಾಸಿಕ ಪ್ರಜ್ಞೆ ಎಂದರೆ ತನ್ನ ಹಿಂದಿನವರಿಂದ ಬಂದ ವಸ್ತುಗಳು, ಅವರಿಂದ ರಚನೆಯಾದ ಕಲೆಗಳು, ದೇವಾಲಯಗಳು ಮತ್ತು ಸ್ಮಾರಕಗಳನ್ನು ಸಂರಕ್ಷಿಸುವ ಮನೋಭಾವವನ್ನು ಮಕ್ಕಳಲ್ಲಿ ತರುವುದೇ ಆಗಿದೆ. ಈ ಉದ್ದೇಶದಿಂದ ಕಲೆ–ಸಂಸ್ಕೃತಿಯ ಅಂಶಗಳಾದ ದೇವಾಲಯ, ಸ್ಮಾರಕಗಳನ್ನು ನೋಡಿದ ಕೂಡಲೇ ಮಕ್ಕಳು ಅಲ್ಲಿನ ಶ್ರಮ, ಅಲ್ಲಿನ ವಿಶೇಷತೆಗಳನ್ನು ಗೌರವಿಸುವುದಲ್ಲದೇ, ಯಾವುದೇ ಹಾನಿ ಮಾಡದೇ ಹೆಮ್ಮೆಯ ಭಾವ ತಾಳುವಂತೆ ಮಾಡಬೇಕಾಗಿದೆ.

ಸಾರಾಂಶೀಕರಣ: ಸುಗಮಕಾರರು ಈ ಕಲಿಕಾಹಾಳೆಯಲ್ಲಿ, ಮಕ್ಕಳು ಕಲೆಯನ್ನು ಗೌರವಿಸುವ ಹಾಗೂ ಐತಿಹಾಸಿಕವಾಗಿ ಅವುಗಳ ಮಹತ್ವವನ್ನು ಅರಿಯುವಂತಾಗಬೇಕು. ಹಾಗೆಯೇ ಇತಿಹಾಸದ ಬಹುಮುಖ್ಯ ಉದ್ದೇಶ ಮಕ್ಕಳಲ್ಲಿ 'ಐತಿಹಾಸಿಕ ಪ್ರಜ್ಞೆಯನ್ನು' ಬೆಳೆಸುವುದಾಗಿದೆ. ಐತಿಹಾಸಿಕ ಪ್ರಜ್ಞೆ ಎಂದರೆ ತನ್ನ ಹಿಂದಿನವರಿಂದ ಬಂದ ವಸ್ತುಗಳು, ಅವರಿಂದ ರಚನೆಯಾದ ಕಲೆಗಳು, ದೇವಾಲಯಗಳು ಮತ್ತು ಸ್ಮಾರಕಗಳನ್ನು ಸಂರಕ್ಷಿಸುವ ಮನೋಭಾವವನ್ನು ಮಕ್ಕಳಲ್ಲಿ ತರುವುದೇ ಆಗಿದೆ. ಈ ಉದ್ದೇಶದಿಂದ ಕಲೆ–ಸಂಸ್ಕೃತಿಯ ಅಂಶಗಳಾದ ದೇವಾಲಯ, ಸ್ಮಾರಕಗಳನ್ನು ನೋಡಿದ ಕೂಡಲೇ ಮಕ್ಕಳು ಅಲ್ಲಿನ ಶ್ರಮ, ಅಲ್ಲಿನ ವಿಶೇಷತೆಗಳನ್ನು ಗೌರವಿಸುವುದಲ್ಲದೇ, ಯಾವುದೇ ಹಾನಿ ಮಾಡದೆ ಹೆಮ್ಮೆಯ ಭಾವ ತಾಳುವಂತೆ ಮಾಡಬೇಕಾಗಿದೆ.

**ಮೌಲ್ಯಮಾಪನ ಚಟುವಟಿಕೆ :** ಕಲಿಕಾಹಾಳೆ 16ರಲ್ಲಿನ ಚಟುವಟಿಕೆ 6, ಮಕ್ಕಳೇ ಇತಿಹಾಸ ರಚನೆಗೆ ಸಹಕಾರಿಯಾಗಬಲ್ಲ ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿ. ಹಾಗಾದರೆ ನಾವು ಐತಿಹಾಸಿಕ ಸ್ಥಳಕ್ಕೆ ಭೇಟಿ ನೀಡಿದಾಗ ಯಾವುದನ್ನು ಮಾಡಬೇಕು? ಯಾವುದನ್ನು ಮಾಡಬಾರದು? ಎಂಬುದನ್ನು ಪಟ್ಟಿ ಮಾಡಿ.

### ಕಲಿಕಾಂಶ 7.1 ಮಧ್ಯಕಾಲೀನ ಭಾರತದ ಕಾಲಗಣನೆ

ಕಲಿಕಾ ಫಲ: ಉತ್ತರ ಮತ್ತು ದಕ್ಷಿಣ ಭಾರತಕ್ಕೆ ಸಂಬಂಧಿಸಿದ ಐತಿಹಾಸಿಕ ಘಟನೆಗಳ ಕಾಲಗಣನೆಯನ್ನು ಅರ್ಥೈಸಿಕೊಳ್ಳುವರು.

**ಉದ್ದೇಶ:**

- ಮಧ್ಯಕಾಲೀನ ಭಾರತ ಇತಿಹಾಸದ ಘಟನೆಗಳ ಆಧಾರದ ಮೇಲೆ ಕ್ರಮಾನುಗತವಾಗಿ ಗುರುತಿಸುವ ಕೌಶಲ್ಯವನ್ನು ವೃದ್ಧಿಸುವುದು.
- ಸಮಕಾಲೀನ ರಾಜಮನೆತನಗಳು ಮತ್ತು ಅವುಗಳ ಕಾಲಘಟ್ಟಗಳನ್ನು ತಿಳಿಯುವುದು.

**ಪ್ರಕ್ರಿಯೆ:** ಮಕ್ಕಳ ಕುಟುಂಬದ ಕಾಲರೇಖೆಯನ್ನು ತಯಾರಿಸಲು ಪ್ರೇರೇಪಿಸಿ ಅದರ ಮೂಲಕ ಇತಿಹಾಸದಲ್ಲಿ ಕಾಲರೇಖೆಯ ಮಹತ್ವವನ್ನು ಮನದಟ್ಟು ಮಾಡಿಸಬೇಕು. ಮಧ್ಯಕಾಲೀನ ಭಾರತದ ಇತಿಹಾಸವನ್ನು ಪರಿಚಯಿಸಿ ಮಕ್ಕಳಿಂದಲೇ ಕಾಲರೇಖೆಯನ್ನು ತಯಾರಿಸುವುದು. ಕಾಲರೇಖೆಯ ಆಧಾರದ ಮೇಲೆ ಪ್ರತಿಯೊಂದು ಕಾಲಘಟ್ಟದ ಅಥವಾ ಘಟನೆಗಳ ಕುರಿತು ಮಾಹಿತಿಯೊಂದಿಗೆ ಮಕ್ಕಳ ಜೊತೆ ಚರ್ಚೆ ಮಾಡುವುದು.

### ಕಲಿಕಾ ಹಾಳೆ 17 ಬಿಟ್ಟ ಸ್ಥಳ ತುಂಬೋಣ

**ಚಟುವಟಿಕೆ:**1 ಕೆಳಗಿನ ಘಟನೆಗಳನ್ನು ಕೊಟ್ಟಿರುವ ಖಾಲಿ ಜಾಗದಲ್ಲಿ ಕಾಲಾನುಕ್ರಮದಲ್ಲಿ ಜೋಡಿಸಿ ಬರೆಯಿರಿ.

ಕಾಲಾನುಕ್ರಮವನ್ನಿಟ್ಟುಕೊಂಡು ಮಕ್ಕಳೊಂದಿಗೆ ಏಕೆ? ಮತ್ತು ಹೇಗೆ? ಎಂಬ ಪ್ರಶ್ನೆಗಳನ್ನಿಟ್ಟುಕೊಂಡು ಚರ್ಚಿಸಿ.

**ಚಟುವಟಿಕೆ:**2 ಕಾಲಗಣನೆಯ ಪಟ್ಟಿಯ ಮೇಲೆ ಕೊಟ್ಟಿರುವ ಘಟನೆಗಳನ್ನು ಸೂಕ್ತವಾದ ಸ್ಥಳದಲ್ಲಿ ಗುರುತಿಸಿ.

ಕಾಲಾನುಕ್ರಮ ರೇಖೆಯಲ್ಲಿ ಕಾಲವನ್ನು ಗುರುತಿಸಲು ಮಾರ್ಗದರ್ಶನ ನೀಡಬೇಕು ಮತ್ತು ಇದೇ ಮಾದರಿಯ ಬೇರೆ ಬೇರೆ ಕಾಲರೇಖೆಗಳನ್ನು ಬೇರೆ ಬೇರೆ ಸನ್ನಿವೇಶಗಳಲ್ಲಿ ಬಳಕೆ ಮಾಡಿಕೊಳ್ಳಬೇಕು.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾ ಹಾಳೆ 17ರ ಚಟುವಟಿಕೆ 2ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 7.2 ಮಧ್ಯಕಾಲೀನ ಆಡಳಿತ ಪದ್ದತಿಗಳು

**ಕಲಿಕಾ ಫಲ :** ಮಧ್ಯಕಾಲೀನ ಆಡಳಿತ ಪದ್ದತಿಗಳನ್ನು ಪಟ್ಟಿ ಮಾಡಿ ವ್ಯಾಖ್ಯಾನಿಸುವುದು

**ಉದ್ದೇಶಗಳು:**

- ಮಧ್ಯಕಾಲೀನ ಭಾರತದ ವಿವಿಧ ಆಡಳಿತ ಪದ್ಧತಿಗಳನ್ನು ಹೋಲಿಕಾತ್ಮಕವಾಗಿ ಅಧ್ಯಯನ ಮಾಡುವುದು.
- ಆಡಳಿತ ಪದ್ಧತಿಯಲ್ಲಿನ ಅನುಕೂಲ ಮತ್ತು ಅನಾನುಕೂಲಗಳನ್ನು ಅರ್ಥಮಾಡಿಕೊಂಡು ಪ್ರಸ್ತುತ ಸನ್ನಿವೇಶಕ್ಕೆ ಅಗತ್ಯವಿರುವ ಅಂಶಗಳನ್ನು ಗುರುತಿಸುವುದು.

**ಕಲಿಕಾ ಸಾಮಗ್ರಿಗಳು:** ಪಠ್ಯ ಪುಸ್ತಕ, ನಕಾಶೆಗಳು, ನಕಲು ಭೂದಾಖಲೆ

**ಕಲಿಕಾ ಹಾಳೆ 18 ನಕಾಶೆಯಲ್ಲಿ ವಿವಿಧ ಆಡಳಿತ ಪದ್ಧತಿಗಳು ಜಾರಿಯಲ್ಲಿದ್ದ ಪ್ರದೇಶಗಳನ್ನು ಗುರುತಿಸೋಣ.**

**1.ಚಟುವಟಿಕೆ:** ಮೇಲೆ ಓದಿ ತಿಳಿದುಕೊಂಡ ಆಡಳಿತ ಪದ್ಧತಿಗಳು ಜಾರಿಯಲ್ಲಿದ್ದ ಪ್ರದೇಶಗಳ ನಕ್ಷೆಯನ್ನು ಈ ಕೆಳಗೆ ನೀಡಲಾಗಿದೆ. ಅವುಗಳನ್ನು ನಾವು ಗಮನಿಸೋಣ. ಚೆನ್ನಾಗಿ ಗಮನಿಸಿ ಅರ್ಥೈಸಿಕೊಳ್ಳೋಣ.

**2.ಚಟುವಟಿಕೆ:** ಮೇಲಿನ ನಕ್ಷೆಗಳಲ್ಲಿ ವಿವಧ ಆಡಳಿತ ಪದ್ಧತಿಗಳನ್ನು ಗಮನಿಸಿದ್ದೀರಿ. ಈಗ ಭಾರತದ ನಕಾಶೆಯ ಮೇಲೆ ಇಕ್ತಾ, ಮನ್ಸಬ್ದಾರಿ ಮತ್ತು ನಾಯಂಕಾರ ಪದ್ಧತಿಗಳು ಚಾಲ್ತಿಯಲ್ಲಿದ್ದ ಪ್ರದೇಶಗಳನ್ನು ಗುರುತಿಸಿ.

1 ಮತ್ತು 2 ನೇ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪಠ್ಯಪುಸ್ತಕ/ಚಟುವಟಿಕೆ ಪುಸ್ತಕದಲ್ಲಿರುವ ನಕ್ಷೆಯ ಜೊತೆಗೆ ಶಾಲೆಯಲ್ಲಿರುವ ಭಾರತದ ನಕಾಶೆಯನ್ನು ನೀಡಿ ಗಮನಿಸಲು ಸೂಚಿಸುವುದು. ನಂತರ 2 ನೇ ಚಟುವಟಿಕೆಯನ್ನು ಮಾಡಿಸುವುದು. ಸಾಧ್ಯವಾದಷ್ಟು ಮಕ್ಕಳಿಂದಲೇ ಸ್ಥಳಗಳನ್ನು ಗುರುತಿಸಲು ಪ್ರೋತ್ಸಾಹಿಸಬೇಕು. ಸುಗಮಕಾರರು ಮಾರ್ಗದರ್ಶನ ಮಾಡುತ್ತಾ ಮಕ್ಕಳಿಗೆ ಸೂಚನೆಗಳನ್ನು ಒದಗಿಸಬಹುದು. ಉದಾ: ಮಕ್ಕಳಿಗೆ ಸ್ಥಳ ಗುರುತಿಸುವಿಕೆ ಕಷ್ಟವಾಗುತಿದ್ದರೆ ಅದು ಯಾವ ರಾಜ್ಯ/ಜಿಲ್ಲೆಯಲ್ಲಿ ಬರುತ್ತದೆ ಇತ್ಯಾದಿ.

**3.ಚಟುವಟಿಕೆ:** ಇಕ್ತಾ, ಮನ್ಸಬ್ದಾರಿ ಹಾಗೂ ನಾಯಂಕಾರ ಪದ್ದತಿಗಳಲ್ಲಿ ಕಂಡುಬರುವ ಸಾಮ್ಯತೆಗಳನ್ನು ಪಟ್ಟಿಮಾಡೋಣ.

ಮಕ್ಕಳ ಉತ್ತರಗಳನ್ನು ಕ್ರೋಢೀಕರಿಸಿ ಇಂದಿನ ಆಡಳಿತ ಪದ್ಧತಿಯಲ್ಲಿ ಕಂಡುಬರುವ ಅಂಶಗಳನ್ನು ಹೋಲಿಕೆ ಮಾಡುತ್ತಾ ಯಾವುದು ಸೂಕ್ತ ಎಂಬುದನ್ನು ಮಕ್ಕಳ ನಿರ್ಧಾರಕ್ಕೆ ಬಿಡಬೇಕು.

**ಅಲ್ಲಾವುದ್ದೀನ್ ಖಿಲ್ಜಿಯ ಮಾರುಕಟ್ಟೆ ಸುಧಾರಣೆ**

**4.ಚಟುವಟಿಕೆ:** ಅಲ್ಲಾವುದ್ದೀನ್ ಖಿಲ್ಜಿಯ ಮಾರುಕಟ್ಟೆ ವ್ಯವಸ್ಥೆ ಹಾಗೂ ಇಂದಿನ ಮಾರುಕಟ್ಟೆ ವ್ಯವಸ್ಥೆಯ ಸಾಮ್ಯತೆ ಹಾಗೂ ವ್ಯತ್ಯಾಸಗಳು. ಎರಡರ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಕ್ರೋಢೀಕರಿಸಿ ಈ ಎರಡರಲ್ಲಿ ಯಾವೆಲ್ಲಾ ಉತ್ತಮ ಅಂಶಗಳನ್ನು ಇಂದಿನ ಮಾರುಕಟ್ಟೆ ವ್ಯವಸ್ಥೆಯಲ್ಲಿ ನಾವು ಅಳವಡಿಸಿಕೊಂಡಿದ್ದೇವೆ/ಅಳವಡಿಸಿಕೊಳ್ಳಬಹುದು? ಎಂಬ ಪ್ರಮುಖಾಂಶಗಳನ್ನು ಪಟ್ಟಿ ಮಾಡುತ್ತಾ, ಮಾರುಕಟ್ಟೆಯಲ್ಲಾಗಬೇಕಾದ ಸುಧಾರಣೆಗಳ ಬಗ್ಗೆ ಚರ್ಚೆ ಮಾಡುವುದು.

**ಕಲಿಕಾ ಹಾಳೆ 19**

**1.ಚಟುವಟಿಕೆ:** ಫಿರೋಜ್ ಷಾ ತುಘಲಕ್ ಹಾಗೂ ಇಂದಿನ ರೈತ ಯೋಜನೆಗಳ ನಡುವಿನ ಸಾಮ್ಯತೆಗಳನ್ನು ಪಟ್ಟಿ ಮಾಡುವಿರಾ?

**2.ಚಟುವಟಿಕೆ:** ರೈತ ಸಾಲ ಮನ್ನಾ ಮಾಡುವುದರ ಉದ್ದೇಶ ಮತ್ತು ಅದರ ಪರಿಣಾಮಗಳನ್ನು ತರಗತಿಯಲ್ಲಿ ಶಿಕ್ಷಕರ ಸಹಾಯದೊಂದಿಗೆ ನಿಮ್ಮ ಸ್ನೇಹಿತರೊಂದಿಗೆ ಚರ್ಚೆ ಮಾಡಿ.

ಮಕ್ಕಳಿಗೆ ತಮ್ಮ ಪೋಷಕರು ಅಥವಾ ಹಿರಿಯರೊಂದಿಗೆ ಮಾಹಿತಿಯನ್ನು ತಿಳಿದು ತರಗತಿಯಲ್ಲಿ ಚರ್ಚೆ ಮಾಡಲು ಮುಕ್ತ ಅವಕಾಶ ನೀಡುವುದು. ಸುಗಮಕಾರರು ರೈತಸಾಲ ಮನ್ನಾ ಯೋಜನೆಯ ಸಾಧಕ ಭಾದಕಗಳ ಬಗ್ಗೆ ಮಾಹಿತಿ ಒದಗಿಸಿ ಅಂತಿಮ ನಿರ್ಧಾರವನ್ನು ಮಕ್ಕಳ ವಿವೇಚನೆಗೆ ಬಿಡುವುದು.

## ಕಲಿಕಾಂಶ 7.3 ಮಧ್ಯಕಾಲದ ಭಾರತದಲ್ಲಿ ಧಾರ್ಮಿಕತೆಯ ಮೇಲೆ ಸೂಫಿಗಳ ಪ್ರಭಾವ

**ಕಲಿಕಾ ಫಲ : ಮಧ್ಯಕಾಲೀನ ಆಡಳಿತ ಪದ್ದತಿಗಳನ್ನು ಪಟ್ಟಿ ಮಾಡಿ ವ್ಯಾಖ್ಯಾನಿಸುವುದು**

**ಉದ್ದೇಶ:**

- ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗೆ ಕಾರಣರಾದ ಭಕ್ತಿ ಮತ್ತು ಸೂಫಿ ಸಂತರ ಬಗ್ಗೆ ತಿಳಿದುಕೊಳ್ಳುವರು.
- ಭಕ್ತಿ ಮತ್ತು ಸೂಫಿ ಸಂತರ ತತ್ವಗಳು, ಆದರ್ಶಗಳು ಮತ್ತು ಅನುಸರಿಸಿದ ವಿಧಾನಗಳ ಬಗ್ಗೆ ಅರ್ಥಮಾಡಿಕೊಳ್ಳುವರು.

**ಕಲಿಕಾ ಹಾಳೆ 14 ಸೂಫಿ ಪಂಥ**

**ಚಟುವಟಿಕೆ:** 1. ಸೂಫಿ ಸಂತರು ಯಾವ ಯಾವ ಸಮಾಜದ ನ್ಯೂನ್ಯತೆಗಳನ್ನು ಸರಿಪಡಿಸಲು ಪ್ರಯತ್ನಿಸಿದ್ದರು? ಪಟ್ಟಿ ಮಾಡುವಿರಾ.

ಮಕ್ಕಳು ಪಟ್ಟಿ ಮಾಡಿದ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಇಂದಿನ ಕಾಲದಲ್ಲಿನ ಸಾಮಾಜಿಕ ನ್ಯೂನ್ಯತೆಗಳ ಬಗ್ಗೆ ತಿಳಿಸಿ, ಪರಿಹಾರಗಳ ಬಗ್ಗೆ ಮಕ್ಕಳ ಅಭಿಪ್ರಾಯವನ್ನು ಸಂಗ್ರಹಿಸಿ ಮಕ್ಕಳಲ್ಲಿ ಹೋಲಿಕಾತ್ಮಕ ಅಧ್ಯಯನದ ಮನೋಭಾವವನ್ನು ಬೆಳೆಸುವುದು.

**ಚಟುವಟಿಕೆ:** 2. ಕೆಳಗೆ ನೀಡಲಾಗಿರುವ ಚಿತ್ರಗಳು ಸೂಫಿ ಸಂತರಿಗೆ ಸಂಬಂಧಿಸಿವೆ. ನೀವು ಅವುಗಳಿರುವ ಸ್ಥಳ ಹಾಗೂ ಅವುಗಳ ಬಗ್ಗೆ ಮಾಹಿತಿಯನ್ನು ತಿಳಿದುಕೊಂಡು ನಿಮ್ಮ ಸ್ನೇಹಿತರೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳಿ.

ನಕ್ಷೆಗಳ ಮೂಲಕ ಸ್ಥಳಾನ್ವೇಷಣೆ ಹಾಗೂ ಅವುಗಳ ಇತಿಹಾಸವನ್ನು ಅರಿಯುವಂತೆ ಮಾಡುವುದು. ಸ್ಥಳಗಳಿಗೆ ಸಂಬಂಧಿಸಿದಂತೆ ಇತರ ಕಲಿಕಾಂಶಗಳಲ್ಲಿಯೂ ಈ ಚಟುವಟಿಕೆಯನ್ನು ಮಾಡಿಸಬಹುದು.

**ಚಟುವಟಿಕೆ:** 3. ಕೆಳಗೆ ನೀಡಲಾಗಿರುವ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿ ಉತ್ತರಿಸಿ.

ಚಿತ್ರಗಳ ಮೂಲಕ ಇತಿಹಾಸವನ್ನು ತಿಳಿಸುವ ಪ್ರಯತ್ನವನ್ನು ಮಾಡಬಹುದು. ಇದಕ್ಕಾಗಿ ಇನ್ನಿತರ ಚಿತ್ರಗಳನ್ನೂ ಬಳಕೆ ಮಾಡಿಕೊಳ್ಳಬಹುದು ಹಾಗೂ ಇತರ ಕಲಿಕಾಂಶಗಳಲ್ಲಿಯೂ ಇದನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಳ್ಳಬಹುದು ಮತ್ತು ಚಿತ್ರ ನೋಡಿ ಇತಿಹಾಸ ರಚನಾ ಚಟುವಟಿಕೆಯನ್ನೂ ಮಾಡಿಸಬಹುದು.

**ಚಟುವಟಿಕೆ:** 4. ಕೆಳಗಿನ ಪಟ್ಟಿಯಲ್ಲಿ ಭಕ್ತಿಪಂಥದ ದಾರ್ಶನಿಕರು ಹಾಗೂ ಅವರು ಪ್ರತಿಪಾದಿಸಿದ ತತ್ವಗಳನ್ನು ನೀಡಲಾಗಿದೆ. ಅವುಗಳನ್ನು ಸರಿ ಹೊಂದಿಸಿ ಬರೆಯಿರಿ.

**ಚಟುವಟಿಕೆ:** 5. ಕೊಟ್ಟಿರುವ ದಾರ್ಶನಿಕರ ತತ್ವಗಳ ಬಗ್ಗೆ ನೀವೇನು ತಿಳಿದುಕೊಂಡಿದ್ದೀರಿ ತಿಳಿಸುವಿರಾ?

ದಾರ್ಶನಿಕರ ತತ್ವಗಳನ್ನು ಅರ್ಥಮಾಡಿಕೊಂಡಿದ್ದಾರೆಯೇ ಎಂಬುದನ್ನು ಉಪ ಪ್ರಶ್ನೆಗಳ ಮೂಲಕ ತಿಳಿದುಕೊಳ್ಳಲು ಪ್ರಯತ್ನಿಸುವುದು ಹಾಗೂ ಎಲ್ಲಾ ದಾರ್ಶನಿಕರ ತತ್ವಭೋಧನೆಗಳು ಬೇರೆ ಬೇರೆಯಾಗಿದ್ದರೂ ಸಹ ಅವರ ಪ್ರಮುಖ ಉದ್ದೇಶ ಸಾಮಾಜಿಕ ಸುಧಾರಣೆ ಮಾತ್ರ ಆಗಿತ್ತು ಎಂಬ ಮನೋಭಾವನೆಯನ್ನು ಮಕ್ಕಳಲ್ಲಿ ತರಬೇಕು.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾ ಹಾಳೆ 14ರ ಚಟುವಟಿಕೆ 5ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

**ಕಲಿಕಾಂಶ 7.4 ಮಧ್ಯಕಾಲೀನ ಭಾರತದ ಕಲೆ ವಾಸ್ತುಶಿಲ್ಪ**

| **ಕಲಿಕಾ ಫಲ: ಮಧ್ಯಯುಗೀನ ಕಾಲದಲ್ಲಾದ ಸಮಾಜೋ–ಧಾರ್ಮಿಕ ಬದಲಾವಣೆಗಳನ್ನು ವಿವರಿಸುವರು.** |
|---|

**ಕಲಿಕಾ ಹಾಳೆ 21 & ಕಲಿಕಾ ಹಾಳೆ–22**

**ಉದ್ದೇಶ:** ಮಕ್ಕಳು ಕಲೆ ವಾಸ್ತುಶಿಲ್ಪದಲ್ಲಾದ ಬದಲಾವಣೆಯನ್ನು ಅರಿತುಕೊಳ್ಳುವರು.

**ಕಲಿಕಾ ಸಾಮಗ್ರಿಗಳು.:** ಪೆನ್ನು, ಪೇಪರ್, ಮಧ್ಯಕಾಲದ ಚಿತ್ರಪಟಗಳು.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾ ಹಾಳೆ 22ರ ಚಟುವಟಿಕೆ 3, ಮಕ್ಕಳಿಗೆ ಮಧ್ಯಕಾಲೀನ ಭಾರತದ ಕಲೆ ವಾಸ್ತುಶಿಲ್ಪದ ಕುರಿತ ಮಾಹಿತಿಯನ್ನು ನೀಡಿ ನಂತರ ಅವುಗಳಲ್ಲಿನ ವತ್ಯಾಸಗಳನ್ನು ಪಟ್ಟಿ ಮಾಡಲು ತಿಳಿಸಿ.

**ಕಲಿಕಾಂಶ 8.1 ಆಧುನಿಕ ಭಾರತದ ಕಾಲಾನುಕ್ರಮ**

**ಉದ್ದೇಶ:** ಮಕ್ಕಳು ಆಧುನಿಕ ಭಾರತದ ಘಟನೆಗಳನ್ನು ಕ್ರಮಾನುಗತ ಮಾದರಿಯಲ್ಲಿ ಅರ್ಥೈಸಿಕೊಳ್ಳವಂತಾಗುವರು.

**ಸಾಮಗ್ರಿಗಳು.:** ಪೆನ್ನು, ಪೇಪರ್, ಘಟನಾವಳಿಗಳ ಚಾರ್ಟ್.

**ಕಲಿಕಾ ಹಾಳೆ–23**

**ಚಟುವಟಿಕೆ:** 1 ಕೊಟ್ಟಿರುವ ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿರಿ.

**ಮೌಲ್ಯಮಾಪನ ಚಟುವಟಿಕೆ:** ಮಕ್ಕಳಿಗೆ ಆಧುನಿಕ ಭಾರತದ ಘಟನೆಗಳ ಕುರಿತ ಮಾಹಿತಿಯನ್ನು ನೀಡಿ ನಂತರ ಕೆಲವು ಘಟನೆಗಳನ್ನು ನೀಡಿದಾಗ ಅವರು ಅವುಗಳನ್ನು ಒಂದು ಕಾಲಾನುಕ್ರಮದಲ್ಲಿ ಜೋಡಿಸುತ್ತಾರೆಯೇ? ಇಲ್ಲವೇ? ಹೆಚ್ಚು ಘಟನೆಗಳಿದ್ದು ಗುರುತಿಸಲು ಕಡಿಮೆ ಸಾಮರ್ಥ್ಯವಿದ್ದರೆ, ಕೆಲವು ಪ್ರಮುಖ ಘಟನೆಗಳನ್ನು ಮಾತ್ರ ಕೊಟ್ಟು ಮೌಲ್ಯಮಾಪನ ಮಾಡಬೇಕಾಗುತ್ತದೆ.

**ಕಲಿಕಾಂಶ–8.2 ಜಲಮಾರ್ಗದ ಅನ್ವೇಷಣೆ**

| **ಕಲಿಕಾ ಫಲ: ಏಷಿಯಾ ಖಂಡದಿಂದ ಯೂರೋಪ್ ಖಂಡವನ್ನು ತಲುಪಿದ ಸರಕುಗಳ ಕಥೆಯನ್ನು ರಚಿಸುವರು.** |
|---|

**ಉದ್ದೇಶ:** ಪ್ರಾಚೀನ ಭಾರತದ ವಸ್ತುಗಳು ವಿದೇಶಿ ವ್ಯಾಪಾರದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿದ್ದವು ಎಂಬುದನ್ನು ಮಕ್ಕಳು ಅರ್ಥಮಾಡಿಕೊಳ್ಳುವಂತೆ ಮಾಡಲು ಪ್ರೋತ್ಸಾಹಿಸುವುದು.

**ಕಲಿಕಾ ಸಾಮಗ್ರಿಗಳು:** ಜಾಗತಿಕ ನಕ್ಷೆ, ಪೆನ್ಸಿಲ್, ಪೇಪರ್.

**ಪ್ರಕ್ರಿಯೆ:** ಪ್ರಪಂಚದಲ್ಲಿ ಮಧ್ಯಕಾಲೀನ ಸಂದರ್ಭದಲ್ಲಿ ಕೆಲವು ಮಹತ್ವದ ಘಟನೆಗಳು ನಡೆದವು. ಅದರಲ್ಲಿ ಬಹುಮುಖ್ಯವಾಗಿ ಜಲಮಾರ್ಗದ ಮೂಲಕ ಭೂ ಅನ್ವೇಷಣೆ ಪ್ರಮುಖವಾದುದು. ಇಲ್ಲಿ ಮುಖ್ಯವಾಗಿ ಈ ಜಲಮಾರ್ಗಗಳ ಶೋಧನೆಯ ಹಿಂದಿರುವ ಉದ್ದೇಶಗಳನ್ನು (ಕಾರಣಗಳನ್ನು) ಮಕ್ಕಳು ಪಡೆಯುವಂತಾಗಬೇಕು. ಈ ಜಲಮಾರ್ಗಗಳ ಶೋಧನೆ ಹೇಗೆ ಪ್ರಪಂಚದ ಇತಿಹಾಸದಲ್ಲಿ ಮಹತ್ವ ಪಡೆದುಕೊಂಡಿದೆ ಎಂಬುದನ್ನು ಮಕ್ಕಳು ತಿಳಿಯಬೇಕು. ಕಾನಸ್ಟಾಂಟಿನೋಪಲ್ ನಗರದ ಪತನವು ಹೇಗೆ ಪ್ರಪಂಚದ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲಾಗಿದೆ ಎಂಬುದನ್ನು ಅರ್ಥೈಸಬೇಕು. ಸುಗಮಕಾರರು ಮುಖ್ಯವಾಗಿ ನಕ್ಷೆಗಳನ್ನು ಬಳಸಿಕೊಂಡು ಪರಿಕಲ್ಪನೆಗಳನ್ನು ಗಟ್ಟಿಗೊಳಿಸುವುದು ಹೆಚ್ಚು ಸೂಕ್ತ. ಇಲ್ಲಿ ಸುಗಮಕಾರರು ಬಳಸುವ ನಕ್ಷೆಗಳು ಮಕ್ಕಳೊಂದಿಗೆ ಹೆಚ್ಚು ಮಾತನಾಡಬೇಕು!

**ಚಟುವಟಿಕೆ :** 1 ಕಥೆ ಓದಿ, ಅರ್ಥಮಾಡಿಕೊಳ್ಳೋಣ, ನಂತರ ಪ್ರಶ್ನೆಗಳಿಗೆ ಉತ್ತರಿಸೋಣ.

ಇಲ್ಲಿ ನೀಡಿರುವ ಕಥೆಯಲ್ಲಿ ಬರುವ ಪದಾರ್ಥಗಳನ್ನು ಗಮನಿಸಿ ಮಕ್ಕಳೊಂದಿಗೆ ಅಂದು ಪ್ರಪಂಚದ ದೇಶ ದೇಶಗಳ ನಡುವಿನ ವ್ಯಾಪಾರಿ ಸಂಬಂಧ ಹೇಗಿತ್ತು ಎಂಬುದರ ಅರಿವನ್ನು ಮೂಡಿಸಬೇಕು. ಇಲ್ಲಿ ಶಿಕ್ಷಕರು ಹೆಚ್ಚಿನ ನಕ್ಷೆಗಳನ್ನು ಮತ್ತು ಯೂಟ್ಯೂಬ್ನ ವಿಡಿಯೋಗಳನ್ನು ಬಳಸಿಕೊಂಡು ಅಲ್ಲಿನ ಜನಜೀವನವನ್ನು ಅರ್ಥಮಾಡಿಕೊಳ್ಳಬೇಕು. ಅಂದಿನ ಪರಿಸ್ಥಿತಿಯ ಸ್ಥೂಲ ಚಿತ್ರಣ ಮಗುವಿನ ಮನಸ್ಸಿನಲ್ಲಿ ಮೂಡುವಂತೆ ಸುಗಮಕಾರರು ಮಾಡಬೇಕು.

**ಕಲಿಕಾ ಹಾಳೆ 24 ಹೊಸ ಮಾರ್ಗಗಳ ಶೋಧ**

**ಹೊಸ ಮಾರ್ಗಗಳ ಹುಡುಕಾಟಕ್ಕೆ ಕಾರಣಗಳು**

ಪ್ರಪಂಚದ ಭೂಪಟದ ಸಹಾಯದಿಂದ ಸುಗಮಕಾರರು ಪ್ರಮುಖ ಜಲ ಮಾರ್ಗಗಳು ಮತ್ತು ಅವುಗಳಿಗೆ ಹೊಂದಿಕೊಂಡ ಪ್ರಮುಖ ನಗರಗಳನ್ನು, ಪ್ರದೇಶಗಳನ್ನು ಮಕ್ಕಳು ಗುರುತಿಸುವಂತೆ ಮಾಡಬೇಕು. ಮುಖ್ಯವಾಗಿ ಇಲ್ಲಿ ಆ ನಗರ, ಪ್ರದೇಶಗಳಿಗೆ ಇಂದಿನ ಹೆಸರುಗಳ ಮೂಲಕ ಅವುಗಳನ್ನು ಪರಿಚಯಿಸುವುದು ಅತ್ಯಗತ್ಯ.

**ಮೌಲ್ಯಮಾಪನ ಚಟುವಟಿಕೆ:** ಮೌಲ್ಯಮಾಪನಕ್ಕಾಗಿ ಕಲಿಕಾ ಹಾಳೆ 19ರಲ್ಲಿರುವ ಅಂಶಗಳನ್ನೆ ಆಧಾರವಾಗಿಟ್ಟುಕೊಂಡು ಮಕ್ಕಳ ಕಲಿಕಾ ಮಟ್ಟವನ್ನು ಗುರುತಿಸಿಕೊಳ್ಳಬೇಕು

**ಕಲಿಕಾಂಶ–8.3 ಕಾನ್ಸ್ಟಾಂಟಿನೋಪಲ್ ಪತನ**

| **ಕಲಿಕಾ ಫಲ: ಅಟೋಮನ್ ಟರ್ಕರು ಕಾನಸ್ಟಾಂಟಿನೋಪಲ್ ವಶಪಡಿಸಿಕೊಂಡದ್ದು ಹೊಸ ಮಾರ್ಗಗಳ ಶೋಧಕ್ಕೆ ಕಾರಣವಾಯಿತು ಎಂಬುದರ ಕುರಿತು ಒಂದು ಕಥೆಯನ್ನು ರಚಿಸುವರು.** |
|---|

**ಉದ್ದೇಶ:**

- ಭಾರತಕ್ಕೆ ಬರಲು ಇರುವ ಏಕೈಕ ಭೂಮಾರ್ಗ ಮುಚ್ಚಲು ಕಾರಣಗಳನ್ನು ತಿಳಿದುಕೊಳ್ಳುವರು ಮತ್ತು ಅದು ಅಂದಿನ ವ್ಯಾಪಾರದ ಮೇಲೆ ಬೀರಿದ ಪ್ರಭಾವವನ್ನು ಗುರುತಿಸುವರು.
- ಯೂರೋಪಿಯನ್ನರ ಹೊಸ ಮಾರ್ಗ ಹುಡುಕುವ ಅನಿವಾರ್ಯತೆಯು ಜಲಮಾರ್ಗ ಶೋಧನೆಗೆ ಕಾರಣವಾಯಿತು ಎಂಬುದನ್ನು ಅರಿತುಕೊಳ್ಳುವರು.

**ಕಲಿಕಾ ಸಾಮಗ್ರಿ:** ವಿಶ್ವ ನಕಾಶೆ, ಪೆನ್ಸಿಲ್, ಡ್ರಾಯಿಂಗ್ ಹಾಳೆ.

**ಪ್ರಕ್ರಿಯೆ:** ಮಕ್ಕಳಿಗೆ ಮೊದಲು ಭಾರತದ ಸರಕುಗಳ ಬೇಡಿಕೆಯ ಕತೆಯನ್ನು ಹೇಳಿ ನಂತರ ಅವರಿಗೆ ಕಾನಸ್ಟಾಂಟಿನೋಪಲ್, ಮೊಜಾಂಬಿಕ್, ಸೂರತ್, ಮುಂಬೈ ಮುಂತಾದ ಬಂದರುಗಳು ಮತ್ತು ಪ್ರಮುಖ ವ್ಯಾಪಾರಿ ಕೇಂದ್ರಗಳನ್ನು ನಕ್ಷೆಯಲ್ಲಿ ತೋರಿಸಬೇಕು. ನಂತರ ಅವುಗಳ ಮಹತ್ವವನ್ನು ಹೇಳಬೇಕು. ನಕ್ಷೆ ಇಲ್ಲದೆ ಈ ಚಟುವಟಿಕೆ ಮಾಡುವುದು ಅಸಾಧ್ಯ. ದಯವಿಟ್ಟು ನಕ್ಷೆಯನ್ನು ಇಟ್ಟುಕೊಂಡು ಮಕ್ಕಳೊಂದಿಗೆ ಸ್ಥಳ ಗುರುತಿಸುವ ಆಟವಾಡುವುದು. ನಂತರ ಮಕ್ಕಳಿಗೆ ಆಡಿಸುವುದು. ಆನಂತರ ನಕಾಶೆಯಲ್ಲಿ

ಬೈಜಾಂಟಿಯನ್ ಸಾಮ್ರಾಜ್ಯ, ಅಟೋಮನ್ ಟರ್ಕ್ ಸಾಮ್ರಾಜ್ಯ, ಇಟಲಿ, ಅರೇಬಿಯಾ, ಕಾನ್ ಸ್ಟಾಂಟಿನೋಪಲಗಳನ್ನು ಗುರುತಿಸಲು ತಿಳಿಸುವುದು.

**ಕಲಿಕಾ ಹಾಳೆ– 25**

**ಮೌಲ್ಯಮಾಪನ:** ಕಲಿಕಾ ಹಾಳೆ ಚಟುವಟಿಕೆ–1 ಕಥೆಯನ್ನು ಓದಿ, ಯೋಚಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.

**ಕಲಿಕಾ ಹಾಳೆ 26 ಹೊಸ ಮಾರ್ಗಗಳು**

**ಕಲಿಕಾ ಫಲ: ವಿಶ್ವದ ಭೂಪಟದಲ್ಲಿ ಪ್ರಮುಖ ಸಮುದ್ರ ಮಾರ್ಗಗಳು ಮತ್ತು ಬಂದರುಗಳನ್ನು ಗುರುತಿಸುವರು.**

**ಚಟುವಟಿಕೆ :** 1 ವಿಶ್ವದ ಭೂಪಟದಲ್ಲಿ ಗುರುತಿಸುವಿರಿ.

**ಚಟುವಟಿಕೆ : 2** ವಾಸ್ಕೋ–ಡ–ಗಾಮಾ ಅವರು ಭಾರತಕ್ಕೆ ಬಂದ ಮಾರ್ಗ.

**ಮೌಲ್ಯಮಾಪನ ಚಟುವಟಿಕೆ:** ಚಟುವಟಿಕೆ 3 ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ ಹಾಳೆಯನ್ನು ಬಳಸಿಕೊಂಡು ಮಕ್ಕಳ ಕಲಿಕೆಯನ್ನು ಮೌಲ್ಯಮಾಪನ ಮಾಡಬಹುದು.

## ಕಲಿಕಾಂಶ 8.4

**ಜಲಮಾರ್ಗದಿಂದ ವ್ಯಾಪಾರಕ್ಕೆ ಬಂದ ಯುರೋಪಿಯನ್ನರು ಭಾರತವನ್ನು ವಶಕ್ಕೆ ಪಡೆದಿದ್ದು– ಸಾಮ್ರಾಜ್ಯ ವಿಸ್ತರಣೆ.**

**ಕಲಿಕಾಫಲ: ಈಸ್ಟ್ ಇಂಡಿಯಾ ಕಂಪನಿ ತನ್ನ ನಿಯಂತ್ರಣವನ್ನು ಮೈಸೂರು ಮತ್ತು ಮರಾಠಾ (ಯುದ್ದಗಳು ಮತ್ತು ಒಪ್ಪಂದಗಳು)ರ ಮೂಲಕ ಬಂಗಾದಿಂದ ಪಂಜಾಬದವರೆಗೆ ವಿಸ್ತರಿಸಿದ ಪರಿಯನ್ನು ವಿವರಿಸುವುದು.**

**ಉದ್ದೇಶ:**

- ಯೂರೋಪಿಯನ್ನರು ಭಾರತದಲ್ಲಿ ವಿಸ್ತಾರ ಹೊಂದಲು ನಮ್ಮಲ್ಲಿರುವ ದೋಷಗಳನ್ನು ಗುರುತಿಸಿಕೊಂಡು ಆತ್ಮಾವಲೋಕನ ಮಾಡಿಕೊಳ್ಳುವರು.
- ಅವರ ವಿಸ್ತಾರಕ್ಕೆ ನಾಲ್ಕು ಯುದ್ದಗಳು ಹೇಗೆ ಕಾರಣವಾದವು ಎಂಬುದನ್ನು ವಿಮರ್ಶಾತ್ಮಕವಾಗಿ ನೊಡುವರು.

**ಕಲಿಕಾ ಸಾಮಗ್ರಿಗಳು:** ಅಖಂಡ ಭಾರತದ ಖಾಲಿ ನಕಾಶೆ, ಕಲರ್ ಪೆನ್ಸಿಲ್, ಸೀಸ್ ಪೆನ್ಸಿಲ್, ಪಠ್ಯಪುಸ್ತಕ.

**ಪ್ರಕ್ರಿಯೆ:** ಮಕ್ಕಳಿಗೆ ಮೊದಲು ಪುಸ್ತಕದಲ್ಲಿ ಅವರು ಓದಬೇಕಾದ ಅಥವಾ ನೋಡಬೇಕಾದ ವಿಷಯಗಳನ್ನು ಗುರುತಿಸಲು ತಿಳಿಸಿ ನಂತರ ವೈಯಕ್ತಿಕವಾಗಿ ಓದಲು ತಿಳಿಸಬೇಕು. ನಂತರ ಗುಂಪುಗಳನ್ನು ಮಾಡಿ ಅವರಿಗೆ ಗುಂಪಿನಲ್ಲಿ ಒಂದೊಂದು ನಕಾಶೆಯನ್ನು ನೀಡಿ ಅದರಲ್ಲಿ ಬ್ರಿಟಿಷರು ಒಂದೊಂದು ಯುದ್ದದ ನಂತರ ಭಾರತದಲ್ಲಿ ಅವರು ಪಡೆದುಕೊಂಡ ಪ್ರದೇಶಗಳನ್ನು ಒಂದೊಂದು ಬಣ್ಣದಿಂದ ಗುರುತಿಸಲು ತಿಳಿಸಬೇಕು. ಆನಂತರ ಅವರು ಗುರುತಿಸಿದ್ದನ್ನು ತಂಡದ ಹೆಸರು ಬರೆದು ಗೋಡೆಯ ಮೇಲೆ ನೇತು ಹಾಕಬೇಕು.

**ಕಲಿಕಾ ಹಾಳೆ –27 ಬ್ರಿಟಿಷರ ಸಾಮ್ರಾಜ್ಯ ವಿಸ್ತರಣೆ**

**ಭಾರತ ವಶವಾದ ಯುದ್ಧದ ಕಾರಣ ಮತ್ತು ಪರಿಣಾಮಗಳು**

ಸುಗಮಕಾರರು ಬ್ರಿಟಿಷರು ಹಂತಹಂತವಾಗಿ ಭಾರತದಲ್ಲಿ ನೆಲೆಯೂರಲು ಕಾರಣವಾದ ಪ್ರಮುಖ ನಾಲ್ಕು ಯುದ್ದಗಳಲ್ಲಿಯೇ ಭಾರತ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು ಎಂದು ಆ ಯುದ್ಧಗಳನ್ನು ಪರಿಚಯಿಸುವುದು. ಇಲ್ಲಿ ಮುಖ್ಯವಾಗಿ ಸುಗಮಕಾರರು ಬ್ರಿಟಿಷರು ಭಾರತದ ನಿರ್ದಿಷ್ಟ ದಿಕ್ಕುಗಳನ್ನು ಗುರಿಯಾಗಿಸಿಕೊಂಡು ನಡೆಸಿದ ಯುದ್ಧಗಳನ್ನು ವಿವರಿಸುವುದು. ಬ್ರಿಟಿಷರ ಆಡಳಿತ ತಂತ್ರಗಳನ್ನು ಮಕ್ಕಳು ಗುರುತಿಸುವಂತಾಗಬೇಕು, ಒಟ್ಟಾರೆಯಾಗಿ ಭಾರತವನ್ನು ಯೋಜನಾ ಬದ್ಧವಾಗಿ ಬ್ರಿಟಿಷರು ತಮ್ಮ ಹಿಡಿತಕ್ಕೆ ಪಡೆದುದನ್ನು ಮಕ್ಕಳು ತಿಳಿಯುವಂತಾಗಬೇಕು. ಈ ಯುದ್ಧಗಳ ಪರಿಣಾಮದಿಂದ ಭಾರತದ ಬಹುತೇಕ ಆಡಳಿತ ಬ್ರಿಟಿಷ್ ಈಸ್ಟ್ ಇಂಡಿಯಾದ ಕೈ ಸೇರಿತು, ಇದು ಭಾರತದ ಇತಿಹಾಸದಲ್ಲಿನ ಪ್ರಮುಖ ಘಟನಾವಳಿಗಳಲ್ಲಿ ಒಂದಾಗಿದೆ.

**ಚಟುವಟಿಕೆ :** 1 **ಯುದ್ಧದ ಕಾರಣ ಮತ್ತು ಪರಿಣಾಮಗಳು**

**ಕಲಿಕಾ ಹಾಳೆ–28 ಬ್ರಿಟಿಷರ ಆಡಳಿತದ ಪರಿಣಾಮಗಳು**

ಮೌಲ್ಯಮಾಪನ ಚಟುವಟಿಕೆ: ಇಲ್ಲಿ ಮೌಲ್ಯಮಾಪನ ಮಾಡಲು ಕಲಿಕಾ ಹಾಳೆ 28ರಲ್ಲಿ ಯಾವುದಾದರು 1 ಪ್ರಶ್ನೆಯನ್ನು ಬಳಸಿಕೊಳ್ಳಬಹುದು ಅಥವಾ ಸ್ವತಃ ಒಂದು ಪ್ರಶ್ನೆ ಪ್ರತಿಕೆಯನ್ನು ತಯಾರಿಸಿ ಕೂಡಾ ಮಾಡಬಹುದು.

**ಕಲಿಕಾಂಶ 8.5 ಭಾರತವು ಬ್ರಿಟೀಷರ ಕೈವಶವಾದ ನಂತರದ ಪರಿಣಾಮಗಳು**

| |
|---|
| **ಕಲಿಕಾಫಲ : ಭಾರತದಲ್ಲಿ ಬ್ರಿಟಿಷರ ಏಳಿಗೆಗೆ ಕಾರಣವಾದ ಅಂಶಗಳನ್ನು ಮತ್ತು ವಿವಿಧ ನೀತಿಗಳನ್ನು ಪಟ್ಟಿ ಮಾಡುತ್ತಾರೆ.** |

**ಉದ್ದೇಶ:**

- ಬ್ರಿಟಿಷರ ಆಡಳಿತದಿಂದ ಭಾರತದ ಉದ್ದಿಮೆಗಳು ಮತ್ತು ವಿಶೇಷವಾಗಿ ಕೃಷಿಯ ಮೇಲಾದ ಪರಿಣಾಮಗಳನ್ನು ಅರ್ಥೈಸಿಕೊಳ್ಳುವರು.
- ಕೃಷಿ ಮತ್ತು ಅಂದಿನ ಕಾಲದ ಬರಗಾಲಗಳು ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲೆ ಬೀರಿದ ಪ್ರಭಾವವನ್ನು ತಿಳಿದುಕೊಳ್ಳುವರು.

**ಕಲಿಕಾ ಸಾಮಗ್ರಿಗಳು:** ಭಾರತದ ಖಾಲಿ ನಕಾಶೆ, ಪೆನ್ಸಿಲ್, ಬರಗಾಲದ ಚಿತ್ರಪಟಗಳು, ಮೂರು ಕೃಷಿ ಪದ್ಧತಿಯನ್ನು ಓದಲು 7ನೇ ತರಗತಿ ಪಠ್ಯ ಪುಸ್ತಕ.

**ಪ್ರಕ್ರಿಯೆ :** ಮೊದಲಿಗೆ ಮಕ್ಕಳಿಗೆ ಬ್ರಿಟಿಷರ ಕಾಲದ ಮೂರು ಕೃಷಿ ಪದ್ಧತಿಗಳನ್ನು ಅರ್ಥೈಸಲು ಪಠ್ಯ ಪುಸ್ತಕದಲ್ಲಿ ವಿಷಯವನ್ನು ವೈಯಕ್ತಿಕವಾಗಿ ಓದಲು ತಿಳಿಸುವುದು. ಓದಿದ ನಂತರ ಮಕ್ಕಳ ಗುಂಪುಗಳನ್ನು ಮಾಡಿ ಅವರು ಓದಿದ್ದನ್ನು ಗುಂಪಿನಲ್ಲಿ ಚರ್ಚಿಸಿ ಬರೆಯಲು ತಿಳಿಸಬೇಕು. ಹಾಗೆ ಮಾಡುವ ಮೊದಲು ಕೆಲವು ಪ್ರಶ್ನೆಗಳನ್ನು ನೀಡಬೇಕು

1. ಜಮಿನ್ದಾರಿ ಎಂದರೇನು?
2. ಮಹಲ್ವಾರಿ ಎಂದರೇನು?
3. ರೈತವಾರಿ ಎಂದರೇನು?
4. ಇದರಲ್ಲಿ ರೈತರ ಪರ ಎನ್ನುವುದು ಯಾವುದಾದರೂ ಇದೆಯಾ? ಇಲ್ಲವಾದರೆ ಅದು ಹೇಗೆ ರೈತರನ್ನು ಶೋಷಿಸಿತು?

ನಂತರ ಬಂದ ಮಾನವ ನಿರ್ಮಿತ ಬರಗಾಲಗಳ ಚಿತ್ರಗಳನ್ನು ಗುಂಪಿಗೆ ನೀಡಿ, ಅವರಿಗೆ ಬರಗಾಲಗಳು ಜನರನ್ನು ಇನ್ನಿಲ್ಲದಂತೆ ಕಾಡಿದವು ಎಂಬುದು ಅರ್ಥಮಾಡಿಸುತ್ತಾ ಇಂದು ಬರಗಾಲ ಬಂದರೆ ಅವರೇನು ಮಾಡುತ್ತಾರೆ ಎಂಬುದು ಪಟ್ಟಿ ಮಾಡಲು ತಿಳಿಸಿರಿ ಮತ್ತು ಈ ಮೂರು ಪದ್ಧತಿಗಳು ಭಾರತದ ಯಾವ ಯಾವ ಪ್ರದೇಶದಲ್ಲಿ ಇದ್ದವು ಎಂಬುದನ್ನು ನಕ್ಷೆಯಲ್ಲಿ ಗುರುತಿಸಲು ತಿಳಿಸುವುದು. ಇಂದಿನ ಕಾಲದಲ್ಲಿಯ ಭೂದಾಖಲೆಗಳನ್ನು ತಿಳಿದುಕೊಳ್ಳಲು ತಮ್ಮ ಮನೆಯಲ್ಲಿ ತಂದೆ ತಾಯಿಯರ ಸಹಾಯ ಊರಲ್ಲಿ ಯಾರಾದರೂ ಹಿರಿಯರ ಸಹಾಯ ಪಡೆಯಲು ತಿಳಿಸಬೇಕು.

**ಕೃಷಿಯ ಮೇಲೆ ಬ್ರಿಟಿಷ್ ನೀತಿಯ ಪರಿಣಾಮಗಳನ್ನು ವಿಶ್ಲೇಷಿಸುವಿರಿ.**

ವಿವಿಧ ರೀತಿಯ ತೆರಿಗೆ ವಸೂಲಾತಿ ಪದ್ಧತಿಗಳನ್ನು ಅಂದರೆ, ಜಮೀನ್ದಾರಿ, ರೈತವಾರಿ ಮತ್ತು ಮಹಲ್ವಾರಿ ಪದ್ಧತಿಗಳ ಲಕ್ಷಣಗಳನ್ನು ಮಕ್ಕಳು ಗುರುತಿಸುವಂತಾಗಬೇಕು. ಈ ಪದ್ಧತಿಗಳು ಜಾರಿಯಲ್ಲಿದ್ದ ಭಾರತದ ಪ್ರದೇಶಗಳನ್ನು ನಕ್ಷೆಯ ಸಹಾಯದಿಂದ ಸುಗಮಕಾರರ ಸಹಾಯದಿಂದ ಮಕ್ಕಳು ಗುರುತಿಸುವಂತಾಗಬೇಕು.

**ಕಲಿಕಾ ಹಾಳೆ –29 ಚಿತ್ರ ನಿಮ್ಮದು ಬರಹ ನಮ್ಮದು**

ಚಿತ್ರಗಳ ಕುರಿತು ನಮಗೆ ತೋಚಿದಂತೆ ಬರೆಯೋಣ (ಚಿತ್ರ ನಿಮ್ಮದು, ಬರಹ ನಮ್ಮದು). ಇಲ್ಲಿ ಮಕ್ಕಳ ಮುಕ್ತ ಅಭಿಪ್ರಾಯಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದರಿಂದ ಸುಗಮಕಾರರು ನಿರೀಕ್ಷಿತ ಉತ್ತರವನ್ನು ಬಯಸಬಾರದು.

**ಕಲಿಕಾ ಹಾಳೆ –30 ಭೂದಾಖಲೆಗಳು**

ಇಂದಿನ ಭೂ ದಾಖಲೆಗಳಿಗೆ ಸಂಬಂಧ ಪಟ್ಟ ದಾಖಲೆಗಳ ಪತ್ರಗಳ ಮಾಹಿತಿಯನ್ನು ನಾವೇ ಹುಡುಕೋಣವೇ?

ಸುಗಮಕಾರರು ಇಂದಿನ ಭೂದಾಖಲೆಗಳನ್ನು, ಪಹಣಿ, ಪಟ್ಟಗಳನ್ನು ಮಕ್ಕಳಿಗೆ ತರಗತಿಯಲ್ಲಿ ನೇರವಾಗಿ ತೋರಿಸುತ್ತಾ ಪರಿಚಯಿಸುವುದು. ಮಕ್ಕಳು ತಮ್ಮ ಮನೆಯ, ಜಮೀನಿನ ದಾಖಲೆಗಳ(ನಕಲು) ಪ್ರತಿಗಳನ್ನು ಗುರುತಿಸುವಂತಾಗಬೇಕು. ತಮ್ಮ ಮನೆಗಳಲ್ಲಿ ಇದರ ಕುರಿತಾದ ದಾಖಲೆಗಳನ್ನು ನೋಡುವಂತೆ ಪ್ರೇರೇಪಿಸುವುದು. ಇಂದಿನ ನಮ್ಮ ದೇಶದ ಬಹುದೊಡ್ಡ ಸಮಸ್ಯೆಗಳಲ್ಲೊಂದಾದ ರೈತರ ಆತ್ಮಹತ್ಯೆಗೆ ಕಾರಣಗಳನ್ನು ಮಕ್ಕಳೇ ಸ್ವತಃ ಚರ್ಚಿಸುವಂತೆ ಆಗಬೇಕು. ಹಾಗೆ ಈ ಸಮಸ್ಯೆಯಿಂದ ಹೊರಬರಲು ಮಾಡಬೇಕಾದ ಕೆಲಸಗಳನ್ನು, ವ್ಯವಸ್ಥೆಯ ಬದಲಾವಣೆಯ ಬಗ್ಗೆ ಯೋಚಿಸುವಂತೆ ಮಾಡುವುದು.

**ಕಲಿಕಾ ಹಾಳೆ –31 ನಕ್ಷೆಯಲ್ಲಿ ಸ್ಥಳ ಗುರುತಿಸುವುದು**

ಭಾರತದ ನಕ್ಷೆಯಲ್ಲಿ ಮದ್ರಾಸ್, ಬಂಗಾಳ ಮತ್ತು ಮಧ್ಯ ಭಾರತದ ಪ್ರಾಂತಗಳನ್ನುಮತ್ತು ವಾಯುವ್ಯ ಭಾರತವನ್ನು ಗುರುತಿಸಿ. ಈ ಚಟುವಟಿಕೆಯಲ್ಲಿ ಮಕ್ಕಳು ಕೊಟ್ಟಿರುವ ಭಾರತ ನಕಾಶಯಲ್ಲಿ ಪ್ರಾಂತಗಳನ್ನು ಗುರುತಿಸಲು ತಿಳಿಸುವುದು.

**ಕಲಿಕಾ ಹಾಳೆ – 32 ಸಾಮ್ಯತೆ ವ್ಯತ್ಯಾಸ ಗುರುತಿಸುವುದು**

**ಈ ಮೂರು ಪದ್ಧತಿಯಲ್ಲಿನ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಗುರುತಿಸಿ ಅವುಗಳ ಕೆಳಗೆ ಬರೆದು ಭಾರತೀಯ ರೈತರನ್ನು ಕುರಿತು ಬರೆಯಿರಿ.**

ಸುಗಮಕಾರರು ಇಲ್ಲಿ ಬಹುಮುಖ್ಯವಾಗಿ ರೈತರ ಆತ್ಮಹತ್ಯೆಗಳಿಗೆ ಸರ್ಕಾರಗಳು ಏನು ಮಾಡಬೇಕು? ಯಾವ ವಿಧಾನಗಳನ್ನು ಅನುಸರಿಸಬೇಕು? ಎಂಬ ಚರ್ಚೆಯನ್ನು ಮಕ್ಕಳೊಂದಿಗೆ ಏರ್ಪಡಿಸುವುದು. ಒಟ್ಟಾರೆಯಾಗಿ ರೈತರ ಆತ್ಮಹತ್ಯೆಯ ವಿಚಾರವಾಗಿ ಮಕ್ಕಳ ಮನಸ್ಸಿನಲ್ಲಿ ಯೋಚನೆ ಹಚ್ಚುವುದು. ಭಾರತದಲ್ಲಿ ಕೃಷಿಯ ಪ್ರಾಮುಖ್ಯತೆ ಮನಸ್ಸಿನಲ್ಲಿ ನಾಟುವಂತೆ ಮಾಡುವುದು ಈ ಕಲಿಕಾಹಾಳೆಯ ಉದ್ಧೇಶವಾಗಿದೆ.

**ಕಲಿಕಾ ಹಾಳೆ – 33 ಪಹಣಿಯಲ್ಲಿ ಮುಖ್ಯ ಅಂಶಗಳನ್ನು ಗುರುತಿಸುವುದು.**

ಇಲ್ಲಿ ನೀಡಲಾಗಿರುವ ಪಹಣಿ ಪತ್ರಿಕೆಯನ್ನು ಗಮನಿಸಿ. ಕೆಳಗಿನವುಗಳಿಗೆ ಉತ್ತರಿಸಿ.

ಸುಗಮಕಾರರು ಮಕ್ಕಳಿಗೆ ಅಂದಿನ ಕಾಲದ ಭೂ ದಾಖಲೆಗಳನ್ನು ಅರ್ಥಮಾಡಿಸಲು ಇಂದಿನ ಭೂದಾಖಲೆಗಳು ಮತ್ತು ಅವುಗಳ ಮಹತ್ವವನ್ನು ತಿಳಿದುಕೊಳ್ಳುವಂತೆ ಮಾಡುವುದು. ಅದಕ್ಕಾಗಿ ಯೋಜನಾ ಕಾರ್ಯ, ವೈಯಕ್ತಿಕ ಕಾರ್ಯ, ಸಂಗ್ರಹ, ಇತ್ಯಾದಿ ಚಟುವಟಿಕೆಗಳನ್ನು ನೀಡುವುದು.

**ಕಲಿಕಾ ಹಾಳೆ - 34 ರೈತರ ಆತ್ಮಹತ್ಯಗೆ ಕಾರಣ ಹುಡುಕುವುದು**

ಇತ್ತೀಚಿನ ದಿನಗಳಲ್ಲಿ ರೈತರ ಆತ್ಮಹತ್ಯೆಯ ಕಾರಣಗಳಿಗೆ ಅದಕ್ಕೆ ನಮ್ಮದೇ ಆದ ಸೂಕ್ತ ಪರಿಹಾರಗಳನ್ನು ಸೂಚಿಸೋಣ. ಮಕ್ಕಳ ವೈಯಕ್ತಿಕ ಅಭಿಪ್ರಾಯಗಳಿಗೆ ಪ್ರೋತ್ಸಾಹ ನೀಡುವುದು ಮತ್ತು ಅವರಲ್ಲಿ ಒಂದು ವಿಷಯವನ್ನು ವಿಶ್ಲೇಷಿಸುವ ಮನೋಭಾವ ಬೆಳೆಸುವುದಾಗಿರುವುದರಿಂದ ಇಲ್ಲಿ ಸುಗಮಕಾರರು ನಿರೀಕ್ಷಿತ ಉತ್ತರವನ್ನು ಬಯಸಬಾರದು.

**ಕಲಿಕಾ ಹಾಳೆ 35 ಪರೀಕ್ಷಿಸೋಣ**

**ಸಾರಾಂಶೀಕರಣ :** ಒಂದು ವೇಳೆ ಬರಗಾಲ ಬಂದರೆ ಅದು ಸಮಾಜದ ಮೇಲೆ, ದೇಶದ ಆರ್ಥಿಕತೆಯ ಮೇಲೆ ಮತ್ತು ವೈಯಕ್ತಿಕವಾಗಿ ಹೇಗೆ ಪರಿಣಾಮ ಬೀರುತ್ತದೆ ಮತ್ತು ಅದರಿಂದ ಹೇಗೆ ಹೊರ ಬರಬೇಕೆಂಬುದು ಇಲ್ಲಿಯ ಮುಖ್ಯ ಉದ್ದೇಶ. ಮತ್ತು ಅದಕ್ಕೆ ನಾವುಗಳು ಹೇಗೆ ನೆರವು ನೀಡಬಹುದು(ದಾನ). ಇಂತಹ ಸಂದರ್ಭದಲ್ಲಿ ಮಾನವೀಯತೆ ಮುಖ್ಯ ಎಂಬುದನ್ನು ಅರ್ಥಮಾಡಿಕೊಳ್ಳುವಂತೆ ಮಾಡುವುದು.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾ ಹಾಳೆ 31 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಬಳಸಿಕೊಳ್ಳಬಹುದು.

**ಕಲಿಕಾಂಶ 9 ಬ್ರಿಟೀಷ್ ಆಡಳಿತದ ಸುಧಾರಣೆಗಳು ಮತ್ತು ಭಾರತೀಯರ ಪ್ರತಿಕ್ರಿಯೆ**
**ಬ್ರಿಟೀಷರ ನೀತಿಗಳ ವಿರುದ್ಧ ಆದ ಕೆಲವು ಹೋರಾಟಗಳು**

**ಕಲಿಕಾ ಫಲ:– ಬುಡಕಟ್ಟು ಜನಾಂಗದ ದಂಗೆ ಸಂತಾಲರು, ಮುಂಡರು, ಹಲಗಲಿಯ ಬೇಡರು ದಂಗೆಗಳು ಸ್ವಾತಂತ್ರ್ಯ ಹೋರಾಕ್ಕೆ ನೀಡಿದ ಸ್ಫೂರ್ತಿಯನ್ನು ಅರ್ಥಮಾಡಿಕೊಳ್ಳುವರು.**

**ಉದ್ದೇಶ:**

- ಭಾರತದಲ್ಲಿ ಬ್ರಿಟಿಷ ಆಡಳಿತವನ್ನು ವಿರೋಧಿಸಿ ಮೊದಲಿಗೆ ನಡೆದ ಕೆಲವು ಸಶಸ್ತ್ರ ಹೋರಾಟಗಳನ್ನು ಅರ್ಥಮಾಡಿಕೊಳ್ಳುವುದು.
- ಬ್ರಿಟಿಷರ ಆಡಳಿತವು ಕೇವಲ ಶ್ರೀಮಂತರಿಗಷ್ಟೇ ಅಲ್ಲ, ಸಾಮಾನ್ಯ ಜನರ ಕ್ರಾಂತಿಕಾರಕ ಹೋರಾಟ ಮತ್ತು ಅವರ ಶೌರ್ಯ, ಸಾಹಸ ಮತ್ತು ತ್ಯಾಗಗಳನ್ನು ಮೆಚ್ಚಿಕೊಳ್ಳುವುದು.

**ಸಾಮಗ್ರಿಗಳು:–** ಸಂತಾಲರು ಹಲಗಲಿ ಬೇಡರ ಚಿತ್ರಗಳು, ಬುಡಕಟ್ಟು ಜನಾಂಗಗಳ ಚಿತ್ರಗಳು, ಆಯುಧಗಳ ಚಿತ್ರಗಳು, 7ನೇ/ 10ನೇ ತರಗತಿ ಪಠ್ಯ ಪುಸ್ತಕ.

**ಪ್ರಕ್ರಿಯೆ:** ವಿಧ್ಯರ್ಥಿಗಳಿಗೆ ಇದನ್ನು ಸಂವಾದ ರೂಪದಲ್ಲಿಯು ಮಾಡಬಹುದು / ಒಂದು ಲೇಖನ ಕೊಟ್ಟು ಬುಡಕಟ್ಟು ಜನಾಂಗ ಹೋರಾಟ ಮಾಡಲು ಕಾರಣಗಳು ಮತ್ತು ಯಾವ ಯಾವ ಬುಡಕಟ್ಟುಗಳು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು?

ಕಾರಣವೇನು? ಎಂಬ ಪ್ರಶ್ನೆಗಳನ್ನು ನೀಡಿ, ನಂತರ ಅವರಿಂದ ಬಂದ ಮಾಹಿತಿಯನ್ನು ಕ್ರೂಢೀಕರಿಸುತ್ತಾ ವಿದೇಶಿ ಆಡಳಿತದ ಪರಿಣಾಮ ಗುಡಿಸಲಿನಿಂದ ಅರಮನೆಯವರೆಗೂ ಆಗಿತ್ತು ಎಂಬುದನ್ನು ವಿವರಿಸುವುದು. ಮತ್ತು ಅವರ ಹೋರಾಟಗಳು ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಮೈಲುಗಲ್ಲಾದದ್ದು ಹೇಗೆ ಎಂಬುದನ್ನು ತಿಳಿದುಕೊಳ್ಳುವಂತೆ ಮಾಡುವುದು.

**ಕಲಿಕಾ ಹಾಳೆ** – 36 ಭಾರತೀಯ ಹೋರಾಟಗಳು

**ಕಲಿಕಾ ಹಾಳೆ – 37** ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕುರಿತು ಒಂದು ಸಣ್ಣ ಕಥೆಯನ್ನು ರಚಿಸಿ.

**ಸಾರಾಂಶೀಕರಣ:** ಬ್ರಿಟಿಷರ ವಿರುದ್ಧ ಹೋರಾಡಿದ ಭಾರತೀಯ ಸಾಮಾನ್ಯ ಜನರ ಹೋರಾಟಗಳನ್ನು ಪರಿಚಯಿಸುವುದು. ಸುಗಮಕಾರರು ಇಲ್ಲಿ ಜನಸಾಮಾನ್ಯರು ಹೇಗೆ ಬ್ರಿಟಿಷರ ವಿರುದ್ಧ ತಮ್ಮದೇ ಆದ ಹೋರಾಟದಲ್ಲಿ ತೊಡಗಿದ್ದರು. ಸ್ವಾತಂತ್ರ್ಯ ಹೊರಾಟಕ್ಕೆ ಅವರ ಕೊಡುಗೆಯನ್ನು ಮಕ್ಕಳಿಗೆ ತಿಳಿದುಕೊಳ್ಳುವಂತೆ ಮಾಡಬೇಕು. ಮುಖ್ಯವಾಗಿ ಸಾಮಾನ್ಯ ಜನರ ತೊಡಗುವಿಕೆ ಏಕಾಯಿತು? ಎಂಬ ಮೂಲ ವಿಷಯಗಳನ್ನು ಇಟ್ಟುಕೊಂಡು ಮಕ್ಕಳೊಂದಿಗೆ ಚರ್ಚಿಸುವುದು.

**ಮೌಲ್ಯಮಾಪನ ಚಟುವಟಿಕೆ:** ಇಲ್ಲಿ ಶಿಕ್ಷಕರು ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುವುದರ ಮೂಲಕ/ ಯೋಜನಾ ಕಾರ್ಯ ನೀಡುವುದರ ಮೂಲಕ/ಅವಕಾಶವಿದ್ದರೆ ಸಂದರ್ಶನದ ಮೂಲಕ ಮೌಲ್ಯಮಾಪನ ಮಾಡಬಹುದು. ಉದಾ:– ನಿಮ್ಮ ಹಿರಿಯರಿಂದ ಕೇಳಿ ಯಾವುದಾದರೂ ಸರಕಾರದ ವಿರುದ್ದ ಹೋರಾಟಗಳು ನಡೆದಿವೆಯಾ? ನಡೆದರೆ ಅದಕ್ಕೆ ಕಾರಣಗಳನ್ನು ಹುಡುಕಿ ಪಟ್ಟಿ ಮಾಡಲು ತಿಳಿಸಿ, ಅಥವಾ ನಿಮ್ಮೂರಿನಲ್ಲಿ ಬರುವ ಬುಡಕಟ್ಟು ಜನಾಂಗ ಮತ್ತು ಅವರು ಅನುಸರಿಸುವ ಪದ್ದತಿಗಳನ್ನು ಪಟ್ಟಿ ಮಾಡಿ. ಆ ಪದ್ಧತಿಗಳ ಆಚರಣೆಗೆ ಅವರಿಗೆ ಅವಕಾಶ ಇಲ್ಲದಿದ್ದರೆ ಅವರು ಏನು ಮಾಡುತ್ತಾರೆಂದು ಕೇಳಿ ಬರೆಯಿರಿ.

## 1857 ಸ್ವಾತಂತ್ರ್ಯ ಸಂಗ್ರಾಮ

**ಕಲಿಕಾ ಫಲ:– ಬ್ರಿಟೀಷ್ ಆಡಳಿತದ ಸುಧಾರಣೆಗಳು ಮತ್ತು ಭಾರತೀಯರ ಪ್ರತಿಕ್ರಿಯೆಗಳನ್ನು ವಿಶ್ಲೇಷಿಸುವುದು.**

**ಉದ್ದೇಶ:**

- ಭಾರತೀಯರು ಮೊದಲ ಬಾರಿಗೆ ಒಂದಾದ ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳುವುದು.
- ಕಂಪನಿ ಸರಕಾರ ಸುಮಾರು ವರ್ಷಗಳ ಕಾಲ ದಬ್ಬಾಳಿಕೆ ಮಾಡಿದರೂ ಪ್ರಬಲವಾಗಿ ವಿರೋಧಿಸದ ಭಾರತೀಯರು 1857 ರಲ್ಲಿ ಪ್ರಬಲವಾದ ಹೋರಾಟ ಮಾಡಲು ಕಾರಣಗಳನ್ನು ಅರ್ಥೈಸಿಕೊಳ್ಳುವರು.
- ಯುದ್ಧ, ದಂಗೆ, ಹೋರಾಟ, ಕ್ರಾಂತಿ.

**ಸಾಮಗ್ರಿಗಳು:** ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದವರ ಚಿತ್ರಗಳು, ಪಠ್ಯ ಪುಸ್ತಕ, ಭಾರತದ ನಕಾಶೆ, ಪೆನ್ಸಿಲ್, ಕ್ರೇಯಾನ್ಸ್ (ಬಣ್ಣದ ಪೆನ್ಸಿಲ್).

**ಪ್ರಕ್ರಿಯೆ:** ಮಕ್ಕಳಿಗೆ ಮೊದಲು ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸಬೇಕಾಗಿರುವುದರಿಂದ ಪಠ್ಯ ಪುಸ್ತಕದಲ್ಲಿಯ ನಿಗದಿತ ಪಾಠವನ್ನು ನೀಡಿ ಅದರಲ್ಲಿ ವಿವಿಧ ಸಂಸ್ಥಾನಗಳನ್ನು ಪರಿಚಯಿಸಿ ಅವುಗಳು ದಂಗೆಯೇಳಲು ಕಾರಣಗಳನ್ನು ಹುಡುಕಿ ಪಟ್ಟಿ ಮಾಡಲು ಹೇಳಬೇಕು. ನಂತರ ಸುಗಮಕಾರರು ಗುರುತಿಸಿದ ಗುಂಪುಗಳಲ್ಲಿ ಚರ್ಚಿಸಿ ಮಂಡಿಸಲು ತಿಳಿಸಬೇಕು.

**ಸಾರಾಂಶೀಕರಣ:** ಭಾರತದ 1857ರಲ್ಲಿನ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕುರಿತು ಒಂದು ಸಣ್ಣ ಕಥೆಯನ್ನು ರಚಿಸಿ. ಭಾರತೀಯರ ಹೋರಾಟ ಮತ್ತು ಮೊದಲ ಬಾರಿಗೆ ಒಂದು ಸಂಘಟನಾತ್ಮಕವಾಗಿ ಹೋರಾಟಕ್ಕಿಳಿದರು. ಮತ್ತು ಇದು ಬ್ರಿಟಿಷರ ಆಡಳಿತವನ್ನು ಅಲುಗಾಡಿಸಲು ಕಾರಣವಾಯಿತು ಎಂಬುದನ್ನು ಅರ್ಥವಾಗುವಂತೆ ಮಾಡುವುದು. ಇದರ ಪರಿಣಾಮ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಹಿಡಿತದಿಂದ ಬ್ರಿಟಿಷರ ನೇರ ಆಡಳಿತಕ್ಕೆ ಭಾರತ ಒಳಗಾಯಿತು. ಈ ಸನ್ನಿವೇಶಗಳಲ್ಲಿ ಭಾರತದಲ್ಲಾದ ಬದಲಾವಣೆಗಳನ್ನು ಗುರುತಿಸಲು ಸಹಾಯವಾಗುವಂತೆ ಮಾಡುವುದು.

**ಮೌಲ್ಯ ಮಾಪನ ಚಟುವಟಿಕೆ:** ಮಕ್ಕಳಿಗೆ ಇಷ್ಟವಾದ ಪಾತ್ರವನ್ನು ಹೋರಾಟಗಾರರ ಬಗ್ಗೆ ಬರೆಯಲು ತಿಳಿಸಿ ಮತ್ತು ಅವರಿಗೆ ಆ ವ್ಯಕ್ತಿ ಏಕೆ ಇಷ್ಟ? ಎಂಬುದನ್ನು ಬರೆಯಲು ಹೇಳುವುದರಿಂದ ಮಕ್ಕಳು ಅವರ ತ್ಯಾಗ ಬಲಿದಾನಗಳಿಗೆ ಮಹತ್ವ ನೀಡಿದ್ದಾರೆ ಅಥವಾ ಅಂದಿನ ಸನ್ನಿವೇಶವನ್ನು ಅರಿತುಕೊಂಡಿದ್ದಾರೆಂದು ತಿಳಿಯಬಹುದು. ಅಥವಾ ತಾವೇ ಅದಕ್ಕೆ ಪೂರಕವಾಗಿ ಸಂಗ್ರಹ, ಸಮೀಕ್ಷೆ, ಯೋಜನಾ ಕಾರ್ಯ ನೀಡುವ ಮೂಲಕ ಮೌಲ್ಯಮಾಪನ ಮಾಡಬಹುದು.

## ಕಲಿಕಾಂಶ 10 ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

**ಕಲಿಕಾಫಲ: ಬ್ರಿಟಿಷ್ ಆಡಳಿತಾವಧಿಯಲ್ಲಿನ ಭಾರತೀಯ ಸಮಾಜ ಸುಧಾರಕರ ಬಗ್ಗೆ ತಿಳಿದುಕೊಳ್ಳುವರು.**

**ಉದ್ದೇಶ:**

- ಭಾರತದದಲ್ಲಿ ಮೂಢ ನಂಬಿಕೆಗಳ ವಿರುದ್ಧ ಹೋರಾಟಕ್ಕೆ ಪ್ರೇರಣೆಯಾದ ಅಂಶಗಳನ್ನು ಅರ್ಥಮಾಡಿಕೊಳ್ಳುತ್ತಾ ಇಂದಿಗೂ ಅಂತಹ ಹೋರಾಟಗಳ ಅವಶ್ಯಕತೆಯನ್ನು ಅರಿಯುವರು.
- ಬ್ರಿಟಿಷರ ಸಾಮಾಜಿಕ ಸುಧಾರಣೆಗಳು ಭಾರತದಲ್ಲಿ ಸಮಾಜದ ಬದಲಾವಣೆಗೆ ಹೇಗೆ ಪೂರಕವಾದವು ಎಂಬುದನ್ನು ತಿಳಿದುಕೊಳ್ಳುವುದು.

**ಸಾಮಗ್ರಿಗಳು:** ಸಮಾಜ ಸುಧಾರಕರ ಭಾವಚಿತ್ರಗಳು, ಡ್ರಾಯಿಂಗ್ ಹಾಳೆ, ಮಾರ್ಕರ್ ಪೆನ್ನು, ಎ4 ಸೈಜ್ ಹಾಳೆ, ಪೆನ್ಸಿಲ್, 7ನೇ ತರಗತಿ ಪಠ್ಯಪುಸ್ತಕ/ ವಿದ್ಯಾರ್ಥಿ ಸಂಚಿಯಲ್ಲಿನ ಮಾಹಿತಿ ಹಾಳೆಯ ಝೆರಾಕ್ಸ್ ಪ್ರತಿಗಳು.

**ಪ್ರಕ್ರಿಯೆ:** ವಿದ್ಯಾರ್ಥಿಗಳಿಗೆ ಮೊದಲು ಪಠ್ಯದಲ್ಲಿನ ನಿಗದಿತ ವಿಷಯ ಓದಲು ತಿಳಿಸುವುದು. ಓದುವ ಮುಂಚೆ ಈ ಕೆಳಗಿನ ಕೆಲವು ಪ್ರಶ್ನೆಗಳನ್ನು ನೀಡಬೇಕು.

**ಕಲಿಕಾ ಹಾಳೆ 38** ಭಾರತೀಯ ಸಮಾಜ ಸುಧಾರಕರ ಚಿತ್ರಗಳನ್ನು ಸಂಗ್ರಹಿಸಿ.

**ಸಾರಾಂಶೀಕರಣ:** ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಾಗಿ ಶ್ರಮಿಸಿದ ವ್ಯಕ್ತಿಗಳನ್ನು ಪರಿಚಯಿಸುವುದು. ಅವರುಗಳ ಭಾವಚಿತ್ರಗಳನ್ನು ಬಳಸಿ ಅವರ ಮುಖ್ಯವಾದ ಕೊಡುಗೆಗಳನ್ನು ಮಕ್ಕಳು ಅರ್ಥ ಮಾಡಿಕೊಳ್ಳಬೇಕು. ಸಾಮಾಜಿಕ ಬದಲಾವಣೆಯ ಅಂಶಗಳಾದ ಅಸಮಾನತೆಗಳನ್ನು ಹೋಗಲಾಡಿಸುವುದು, ಎಲ್ಲರೂ ಒಂದೇ ಎಂಬ ಭಾವ ನಿರ್ಮಾಣ ಮಾಡಬೇಕು. ಅದೇ ರೀತಿ ಧರ್ಮದ ಆಚರಣೆಗಳಲ್ಲಿ ಮಾಡಿಕೊಂಡ ಮಾರ್ಪಾಡುಗಳು ಭಾರತೀಯರು ತಮ್ಮ ಇಚ್ಛೆಯ ಧರ್ಮಗಳನ್ನು ಸರಳವಾಗಿ ಆಚರಿಸಲು ಅನುಕೂಲವಾಯಿತು ಎಂಬುದನ್ನು ಸುಗಮಕಾರರು ಸ್ಪಷ್ಟಪಡಿಸಬೇಕು.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾ ಹಾಳೆ 38

## ಕಲಿಕಾಂಶ 11 ಭಾರತದ ಸ್ವಾತಂತ್ರ್ಯ ಚಳುವಳಿಯ ಪ್ರಮುಖ ವ್ಯಕ್ತಿಗಳು ಮತ್ತು ಘಟನೆಗಳು

**ಕಲಿಕಾಫಲ: ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಪ್ರಮುಖ ವ್ಯಕ್ತಿಗಳು ಮತ್ತು ಘಟನೆಗಳನ್ನು ಗುರುತಿಸುವರು.**

**ಉದ್ದೇಶ:**

- ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಚಳುವಳಿಗಳ ಪಾತ್ರವನ್ನು ಅರಿಯುವುದು.
- ಚಳುವಳಿಗಳು ಜನಸಾಮಾನ್ಯರನ್ನು ಹೋರಾಟದಲ್ಲಿ ತೊಡಗುವಂತೆ ಮಾಡಿರುವುದನ್ನು ಅರ್ಥೈಸಿಕೊಂಡು ಇಂದಿನ ಚಳುವಳಿಗಳಿಗೂ ಅಂದಿನ ಚಳುವಳಿಗಳಿಗೂ ಹೋಲಿಕೆ ಮಾಡಿ ನೋಡುವರು.

**ಕಲಿಕಾ ಸಾಮಗ್ರಿಗಳು:** ಪಠ್ಯ ಪುಸ್ತಕ, ಸ್ವಾತಂತ್ರ್ಯ ಹೋರಾಟದಲ್ಲಿ ನಡೆದ ಘಟನಾವಳಿಗಳ ಪಟ್ಟಿ.

**ಪ್ರಕ್ರಿಯೆ:** ಮಕ್ಕಳಿಗೆ ಕೆಳಗೆ ನೀಡಲಾದ ಕಾರ್ಯ ಹಾಳೆಗಳನ್ನು ಬಳಸಿಕೊಂಡು ಕಲಿಕೆಯನ್ನು ದೃಢೀಕರಿಸಬೇಕು. ಒಂದು ವೇಳೆ ಮಕ್ಕಳ ಮಟ್ಟವು ಕಡಿಮೆ ಅನ್ನಿಸಿದರೆ ಅದಕ್ಕೆ ಪೂರಕವಾದ ಹಾಳೆಗಳನ್ನು ಸ್ವತಃ ತಯಾರಿಸಿ ಕೊಡಬಹುದು.

**ಕಲಿಕಾ ಹಾಳೆ 39 ಕಾಲಾಪಾನಿ**

ಸ್ವಾತಂತ್ರ್ಯಕ್ಕಾಗಿ ದುಡಿದಂತಹ ಜನರ ತ್ಯಾಗಗಳನ್ನು, ಅವರು ಪಟ್ಟ ಕಷ್ಟಕೋಟಲೆಗಳನ್ನು ಮಕ್ಕಳಿಗೆ ಮನಮುಟ್ಟುವಂತೆ ಹೇಳುವ ಘಟನೆ 'ಕಾಲಪಾನಿ ಶಿಕ್ಷೆ' ಬರವಣಿಗೆಯಲ್ಲಿ ಇದೆ. ಇಂತಹ ಹಲವು ಘಟನೆಗಳನ್ನು ಸಂಗ್ರಹಿಸಿ ಮಕ್ಕಳಿಗೆ ಸ್ವಾತಂತ್ರ್ಯಕ ಹೋರಾಟದ ಶ್ರಮ, ತ್ಯಾಗ-ಬಲಿದಾನಗಳು ಅರ್ಥವಾಗುವಂತೆ ಮಾಡುವುದು ಸುಗಮಕಾರ ಜವಾಬ್ದಾರಿಯಾಗಿದೆ.

**ಕಲಿಕಾ ಹಾಳೆ 40 ನಿಮ್ಮ ವೈಯಕ್ತಿಕ ಆಯ್ಕೆಯ ವ್ಯಕ್ತಿ ಯಾರು? ಏಕೆ?**

ಸಾರಾಂಶೀಕರಣ: ಮಕ್ಕಳಿಗೆ ಅಂದು ಸ್ವಾತಂತ್ರ್ಯ ಹೋರಾಟಗಾರರು ಅನುಭವಿಸಿದ ಕಷ್ಟ, ತ್ಯಾಗ ಬಲಿದಾನಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಇಂದಿನ ಸ್ವಾತಂತ್ರ್ಯ ಸುಮ್ಮನೆ ಬಂದದ್ದಲ್ಲ ಎಂಬುದನ್ನು ಮಕ್ಕಳ ಗಮನಕ್ಕೆ ತರುವುದಕ್ಕೆ ಕಾಲಾಪಾನಿಯನ್ನು ಉದಾಹರಣೆಯಾಗಿ ನೀಡಲಾಗಿದೆ. ಅದಕ್ಕಾಗಿ ಮಕ್ಕಳಿಗೆ ಇದು ಮನವರಿಕೆಯಾಗುವಂತೆ ಮಾಡುವುದು ಸುಗಮಕಾರರ ಆದ್ಯ ಕರ್ತವ್ಯವಾಗಿದೆ. ನಾವಿಂದು ಈ ಬಲಿದಾನಗಳ ಅಡಿಯಲ್ಲಿ ನೆಮ್ಮದಿಯ ಜೀವನವನ್ನು ಸಾಗಿಸುತ್ತಿದ್ದೇವೆ ಎಂಬುದು ಮಕ್ಕಳಿಗೆ ಅರ್ಥವಾಗಲೇ ಬೇಕಾದ ಅಂಶವಾಗಿದೆ.

**ಮೌಲ್ಯಮಾಪನ ಚಟುವಟಿಕೆ:** ಕಾಲಾಪಾನಿಯ ಕುರಿತು ಮಕ್ಕಳಿಗೆ ಇನ್ನಿತರ ಕಥೆಗಳನ್ನು ಸಂಗ್ರಹಿಸಲು ತಿಳಿಸಿ ಮತ್ತು ಹಳ್ಳಿಯಲ್ಲಿ ಇಂದಿಗೂ ಕರಿನೀರಿನ ಶಿಕ್ಷೆ ಎಂಬ ಪದ ಪ್ರಚಲಿತದಲ್ಲಿದೆ. ಅದರ ಮಾಹಿತಿಯನ್ನು ಸಂಗ್ರಹಿಸಲು ತಿಳಿಸಿ. ಅಥವಾ ಪಠ್ಯವನ್ನು ಹೊರತು ಪಡಿಸಿ ಕಾಲಾಪಾನಿ ಕುರಿತ ಮಾಹಿತಿ ಸಂಗ್ರಹಿಸಲು ಹೇಳಿ. ಅದರಿಂದ ಮಕ್ಕಳು ಕಾಲಾಪಾನಿ ಕುರಿತು ಏನನ್ನು ತಿಳಿದುಕೊಂಡಿದ್ದಾರೆಂದು ಅರ್ಥಮಾಡಿಕೊಳ್ಳಬಹುದು

## ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳು

**ಕಲಿಕಾಫಲ: ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಜೀವವನ್ನು ತ್ಯಾಗ ಮಾಡಿದ ಕ್ರಾಂತಿಕಾರಿಗಳ ಕೊಡುಗೆಯನ್ನು ಗುರುತಿಸುವರು.**

**ಉದ್ದೇಶ:**

- ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ವೀರರ ತ್ಯಾಗ ಬಲಿದಾನಗಳನ್ನು ಗೌರವಿಸುವುದು ಮತ್ತು ಮಕ್ಕಳಲ್ಲಿ ದೇಶಾಭಿಮಾನ ಮೈಗೂಡಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು.
- ಮಕ್ಕಳಲ್ಲಿ ದೇಶಾಭಿಮಾನ ಮೂಡಿಸುವುದು.

**ಕಲಿಕಾ ಸಾಮಾಗ್ರಿಗಳು:** ಕ್ರಾಂತಿಕಾರಿಗಳ ಭಾವಚಿತ್ರ, ಅವರ ಸಂಕ್ಷಿಪ್ತ ಮಾಹಿತಿ ಹಾಳೆ ಅಥವಾ ಪಠ್ಯ ಪುಸ್ತಕ, ಭಾರತದ ನಕಾಶೆ.

**ಪ್ರಕ್ರಿಯೆ:** ಸ್ವಾತಂತ್ರ್ಯ ಹೋರಾಟಗಾರರ ಸಂಕ್ಷಿಪ್ತ ಮಾಹಿತಿಯನ್ನು ಮಕ್ಕಳಿಗೆ ನೀಡುವುದು. ಮತ್ತು ಹೆಚ್ಚಿನದನ್ನು ಸಂಗ್ರಹಿಸಲು ತಿಳಿಸುವುದು. ಹಾಗೂ ಮಕ್ಕಳಿಗೆ ಆಸಕ್ತಿ ಮೂಡಿಸಲು https://www.youtube.com/watch?v=qed7u1U-dJA ಕಾಲಾಪಾನಿಯ ಸಿನಿಮಾದ 52.32 ನಿಮಿಷದಿಂದ 58.30 ಮಿನಿಟ್ಸ ವೀಡಿಯೋ ತುಣುಕನ್ನು ತೋರಿಸಬಹುದು ಅಥವಾ ಅದನ್ನು ನೋಡಿಕೊಂಡು ತಮಗೆ ಏನು ಅನಿಸುತ್ತಿದೆ ಅದನ್ನು ಬರೆಯಲು ಹೇಳಬಹುದು. ಅಥವಾ ಕಲಿಕಾ ಹಾಳೆಯಲ್ಲಿ ನೀಡಿದ್ದನ್ನು ಬಳಸಿಕೊಳ್ಳಬಹುದು.

**ಕಲಿಕಾ ಹಾಳೆ 41** ಗಾಂಧೀಜಿಯವರ ಅಹಿಂಸೆ ಮತ್ತು ಸತ್ಯಾಗ್ರಹ

**ಮೌಲ್ಯಮಾಪನ ಚಟುವಟಿಕೆ:** ಕಾರ್ಯ ಹಾಳೆ 41ರಲ್ಲಿಯ 3ನೇ ಪ್ರಶ್ನೆ ಬಳಸಿಕೊಳ್ಳಬಹುದು ಅಥವಾ ಅದಕ್ಕೆ ಪೂರಕವಾಗಿ ಬೇರೆ ಹಾಳೆಗಳನ್ನು ಪುನಃ ಬಳಸಿಕೊಳ್ಳಬಹುದು.

## ಕಲಿಕಾಂಶ 11.2 ಅಹಿಂಸಾ ಮಾರ್ಗ ಮತ್ತು ಸತ್ಯಾಗ್ರಹದ ಮೂಲಕ ಸ್ವಾತಂತ್ರ್ಯ ಚಳುವಳಿ

**ಕಲಿಕಾ ಫಲ: ಅಸಹಕಾರ ಮತ್ತು ನಾಗರಿಕರ ಅವಿಧೇಯತೆ ಚಳುವಳಿಗಳಲ್ಲಿ ಅಪಾರ ಪ್ರಮಾಣದ ಜನ ಭಾಗವಹಿಸಲು ಕಾರಣವಾದ ಅಂಶಗಳನ್ನು ಅರ್ಥಮಾಡಿಕೊಳ್ಳುವರು.**

**ಉದ್ದೇಶ:**

- ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಅಹಿಂಸಾತ್ಮಕ ಚಳುವಳಿಗಳು ನೀಡಿದ ಕೊಡುಗೆಯನ್ನು ಅರ್ಥಮಾಡಿಕೊಳ್ಳುವುದು.
- ಅಂದಿನ ಕಾಲದಲ್ಲಿ ಬ್ರಿಟಿಷರೊಂದಿಗೆ ಹೋರಾಡಲು ಅಹಿಂಸಾ ಚಳುವಳಿಯು ಜನರಿಗೆ ಸ್ಫೂರ್ತಿ ನೀಡಿದ್ದನ್ನು ಅರಿತುಕೊಳ್ಳುವುದು.
- ಗಾಂಧೀಜಿಯವರ ಸತ್ಯಾಗ್ರಹವು ಜನಸಾಮಾನ್ಯರನ್ನು ಚವಳುವಳಿಯಲ್ಲಿ ಭಾಗವಹಿಸಲು ಪ್ರೇರಣೆ ನೀಡಿದ ಬಗೆಯನ್ನು ತಿಳಿದುಕೊಳ್ಳಲು ಪ್ರೋತ್ಸಾಹಿಸುವುದು.

**ಕಲಿಕಾ ಸಾಮಾಗ್ರಿಗಳು:** ಡ್ರಾಯಿಂಗ್ ಶೀಟ್, ಪೆನ್ಸಿಲ್, ಪಠ್ಯ ಪುಸ್ತಕ, ಸ್ವಾತಂತ್ರ್ಯ ಕಾಲದ ಹೋರಾಟಗಾರರ ಭಾವ ಚಿತ್ರಗಳು.

**ಪ್ರಕ್ರಿಯೆ:** ಮಕ್ಕಳ ಸಂಖ್ಯೆಗನುಗುಣವಾಗಿ ಗುಂಪುಗಳನ್ನು ಮಾಡಿ, ಪ್ರತಿ ಗುಂಪಿಗೆ ಪಠ್ಯ ಪುಸ್ತಕದಲ್ಲಿಯ ಓದಬೇಕಾದ ಹಾಳೆಯನ್ನು ನೀಡಿ ಪ್ರತಿ ಗುಂಪಿಗೆ ಗಾಂಧಿಯುಗದ ಬಗ್ಗೆ ನಿಮಗೆಷ್ಟು ಗೊತ್ತು? ಎಂಬ ಪ್ರಶ್ನೆಯನ್ನು ನೀಡಿ ಗುಂಪಿನಲ್ಲಿ ಚರ್ಚಿಸಿ ಬರೆದು ಪ್ರಸ್ತುತಪಡಿಸಲು ತಿಳಿಸಬೇಕು. ಗಾಂಧೀಜಿಯ ವ್ಯಕ್ತಿ ಪರಿಚಯ ಹಾಗೂ ಸ್ವಾತಂತ್ರ್ಯಪ ಚಳುವಳಿಯಲ್ಲಿ ಅವರ ನೇತೃತ್ವ ಭಾರತದ ಸ್ವಾತಂತ್ರ್ಯ ಚಳವಳಿಯ ದಿಕ್ಕನ್ನೇ ಬದಲಾಯಿಸಿತು ಎಂಬುದು ಮಕ್ಕಳಿಗೆ ಅರಿವಾಗುವಂತೆ ಮಾಡುವುದು. ಸರ್ವಕಾಲಕ್ಕೂ ಅಹಿಂಸಾ ಮಾರ್ಗ ಶ್ರೇಷ್ಠ ಮಾರ್ಗವೆಂಬುದನ್ನು ಮಕ್ಕಳು ಅರಿಯಬೇಕು.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾ ಹಾಳೆ 41ರಲ್ಲಿ 2ನೇ ಪ್ರಶ್ನೆಯನ್ನು ಬಳಸಿಕೊಳ್ಳಬಹುದು.

## ಕಲಿಕಾಂಶ 12 ಭಾರತದ ವಿಭಜನೆ

**ಕಲಿಕಾ ಫಲ: ಅಪಾರ ಪ್ರಮಾಣದ ತ್ಯಾಗದಿಂದ ಸ್ವಾತಂತ್ರ್ಯ ಸಾಧಿಸಿದ ಕತೆ ಮತ್ತು ಕೋಮುವಾದದ ಮೇಲೆ ದೇಶ ವಿಭಜನೆಯಾದ ಕಥೆ ಅರ್ಥೈಸಿಕೊಳ್ಳುವರು.**

**ಉದ್ದೇಶ:**

- ವಿವಿಧತೆಯನ್ನು ಗೌರವಿಸುವುದರೊಂದಿಗೆ ಭ್ರಾತೃತ್ವ ಭಾವನೆಯನ್ನು ಮೈಗೂಡಿಸಿಕೊಳ್ಳುವಂತಾಗಲು ಪ್ರೋತ್ಸಾಹಿಸುವುದು.
- ಏಕತೆ ಮತ್ತು ಅಖಂಡತೆಯನ್ನು ಅರ್ಥೈಸಿಕೊಳ್ಳುವುದರೊಂದಿಗೆ ದೇಶಕ್ಕೆ ಕೊಡುಗೆ ನೀಡುವಂತಾಗಬೇಕು.

**ಕಲಿಕಾ ಸಾಮಾಗ್ರಿಗಳು :** ಅಖಂಡ ಭಾರತದ ನಕಾಶೆ, ಡ್ರಾಯಿಂಗ್ ಹಾಳೆ, ಪೆನ್ಸಿಲ್.

**ಪ್ರಕ್ರಿಯೆ:** ಸುಗಮಕಾರರು ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ ಪಠ್ಯಪುಸ್ತಕದಲ್ಲಿಯ ದೇಶವಿಭಜನೆಯ ಪಾಠಟವನ್ನು ನೀಡಿ ಅವರಿಗೆ ಕೆಲವು ಪ್ರಶ್ನೆಗಳನ್ನು ನೀಡಬೇಕು 1. ದೇಶ ವಿಭಜನೆಗೆ ಕಾರಣವಾದ ಅಂಶಗಳನ್ನು ಗುರುತಿಸಿ. 2.ದೇಶವಿಭಜನೆಯ ಸಂದರ್ಭದಲ್ಲಾದ ಮಾರಣಹೋಮಕ್ಕೆ ಕಾರಣಗಳೇನು? ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳುವಂತೆ ಕೆಲವು ಪೂರಕ ಕತೆಗಳನ್ನು ನೀಡಬಹುದು.

**ಸಾರಾಂಶೀಕರಣ:** ಇಲ್ಲಿ ಸುಗಮಕಾರರ ಪಾತ್ರ ಅತೀ ಮುಖ್ಯವಾಗಿದೆ. ತ್ಯಾಗ ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯವನ್ನು ನಮ್ಮಲ್ಲಿಯ ಭಿನ್ನಾಭಿಪ್ರಾಯಗಳಿಂದಾಗಿ ಒಂದು ಅಖಂಡ ದೇಶದ ವಿಭಜನೆಗೆ ಕಾರಣವಾಯಿತು. ಹಾಗೆಯೇ ಇಂದು ನಾವು ಒಗ್ಗಟ್ಟು, ಏಕತೆ, ಭಾತೃತ್ವವನ್ನು ಮೈಗೂಡಿಸಿಕೊಳ್ಳದಿದ್ದರೆ ದೇಶವು ಯಾವತ್ತಿಗೂ ಅಪಾಯದ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಕಾರ ನೀಡಬೇಕು. ಪಠ್ಯಪುಸ್ತಕದಲ್ಲಿನ ಭಾರತದ ವಿಭಜನೆಯ ಅಂಶಗಳನ್ನು ಮಕ್ಕಳು ತಿಳಿಯುವಂತೆ ಮಾಡುವುದು. ವಿವಿಧ ಧರ್ಮ, ಮತ ಜಾತಿಗಳಿರುವ ಭಾರತದಲ್ಲಿ ಧರ್ಮಾಧಾರಿತ ವಿಭಜನೆ ಎಷ್ಟು ಸೂಕ್ತವಾಗಿತ್ತು? ಎಂಬುದನ್ನು ಮಕ್ಕಳೇ ತೀರ್ಮಾನಿಸಲು ಅವಕಾಶ ನೀಡುವುದು. ಎಲ್ಲಾ ಧರ್ಮಗಳ ಸಾರ ಒಂದೇ, ಮುಖ್ಯವಾಗಿ ಧರ್ಮಗಳ ಸಾಮರಸ್ಯ ಭಾರತದ ಸಂವಿಧಾನದ ಆಶಯವಾಗಿದೆ ಎಂಬುದನ್ನು ಒತ್ತಿ ಹೇಳುವುದು.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾಹಾಳೆ 42ನ್ನು ಬಳಸಿಕೊಳ್ಳಬಹುದು.

## ಭಾಗ 2 ಭೂಗೋಳ

## ಕಲಿಕಾಂಶ 13.1: ಭೂಮಿಯ ಪದರಗಳು

**ಕಲಿಕಾ ಫಲ: ಭೂಮಿಯ ಪದರುಗಳನ್ನು ಅರ್ಥಮಾಡಿಕೊಳ್ಳುವರು**

**ಭೂಮಿಯ ಪದರಗಳನ್ನು ಪಟ್ಟಿ ಮಾಡಿ ಅವುಗಳ ಕುರಿತು ಸಂಕ್ಷಿಪ್ತವಾಗಿ ವಿವರಿಸುವಿರಿ.**

**ಉದ್ದೇಶ:**

- ಭೂಮಿಯು ಕೂಡಾ ಅನೇಕ ಪದರುಗಳನ್ನು ಹೊಂದಿದೆ ಎಂದು ತಿಳಿದುಕೊಳುವುದರೊಂದಿಗೆ ತಾವು ಯಾವ ಪದರದ ಲಾಭ ಪಡೆಯುತ್ತೇವೆ ಎಂದು ಅರ್ಥಮಾಡಿಕೊಳ್ಳುವರು.
- ಭೂಮಿಯನ್ನು ಸಂರಕ್ಷಣೆ ಮಾಡಬೇಕಾದ ಅನಿವಾರ್ಯತೆಯನ್ನು ಅರಿಯುವರು.

**ಕಲಿಕಾ ಸಾಮಾಗ್ರಿಗಳು:** ಭೂಮಿಯ ಒಳಪದರುಗಳನ್ನು ಹೊಂದಿದ ಗೋಳದ ಮಾದರಿ/ ಭೂಮಿಯ ಒಳ ಪದರುಗಳ ಚಿತ್ರ / ವಿಡಿಯೋ ಕ್ಲಿಪ್, ಹಾಳೆ, ಪೆನ್ನು, ಪೆನ್ಸಿಲ್.

**ಕಲಿಕಾ ಪ್ರಕ್ರಿಯೆ:** ಮಕ್ಕಳಿಗೆ ಗುಂಪುಗಳನ್ನಾಗಿ ಮಾಡಿ ಒಂದೊಂದು ಈರುಳ್ಳಿಯನ್ನು ನೀಡಬೇಕು. ಮೊದಲು ಅದರ ಹೊರಪದರು ಹೇಗಿದೆ? ಎಂದು ಬರೆಯಬೇಕು ನಂತರ ಒಂದೊಂದೇ ಪದರ ಬಿಚ್ಚುತ್ತಾ ಹೋದಂತೆ ಅದನ್ನು ಅರ್ಥಮಾಡಿಕೊಳ್ಳುವರು.

**ಸಾರಾಂಶೀಕರಣ:** ಸುಗಮಕಾರರು ಮಕ್ಕಳಿಗೆ ಭೌಗೋಳಿಕ ಪ್ರದೇಶಗಳು, ಭೌಗೋಳಿಕ ವಿಭಾಗಗಳು, ನದಿಗಳು ಮತ್ತು ಮಾರುತಗಳನ್ನು ಅರ್ಥೈಸುವುದು. ಈ ಎಲ್ಲಾ ಕಲಿಕಾ ಅಂಶಗಳು ನಮ್ಮ ದಿನನಿತ್ಯದಲ್ಲಿ ಹೇಗೆ ಪ್ರಭಾವ ಬೀರಿವೆ ಎಂಬ ಅಂಶಗಳನ್ನು ಮಕ್ಕಳು ಗುರುತಿಸುವಂತಾಗಬೇಕು. ಹೆಚ್ಚು ಹೆಚ್ಚು ಚಿತ್ರಗಳನ್ನು, ನಕ್ಷೆಗಳನ್ನು ಮತ್ತು ವಿಡಿಯೋಗಳನ್ನು ತೋರಿಸುತ್ತಾ ಕಲಿಕಾಂಶಗಳನ್ನು ಮಕ್ಕಳಲ್ಲಿ ಗಟ್ಟಿಗೊಳಿಸುವುದು ಸೂಕ್ತ.

**ಮೌಲ್ಯಮಾಪನ ಚಟುವಟಿಕೆ:** ಮೌಲ್ಯಮಾಪನಕ್ಕಾಗಿ ಕಲಿಕಾ ಹಾಳೆ 43ನ್ನು ಬಳಸಿಕೊಳ್ಳಬಹುದು.

## ಕಲಿಕಾಂಶ 13.2: ಭೂಮಿಯ ಪದರಗಳ ಪ್ರಮುಖ ಲಕ್ಷಣಗಳು

**ಕಲಿಕಾ ಫಲ: ಭೂಮಿಯ ಸ್ವರೂಪವನ್ನು, ಭೂ ಪದರಗಳ ರಚನೆ ಹಾಗೂ ಪ್ರಮುಖ ಲಕ್ಷಣಗಳನ್ನು ತಿಳಿಯುವರು**

**ಉದ್ದೇಶ:**

- ಭೂಮಿಯ ಪದರಗಳು ಮಾನವ ಚಟುವಟಿಕೆಗಳೊಂದಿಗೆ ಸಹ ಸಂಬಂಧ ಹೊಂದಿರುವುದನ್ನು ಅರಿಯುವರು.
- ಭೂಮಿಯ ಪದರುಗಳಲ್ಲಿರುವ ಖನಿಜಾಂಶಗಳು ಸ್ಥಗಿತವಾಗಿರುವುದನ್ನು ಅರ್ಥಮಾಡಿಕೊಳ್ಳುವುದರೊಂದಿಗೆ ಅವುಗಳಿಂದ ನಮಗಾಗುವ ಲಾಭಗಳನ್ನು ಅರ್ಥಮಾಡಿಕೊಳ್ಳುವರು.

**ಕಲಿಕಾ ಸಾಮಾಗ್ರಿಗಳು:** ಭೂ ಪದರಗಳ ಚಿತ್ರಗಳು, ಡ್ರಾಯಿಂಗ್ ಶೀಟ್, ವಿವಿಧ ಬಣ್ಣಗಳ ಸ್ಕೆಚ್ ಪೆನ್ಗಳು, ಯುಟ್ಯೂಬ್ ವಿಡಿಯೋಗಳು.

https://youtu.be/NvqSya7qOKA
https://youtu.be/aqmchn9d_MY
https://youtu.be/TX94yvE39_o
https://youtu.be/aqmchn9d_MY

**ಕಲಿಕಾ ಪ್ರಕ್ರಿಯೆ:** ಸುಗಮಕಾರರು ಭೂಮಿಯ ರಚನೆಯ ಕುರಿತಾದ ವಿಷಯದಲ್ಲಿ ಮಕ್ಕಳ ಪೂರ್ವಜ್ಞಾನವನ್ನು ಪ್ರಶ್ನೆಗಳನ್ನು ಕೇಳುತ್ತಾ ತಿಳಿದುಕೊಳ್ಳುವುದು. ಮಕ್ಕಳು ಈಗಾಗಲೇ ಹಿಂದಿನ ತರಗತಿಗಳಲ್ಲಿ ಭೂಮಿಯ ಆಕಾರ ಮತ್ತು ಸ್ವರೂಪದ ಬಗ್ಗೆ ತಿಳಿದಿರುತ್ತಾರೆ. ಆ ಅಂಶಗಳನ್ನು ಹಿಗ್ಗಿಸುತ್ತಾ ಭೂಮಿಯ ಪದರಗಳ ಪರಿಚಯವನ್ನು ಚಿತ್ರಗಳ ಮೂಲಕ ಮಾಡುವುದು. ವಿಡಿಯೋಗಳನ್ನು ಬಳಸಿಕೊಂಡು ಮಕ್ಕಳಿಗೆ ಪರಿಕಲ್ಪನೆಯನ್ನು ಗಟ್ಟಿಗೊಳಿಸುವುದು. ಭೂಮಿಯ ಗೋಳಗಳಾದ ಶಿಲಾಗೋಳ, ವಾಯುಗೋಳ, ಜಲಗೋಳಗಳ ರಚನೆಯ ಚಿತ್ರಗಳನ್ನು ಸ್ವತಃ ಮಕ್ಕಳೇ ಬರೆಯುವಂತೆ ಮಾಡುವುದು. ಇಲ್ಲಿ ಮಕ್ಕಳಿಗೆ ಕಲಿಕಾಹಾಳೆಯಲ್ಲಿರುವ ಅಂಶಗಳ ಕುರಿತು ಹೆಚ್ಚಿನ ಒತ್ತು ನೀಡುವುದು. ಗೋಳಗಳ ಕುರಿತಾದ ಸಾಕಷ್ಟು ವಿಡಿಯೋಗಳು ಅಂತರ್ಜಾಲದಲ್ಲಿ ಲಭ್ಯವಿದೆ. ಅವುಗಳನ್ನು ಬಳಸಿಕೊಳ್ಳುವುದು ಉತ್ತಮ.

**ಮೌಲ್ಯಮಾಪನ ಚಟುವಟಿಕೆ:** ಮಕ್ಕಳಿಗೆ ಗ್ಲೋಬ್ ಮತ್ತು ನಕಾಶೆಯನ್ನು ನೀಡಿ ಅವರಿಗೆ ಹವಾಗೋಳದ ವಿಭಾಗಗಳನ್ನು ಗುರುತಿಸಲು ತಿಳಿಸುವುದು. ಕಲಿಕಾ ಹಾಳೆ 44ರಲ್ಲಿನ ಕೆಲವು ಅಂಶಗಳನ್ನು ಪುನಃ ಬಳಸಿಕೊಳ್ಳಬಹುದು.

**ಸಾರಂಶೀಕರಣ:** ಜಲಗೋಳ, ಶಿಲಾಗೋಳ ಮತ್ತು ವಾಯುಗೋಳ ಪರಿಕಲ್ಪನೆಗಳನ್ನು ಚಿತ್ರಗಳ ಮೂಲಕ ಪರಿಚಯ ಮಾಡುವುದು. ಇದಕ್ಕೆ ಸಂಬಂಧಿಸಿದ ಯೂಟ್ಯೂಬ್ ವಿಡಿಯೋಗಳನ್ನು ಬಳಸಿಕೊಂಡು ಪರಿಕಲ್ಪನೆಯನ್ನು ತಿಳಿಸುವುದು ಹೆಚ್ಚು ಸಹಕಾರಿಯಾಗುವುದು. ಸುಗಮಕಾರರು ಚಿತ್ರಗಳನ್ನು ಹೆಚ್ಚು ಬಳಸಿಕೊಳ್ಳುವುದು ಈ ಪರಿಕಲ್ಪನೆಗಳು ಹೆಚ್ಚು ಗಟ್ಟಿಗೊಳ್ಳಲು ನೆರವಾಗುತ್ತದೆ

## ಕಲಿಕಾಂಶ 14: ನೈಸರ್ಗಿಕ ವಿಕೋಪಗಳು

**ಕಲಿಕಾ ಫಲ: ವಿವಿಧ ಶಿಲೆಗಳು, ಭೂಕಂಪ ಮತ್ತು ಜ್ವಾಲಾಮುಖಿಗಳನ್ನು ವ್ಯತ್ಯಾಸಿಸುತ್ತಾರೆ. ನೈಸರ್ಗಿಕ ವಿಕೋಪಗಳಿಗೆ ಕಾರಣ ಮತ್ತು ಪರಿಣಾಮಗಳನ್ನು ಗುರುತಿಸಿ, ಕಾರಣ ವಿವರಿಸುವರು.**

**ಉದ್ದೇಶ:**

- ನೈಸರ್ಗಿಕ ವಿಕೋಪಗಳು ಮಾನವನ ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲೆ ಬೀರುವ ಪ್ರಭಾವವನ್ನು ಅರಿಯುವುದರೊಂದಿಗೆ ಅವುಗಳಿಗೆ ಪ್ರತಿಕ್ರಿಯಿಸುವುದನ್ನು ಕಲಿಯುತ್ತಾರೆ.
- ನೈಸರ್ಗಿಕ ವಿಕೋಪಗಳನ್ನು ತಡೆಗಟ್ಟಬಹುದಾದ ಕ್ರಮಗಳು, ಮತ್ತು ಆ ವಿಕೋಪಗಳಿಗೆ ಮಾನವನ ಕೊಡುಗೆಯನ್ನು ಅರ್ಥೈಸಿಕೊಂಡು ಪರಿಹಾರೋಪಾಯಗಳನ್ನು ಹುಡುಕುವರು.

**ಕಲಿಕಾ ಸಾಮಾಗ್ರಿಗಳು:** ವಿವಿಧ ರೀತಿಯ ವಿಕೋಪಗಳ ಚಿತ್ರಗಳು, ವಿಡಿಯೋಗಳು

https://youtu.be/uUxF5q2fDm0
https://youtu.be/Ff6uen63ziw
https://youtu.be/jPnTwz0AHXE
https://youtu.be/_G9ClipT7Yc

https://youtu.be/Z-2khcTHIgs

**ಕಲಿಕಾ ಪ್ರಕ್ರಿಯೆ:** ಸುಗಮಕಾರರು ವಿವಿಧ ನೈಸರ್ಗಿಕ ವಿಕೋಪಗಳಾದ ಭೂಕಂಪ, ಭೂಕುಸಿತ, ಚಂಡಮಾರುತ, ಜ್ವಾಲಾಮುಖಿ, ಸುನಾಮಿ, ಪ್ರವಾಹಗಳನ್ನು ಒಂದೊಂದಾಗಿ ಚಿತ್ರಗಳನ್ನು ತೋರಿಸಿ ಪರಿಚಯ ಮಾಡಿಸುವುದು. ಯುಟ್ಯೂಬ್ ವಿಡಿಯೋಗಳು ಈ

ಪರಿಕಲ್ಪನೆಯನ್ನು ಕಟ್ಟಿಕೊಳ್ಳಲು ನೇರವಾಗಿ ನೆರವಾಗುತ್ತವೆ. ಮಕ್ಕಳೇ ಚಿತ್ರ ಬರೆಯಬಹುದಾದ ವಿಕೋಪಗಳಿಗೆ ಕೆಲವು ಸುಳಿಹುಗಳನ್ನು ನೀಡಿ ಚಿತ್ರ ಬರೆಯಲು ಪ್ರೋತ್ಸಾಹಿಸುವುದು. ಉದಾ: ಪ್ರವಾಹದ ಚಿತ್ರ, ಜ್ವಾಲಾಮುಖಿ ಚಿತ್ರ ಇತ್ಯಾದಿ. ಸುಗಮಕಾರರು ಸಾಧ್ಯವಾದರೆ ಈ ವಿಕೋಪಗಳನ್ನು ಅಳೆಯುವ ಮಾಪನಗಳನ್ನು ಚಿತ್ರದಲ್ಲಿ ತೋರಿಸುವುದು. ಉದಾ: ರಿಕ್ಟರ್ ಮಾಪಕ. ಈ ಕಲಿಕಾಂಶದ ಮಾನವೀಯ ನೆಲೆಗಟ್ಟಿನ ಅಂಶದಲ್ಲಿ ಮಕ್ಕಳಿಗೆ ಈ ವಿಕೋಪಗಳಿಂದ ನಿರಾಶ್ರಿತರಾದವರ ಕುರಿತು ಮಾತನಾಡುವುದು ಬಹುಮುಖ್ಯ. ವಿವಿಧ ರೀತಿಯ ನೈಸರ್ಗಿಕ ವಿಕೋಪಗಳನ್ನು ಪರಿಚಯಿಸಲಾಗಿದೆ. ಅವುಗಳಿಗೆ ಕಾರಣ ಪರಿಣಾಮಗಳನ್ನು ಸಾಹಿತ್ಯದ ಸಹಾಯದಿಂದ ಬಳಸಿಕೊಂಡು ಈ ಕಲಿಕಾ ಹಾಳೆಗಳನ್ನು ಪೂರ್ಣಗೊಳಿಸುವುದು.

**ಸಾರಾಂಶೀಕರಣ:** ನೈಸರ್ಗಿಕ ವಿಕೋಪಗಳಿಗೆ ಮೂಲ ಕಾರಣಗಳನ್ನು ಮಕ್ಕಳು ಸುಗಮಕಾರರ ನೆರವಿನಿಂದ ತಿಳಿಯುತ್ತಾರೆ. ನೈಸರ್ಗಿಕ ವಿಕೋಪಗಳಿಗೆ ಮಾನವನ ಇಂದಿನ ಆಧುನಿಕ ಜೀವನ ಶೈಲಿಯ ಚಟುವಟಿಕೆಗಳು ಹೇಗೆ ಕಾರಣವಾಗಿದೆ? ಎಂಬುದನ್ನು ಮಕ್ಕಳಿಗೆ ತಿಳಿಸಬೇಕಾದ ಅಗತ್ಯತೆ ಇದೆ. ದಿನನಿತ್ಯದ ನಮ್ಮ ಜೀವನ ಶೈಲಿಯ ಮಾರ್ಪಾಡುಗಳು ನೈಸರ್ಗಿಕ ವಿಕೋಪಗಳನ್ನು ತಡೆಯುವ ಸಣ್ಣ ಸಣ್ಣ ಕೀಲಿಕೈಗಳಾಗಿವೆ ಎಂಬುದನ್ನು ಅರ್ಥೈಸಿ ಮಕ್ಕಳ ಮನಸ್ಸಿಗೆ ಮುಟ್ಟುವಂತೆ ಪರಿಕಲ್ಪನೆ ಗಟ್ಟಿಗೊಳಿಸುವುದು.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾ ಹಾಳೆ 45, ಭಾರತದಲ್ಲಿ ಸಂಭವಿಸಿದ ನೈಸರ್ಗಿಕ ವಿಕೋಪಗಳ ಸ್ಥಳಗಳನ್ನು ನೀಡಿರುವ ಕಲಿಕಾಹಾಳೆಯಲ್ಲಿ ಬರೆಯಿಸಿ. ಮುಖ್ಯವಾಗಿ ಭಾರತದ ಯಾವ ಪ್ರದೇಶಗಳು ಅಥವಾ ರಾಜ್ಯಗಳಲ್ಲಿ ಸಂಭವಿಸಿತು ಮತ್ತು ಅವು ಮಾಡಿರುವ ಹಾನಿಯ ಅಂಶಗಳನ್ನು ಸಂಗ್ರಹಿಸಲು ತಿಳಿಸುವುದು.

## ಕಲಿಕಾಂಶ 15.1: ಭೂ ಖಂಡಗಳ ಪರಿಚಯ

**ಕಲಿಕಾ ಫಲ: ಪ್ರಪಂಚದ ವಿವಿಧ ಭೂ ಖಂಡಗಳನ್ನು ಅವುಗಳಲ್ಲಿನ ವೈವಿಧ್ಯತೆಯನ್ನು ಅರಿಯುವರು.**

**ಉದ್ದೇಶ:**

- ಪ್ರಪಂಚದ ಪ್ರಮುಖ ಸಾಗರಗಳು, ಸಮುದ್ರಗಳು ಮತ್ತು ಭೂ ಖಂಡಗಳನ್ನು ಗುರುತಿಸುವರು.
- ಭಾರತಕ್ಕೆ ಹೊಂದಿಕೊಂಡ ಸಾಗರ, ಸಮುದ್ರಗಳನ್ನು ತಿಳಿಯುವರು.
- ನಕ್ಷೆಯ ಸಹಾಯದಿಂದ ಪ್ರಪಂಚದಲ್ಲಿನ ವೈವಿಧ್ಯತೆಯನ್ನು ಊಹಿಸಿಕೊಳ್ಳುವರು.

**ಕಲಿಕಾ ಸಾಮಾಗ್ರಿಗಳು:** ಪ್ರಪಂಚದ ಮತ್ತು ಭಾರತದ ಭೌತಿಕ ಮತ್ತು ರಾಜಕೀಯ ನಕ್ಷೆಗಳು, ಸಾಗರಗಳನ್ನು, ಸಮುದ್ರಗಳನ್ನು ಮತ್ತು ಭೂಖಂಡಗಳನ್ನು ಮಾತ್ರ ತೋರಿಸುವ ನಕ್ಷೆಗಳು. ಮಕ್ಕಳಿಗೆ ಗುರುತಿಸಲು ಖಾಲಿ ನಕ್ಷೆಗಳು.

**ಕಲಿಕಾ ಪ್ರಕ್ರಿಯೆ:** ಸುಗಮಕಾರರು ಪ್ರಪಂಚದ ನಕ್ಷೆಯಲ್ಲಿ ಭೂಖಂಡಗಳನ್ನು, ಸಾಗರಗಳನ್ನು, ಸಮುದ್ರಗಳನ್ನು ಕ್ರಮಾನುಗತವಾಗಿ ಪರಿಚಯಿಸುತ್ತಾ ಬರುವುದು. ಮಕ್ಕಳಿಗೆ ಖಾಲಿ ನಕ್ಷೆಗಳನ್ನು ನೀಡಿ ಅವರೇ ಗುರುತಿಸುವ ಹಾಗೆ ಮಾಡುವುದು. ಪಠ್ಯಪುಸ್ತಕದಲ್ಲಿನ ಜಲಗೋಳ ಅಧ್ಯಾಯದಲ್ಲಿನ ಖಾರಿ, ಕೊಲ್ಲಿ, ಭೂಕಂಠ, ಸಾಗರ, ಸಮುದ್ರ, ಜಲಸಂಧಿ ಈ ಕಲಿಕಾಂಶಗಳನ್ನು (ವ್ಯತ್ಯಾಸವನ್ನು) ಭಾರತದ ಭೂ ಸ್ಥಾನವನ್ನು ಆಧಾರವಾಗಿಟ್ಟುಕೊಂಡು ಪರಿಚಯಿಸುವುದು.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾ ಹಾಳೆ 46ರಲ್ಲಿನ ಚಟುವಟಿಕೆ 2

**ಸಾರಾಂಶೀಕರಣ:** ಸುಗಮಕಾರರು, ಭೂಗೋಳದ ತರಗತಿಯಲ್ಲಿ ನಕ್ಷೆ ಅಥವಾ ಮ್ಯಾಪ್ ಬಳಸುವುದು ಬಹುಮುಖ್ಯ. ಮ್ಯಾಪ್ ಅಥವಾ ನಕ್ಷೆ ಇಲ್ಲದೆ ಭೂಗೋಳದ ತರಗತಿ ಅಪೂರ್ಣ ಎನ್ನುವುದನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ಪ್ರಪಂಚದ ನಕ್ಷೆಯನ್ನಿಟ್ಟುಕೊಂಡು ಇದಕ್ಕೆ ಸಂಬಂಧಿಸಿದ ಅಂಶಗಳನ್ನು (ಇಂಡೆಕ್ಸಗಳನ್ನು) ಮಕ್ಕಳಲ್ಲಿ ಚರ್ಚಿಸುವುದು. ವಿವಿಧ ವಿಧದ ರಾಜಕೀಯ ಮತ್ತು ಭೌತಿಕ ನಕ್ಷೆಗಳನ್ನು ಬಳಸುವ ಸೂಕ್ತ ವಿಧಾನಗಳನ್ನು ಮಕ್ಕಳಿಗೆ ಅನುಕೂಲಿಸುವುದು. ಭೌತಿಕ ನಕ್ಷೆಗಳ ಅಂಶಗಳು ಪ್ರಪಂಚದ ನಿರ್ದಿಷ್ಟ ಪ್ರದೇಶದಲ್ಲಿ ಕಂಡುಬರುವುದನ್ನು ಮಕ್ಕಳಿಂದಲೇ ಗುರುತಿಸಿ ಚರ್ಚೆಗೆ ಅವಕಾಶ ನೀಡುವುದು. ಉದಾಹರಣೆಗೆ; ಮರುಭೂಮಿಗಳು ಬಹುತೇಕ ಒಂದೇ ರೀತಿಯ ಅಕ್ಷಾಂಶ ರೇಖೆಗಳ ನಡುವೆ ಇರುವುದನ್ನು ಗಮನಿಸಲು ಹೇಳಿ ಚರ್ಚಿಸಲು ಅವಕಾಶ ನೀಡುವುದು.

## ಕಲಿಕಾಂಶ 15.2: ಅಕ್ಷಾಂಶ ಮತ್ತು ರೇಖಾಂಶಗಳು

**ಕಲಿಕಾ ಫಲ: ಅಕ್ಷಾಂಶ ಮತ್ತು ರೇಖಾಂಶಗಳ ಮಹತ್ವವನ್ನು ಅರಿತು ಕೊಳ್ಳುವರು.**

ಅಕ್ಷಾಂಶ ಮತ್ತು ರೇಖಾಂಶಗಳನ್ನು ವ್ಯತ್ಯಾಸಿಸುತ್ತಾನೆ ಮತ್ತು ಭೂಪಟ ಹಾಗೂ ನಕಾಶೆಯ ಮೇಲೆ ಪ್ರಮುಖ ಅಕ್ಷಾಂಶ ಮತ್ತು ರೇಖಾಂಶಗಳನ್ನು ಗುರುತಿಸುತ್ತಾರೆ. ರೇಖಾಂಶ ಮತ್ತು ಕಾಲದ ನಡುವಿನ ಸಂಬಂಧವನ್ನು ಬಿಡಿಸುತ್ತಾರೆ. ಸ್ಥಳೀಯ ವೇಳೆ ಮತ್ತು ಪ್ರಮಾಣಾಧಾರಿತ ವೇಳೆಯನ್ನು ವ್ಯತ್ಯಾಸಿಸುತ್ತಾರೆ. ಅಂತರಾಷ್ಟ್ರೀಯ ದಿನ ರೇಖೆಯ ಮಹತ್ವವನ್ನು ವಿವರಿಸುತ್ತಾರೆ.

**ಉದ್ದೇಶ:**

- ಅಕ್ಷಾಂಶ ಮತ್ತು ರೇಖಾಂಶಗಳಿಗಿರುವ ವ್ಯತ್ಯಾಸವನ್ನು ತಿಳಿಯುವರು.
- ರೇಖಾಂಶ ಮತ್ತು ಕಾಲದ ನಡುವಿನ ಸಂಬಂಧವನ್ನು ಅರಿಯುವರು.
- ಸ್ಥಳೀಯ ವೇಳೆ, ಪ್ರಮಾಣಾಧಾರಿತ ವೇಳೆ, ಅಂತರಾಷ್ಟ್ರೀಯ ದಿನ ರೇಖೆಯ ಮಹತ್ವ ತಿಳಿಯುವರು.

**ಕಲಿಕಾ ಸಾಮಾಗ್ರಿಗಳು:** ಪ್ರಪಂಚದ ನಕ್ಷೆ (ಅಕ್ಷಾಂಶ, ರೇಖಾಂಶ ಸಹಿತ) ಡ್ರಾಯಿಂಗ್ ಶೀಟ್, ಸ್ಕೆಚ್ ಪೆನ್ಸ್, ಪ್ಲಾಸ್ಟಿಕ್ ಬಾಲ್, ಯುಟ್ಯೂಬ್ ವಿಡಿಯೋಗಳು.

https://youtu.be/Eokr1LOTgFc

https://youtu.be/F6S97YduMQ4

https://youtu.be/toyuU6Q1IW8

**ಕಲಿಕಾ ಪ್ರಕ್ರಿಯೆ:** ಸುಗಮಕಾರರು ಪ್ಲಾಸ್ಟಿಕ್ ಬಾಲ್ ಬಳಸಿಕೊಂಡು ಭೂಮಿಯ ಮೇಲಿನ ಊಹಾ ರೇಖೆಯನ್ನು ಎಳೆದಿರುವ ಕ್ರಮವನ್ನು ಗುರುತಿಸುವುದು. ಇದರಿಂದ ಮಕ್ಕಳಿಗೆ ಸ್ವಲ್ಪ ಮಟ್ಟಿನ ನೈಜತೆಗೆ ಅವಕಾಶ ನೀಡಿದಂತಾಗುತ್ತದೆ. ಮುಂದೆ ಅಕ್ಷಾಂಶ ರೇಖಾಂಶಗಳನ್ನು ಪರಿಚಯಿಸುವುದು. ಪ್ರಮುಖ ಅಕ್ಷಾಂಶ ರೇಖೆಗಳನ್ನು ಪರಿಚಯಿಸಿ ಭಾರತದ ಮೇಲೆ ಹಾದು ಹೋಗುವ ರೇಖೆಯನ್ನು ಹೆಚ್ಚು ಒತ್ತು ಕೊಟ್ಟು ಹೇಳಿಕೊಡುವುದು. ರೇಖಾಂಶವು ಹೇಗೆ ಸಮಯವನ್ನು ನಿರ್ಧರಿಸುತ್ತದೆ? ಎಂಬುದನ್ನು ಸರಳವಾಗಿ ಕಲಿಕಾ ಹಾಳೆಯಲ್ಲಿರುವ ನಕ್ಷೆಯನ್ನು ಬಳಸಿಕೊಂಡು ಅರ್ಥೈಸುವುದು. ಅಂತರಾಷ್ಟ್ರೀಯ ದಿನರೇಖೆಯ ಪರಿಚಯವನ್ನು ನಕ್ಷೆಗಳ ಮೂಲಕ ಕೆಲವು ಉದಾಹರಣೆಗಳನ್ನಿಟ್ಟುಕೊಂಡು ಅರ್ಥೈಸುವುದು.

**ಸಾರಾಂಶೀಕರಣ:** ಮಕ್ಕಳು ಅರ್ಧಗೋಳಗಳು, ಪ್ರಮುಖ ಅಕ್ಷಾಂಶ ಮತ್ತು ರೇಖಾಂಶಗಳನ್ನು ಹೆಸರಿಸಿ. ರೇಖಾಂಶಗಳನ್ನು ಆಧರಿಸಿ ಕಾಲ ನಿರ್ಣಯ ಅಕ್ಷಾಂಶಗಳನ್ನು ಆಧರಿಸಿ ಪ್ರಪಂಚದ ಭೌತಿಕ ಅಂಶಗಳನ್ನು ನಿರ್ಧರಿಸಲಾಗುತ್ತದೆ ಎಂಬುದನ್ನು ಸುಗಮಕಾರರು ಮಕ್ಕಳಿಗೆ ಚರ್ಚೆಯ ಮೂಲಕ ಅರ್ಥೈಸುವುದು. ರೇಖಾಂಶಗಳು ವೇಳೆಯನ್ನು ಗುರುತಿಸಲು ನೆರವಾಗುತ್ತವೆ ಎಂಬ ಪರಿಕಲ್ಪನೆಗಳನ್ನು ಗಟ್ಟಿಗೊಳಿಸುವುದು. ಅಂತರರಾಷ್ಟ್ರೀಯ ದಿನರೇಖೆಯ ಪರಿಕಲ್ಪನೆಯನ್ನು ಮಕ್ಕಳಲ್ಲಿ ಗಟ್ಟಿ ಮಾಡುವುದು. ಬಹುಮುಖ್ಯ ಅಂಶವೇನೆಂದರೆ ಭಾರತಕ್ಕೆ ಸಂಬಂಧಿಸಿದ ಅಂಶಗಳೊಂದಿಗೆ ಮೇಲಿನ ಎಲ್ಲಾ ಅಂಶಗಳನ್ನು ಸಮೀಕರಿಸುವುದು ಅತ್ಯಗತ್ಯ.

ಮೌಲ್ಯಮಾಪನ ಚಟುವಟಿಕೆ: ಕಲಿಕಾ ಹಾಳೆ 48 ರ 1ನೇ ಚಟುವಟಿಕೆಯನ್ನು ಅಥವಾ ಕರ್ನಾಟಕದ ಯಾವುದಾದರೂ 5 ನಗರಗಳು ಯಾವ ಯಾವ ಅಕ್ಷಾಂಶ ಮತ್ತು ರೇಖಾಂಶದ ನಡುವೆ ಬರುತ್ತವೆಂದು ಗುರುತಿಸಲು ತಿಳಿಸುವುದು.

**ಕಲಿಕಾಂಶ 16: ಭಾರತದ ಭೌಗೋಳಿಕ ಲಕ್ಷಣಗಳ ಪರಿಚಯ**

**ಕಲಿಕಾ ಫಲ: ಭಾರತದ ಪ್ರಾಕೃತಿಕ ಭೌಗೋಳಿಕ ವಿಭಾಗಗಳನ್ನು ಅರ್ಥೈಸಿಕೊಳ್ಳುವರು.**

**ಉದ್ದೇಶ:**

- ಭಾರತದ ಮೇಲ್ಮೈ ಲಕ್ಷಣಗಳು ಭಾರತದ ಜನ ಜೀವನ ಮತ್ತು ಆರ್ಥಿಕತೆಯ ಮೇಲೆ ಬೀರಿದ ಪ್ರಭಾವಗಳನ್ನು ಅರ್ಥಮಾಡಿಕೊಳ್ಳುವುದು.
- ಭಾರತದ ಹವಾಮಾನ ಮತ್ತು ವಾಯುಗುಣದ ಮೇಲೆ ಬೀರಿದ ಪ್ರಭಾವವನ್ನು ತಿಳಿದುಕೊಂಡು ನಕ್ಷೆಯಲ್ಲಿ ಗುರುತಿಸುವರು.

**ಕಲಿಕಾ ಸಾಮಾಗ್ರಿಗಳು:** ಭಾರತದ ಭೌತಿಕ ನಕ್ಷೆ, ಭೌತಿಕ ವಿಭಾಗಳನ್ನು ವಿಭಾಗಿಸಿದ ಭಾರತದ ನಕ್ಷೆ, ವಿಭಾಗಗಳಿಗೆ ಸಂಬಂಧಿಸಿದ ಚಿತ್ರಗಳು, ವಿಡಿಯೊಗಳು ಇತ್ಯಾದಿ.

**ಕಲಿಕಾ ಪ್ರಕ್ರಿಯೆ:** ಭಾರತದ ಭೌಗೋಳಿಕ ಲಕ್ಷಣಗಳನ್ನು ವಿವಿಧ ರೀತಿಯ ಭೌತಿಕ ನಕ್ಷೆಗಳನ್ನು ಬಳಸಿ ಅರ್ಥೈಸುವುದು. ಈ ಭೌಗೋಳಿಕ ಲಕ್ಷಣಗಳು ನಮ್ಮನ್ನು ಹೇಗೆ ಪ್ರಭಾವಿಸಿವೆ? ಎಂಬ ಅಂಶಗಳನ್ನು ಪ್ರಶ್ನೆಗಳನ್ನು ಹಾಕುತ್ತಾ, ಚರ್ಚಿಸುತ್ತಾ ಮಕ್ಕಳಿಂದಲೇ ಪಡೆಯುವ ಬೋಧನಾ ಪ್ರಕ್ರಿಯೆಯನ್ನು ಸುಗಮಕಾರರು ಅಳವಡಿಸಿಕೊಳ್ಳುವುದು ಉತ್ತಮ.

**ಸಾರಾಂಶೀಕರಣ:** ಸುಗಮಕಾರರು ಮಕ್ಕಳಿಗೆ ಭೌಗೋಳಿಕ ಪ್ರದೇಶಗಳು, ಭೌಗೋಳಿಕ ವಿಭಾಗಗಳು, ನದಿಗಳು ಮತ್ತು ಮಾರುತಗಳನ್ನು ಅರ್ಥೈಸುವುದು. ಈ ಎಲ್ಲಾ ಕಲಿಕಾ ಅಂಶಗಳು ನಮ್ಮ ದಿನನಿತ್ಯದಲ್ಲಿ ಹೇಗೆ ಪ್ರಭಾವ ಬೀರಿವೆ ಎಂಬ ಅಂಶಗಳನ್ನು ಮಕ್ಕಳು ಗುರುತಿಸುವಂತಾಗಬೇಕು. ಹೆಚ್ಚು ಹೆಚ್ಚು ಚಿತ್ರಗಳನ್ನು, ನಕ್ಷೆಗಳನ್ನು ಮತ್ತು ವಿಡಿಯೋಗಳನ್ನು ತೋರಿಸುತ್ತಾ ಕಲಿಕಾಂಶಗಳನ್ನು ಮಕ್ಕಳಲ್ಲಿ ಗಟ್ಟಿಗೊಳಿಸುವುದು ಸೂಕ್ತ.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾ ಹಾಳೆ 51 ಚಟುವಟಿಕೆ 2ನ್ನು ಮೌಲ್ಯಮಾಪನ ಚಟುವಟಿಕೆಗಾಗಿ ಬಳಸಿಕೊಳ್ಳಬಹುದು.

## ಭಾಗ–3 ರಾಜ್ಯಶಾಸ್ತ್ರ

## ಕಲಿಕಾಂಶ 17: ಮಕ್ಕಳ ಹಕ್ಕುಗಳು ಮತ್ತು ಮಾನವ ಹಕ್ಕುಗಳು

**ಕಲಿಕಾ ಫಲ: ಮಾನವ ಹಕ್ಕುಗಳು ಮತ್ತು ಹಕ್ಕುಗಳ ನಡುವೆ ವ್ಯತ್ಯಾಸಿಸುತ್ತಾರೆ. ಮತ್ತು ಅವುಗಳ ಮಹತ್ವವನ್ನು ತಿಳಿದುಕೊಳ್ಳುತ್ತಾರೆ.**

**ಉದ್ದೇಶ:**

- ಮಾನವ ಹಕ್ಕುಗಳು ಮತ್ತು ಮಕ್ಕಳ ಹಕ್ಕುಗಳನ್ನು ಪರಿಚಯಿಸುವುದು.
- ಮಕ್ಕಳ ಹಕ್ಕುಗಳ ಅಗತ್ಯತೆಯನ್ನು ಅರ್ಥೈಸುವುದು.
- ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುವ ಸಂದರ್ಭಗಳನ್ನು ಗುರುತಿಸಿ, ಪರಿಹಾರದ ಅಂಶಗಳನ್ನು ತಿಳಿಯುವುದು.

**ಕಲಿಕಾ ಸಾಮಾಗ್ರಿಗಳು:** ಶಿಕ್ಷಣ ಇಲಾಖೆ ಒದಗಿಸಿರುವ ಮಕ್ಕಳ ಹಕ್ಕುಗಳ ಪೋಸ್ಟರ್, ಮಕ್ಕಳ ಹಕ್ಕು ಉಲ್ಲಂಘನೆಯಾಗುತ್ತಿರುವ ಚಿತ್ರಗಳು ಮತ್ತು ವಿಡಿಯೋಗಳು.

**ಕಲಿಕಾ ಪ್ರಕ್ರಿಯೆ:** ಮಾನವ ಹಕ್ಕುಗಳ ಅಗತ್ಯತೆಯ ಕುರಿತಾದ ಸರಳ ಕಥೆಯನ್ನು ಅಥವಾ ಸನ್ನಿವೇಶವನ್ನು ಮಕ್ಕಳ ಮುಂದಿಟ್ಟು ಚರ್ಚಿಸುವುದು. ಮಾನವ ಹಕ್ಕುಗಳನ್ನು ಚಿತ್ರಗಳ ಮೂಲಕ ಪರಿಚಯಿಸುವುದು. ದಿನನಿತ್ಯ ಜೀವನದಲ್ಲಿ ಮಕ್ಕಳ ಹಕ್ಕುಗಳನ್ನು ಅರ್ಥೈಸುವುದು. ಮಕ್ಕಳ ಹಕ್ಕುಗಳು ಉಲ್ಲಂಘನೆಯಾಗುವ ಸಂದರ್ಭಗಳನ್ನು ಮಕ್ಕಳು ಸ್ವತಃ ಗುರುತಿಸುವಂತೆ ಮಾಡಲು ವಿವಿಧ ರೀತಿಯ ಚಿತ್ರಗಳನ್ನು ಮತ್ತು ವಿಡಿಯೋಗಳನ್ನು ತೋರಿಸುವುದು.

https://youtu.be/4cd-aLOQAio
https://youtu.be/cfMJ4nDC0j8
https://youtu.be/aVjGNyHgWyg

https://youtu.be/cJ7HER_Fc8c

ಮಕ್ಕಳ ಹಕ್ಕುಗಳು ಮತ್ತು ಮಾನವ ಹಕ್ಕುಗಳನ್ನು ಪರಿಚಯಿಸುವುದು. ಸುಗಮಕಾರರು ಇಲಾಖೆಯು ನೀಡಿರುವ ಮಕ್ಕಳ ಹಕ್ಕಿನ ಪೋಸ್ಟರ್ ಬಳಸಿ ಮಕ್ಕಳ ಹಕ್ಕನ್ನು ಪರಿಚಯಿಸುವುದು. ಮಕ್ಕಳ ಹಕ್ಕು ಉಲ್ಲಂಘನೆಯ ಸಂದರ್ಭಗಳನ್ನು ಮಕ್ಕಳೇ ಗುರುತಿಸುವಂತೆ ಮಾಡಿ ಕಲಿಕಾ ಹಾಳೆಯಲ್ಲಿನ ಸನ್ನಿವೇಶಗಳನ್ನು ಮಕ್ಕಳ ಮುಂದಿಟ್ಟು ಚರ್ಚಿಸುವುದು.

**ಸಾರಾಂಶೀಕರಣ:** ಮಾನವ ಹಕ್ಕುಗಳನ್ನು ಪರಿಚಯಿಸಿ, ದಿನನಿತ್ಯ ಜೀವನದಲ್ಲಿ ಮಕ್ಕಳ ಹಕ್ಕುಗಳನ್ನು ಅರ್ಥೈಸುವುದು. ಬಹುಮುಖ್ಯವಾಗಿ ಮಕ್ಕಳ ಹಕ್ಕುಗಳು ಉಲ್ಲಂಘನೆಯಾಗುವ ಸಂದರ್ಭಗಳನ್ನು ಮಕ್ಕಳು ಸ್ವತಃ ಗುರುತಿಸುವಂತಾಗಬೇಕು. ಈ ಪರಿಕಲ್ಪನೆಗಳನ್ನು ಮಕ್ಕಳಿಗೆ ತ್ತಿ ಹೇಳುವುದು ಸುಗಮಕಾರರ ಬಹುಮುಖ್ಯ ಜವಾಬ್ದಾರಿಯಾಗಿದೆ.

ಮೌಲ್ಯಮಾಪನ ಚಟುವಟಿಕೆ: ಕಲಿಕಾ ಹಾಳೆ 54 & 55ನ್ನು ಮೌಲ್ಯಮಾಪನ ಚಟುವಟಿಕೆಗಳಿಗಾಗಿ ಬಳಸಿಕೊಳ್ಳಬಹುದು.

## ಕಲಿಕಾಂಶ 18 ಸ್ಥಳೀಯ ಸರಕಾರ

**ಕಲಿಕಾಫಲ: ಸ್ಥಳೀಯ ಸರ್ಕಾರಗಳ ಚುನಾವಣೆ ಮತ್ತು ಪ್ರಮುಖ ಜವಾಬ್ದಾರಿಗಳನ್ನು ಗುರುತಿಸುವರು.**

**ಉದ್ದೇಶ:**

- ಮಕ್ಕಳಿಗೆ ಸ್ಥಳಿಯ ಸರಕಾರದ ಕಾರ್ಯವೈಖರಿಯ ಬಗ್ಗೆ ಅರ್ಥಮಾಡಿಕೊಂಡು ಭಾಗೀದಾರರಾಗುವರು.
- ಸ್ಥಳೀಯ ಸರಕಾರಗಳ ಜವಾಬ್ದಾರಿಗಳ ಬಗ್ಗೆ ತಿಳಿದುಕೊಂಡು ಜವಾಬ್ದಾರಿಯುತ ಪ್ರಜೆಯಾಗುವರು.

**ಪ್ರಕ್ರಿಯೆ:** ಸುಗಮಕಾರರು ಸ್ಥಳೀಯ ಪಂಚಾಯತಿ ಅಥವಾ ಸದಸ್ಯರನ್ನು ಭೇಟಿಯಾಗಿ ಮಾಹಿತಿ ಸಂಗ್ರಹಿಸಲು ಸಹಾಯ ಮಾಡುವುದು. ಸಂದರ್ಶನದಿಂದ ಬಂದ ಮಾಹಿತಿಯನ್ನು ಕ್ರೂಢೀಕರಿಸಿ ಪ್ರಸ್ತುತ ಪಡಿಸಲು ತಿಳಿಸುವುದು.

**ಕಲಿಕಾ ಹಾಳೆ–56**

**ಚಟುವಟಿಕೆ :1** ಚಿತ್ರದ ಮೇಲೊಂದು ಚರ್ಚೆ .

ಮಗುವಿಗೆ ಗ್ರಾಮ ಪಂಚಾಯಿತಿಯ ಬಗೆಗಿನ ತಿಳಿವನ್ನು ಅರ್ಥಮಾಡಿಕೊಳ್ಳಲು ಮತ್ತು ಗ್ರಾಮಸಭೆಯ ಕಲ್ಪನೆಯು ಮಗುವಿನ ಗಮನಕ್ಕೆ ಬಂದಿರುವುದನ್ನು ಪ್ರಶ್ನೆಗಳ ಮೂಲಕ ಪ್ರಾಥಮಿಕ ಮಾಹಿತಿ ಪಡೆಯುವುದು.

**ಚಟುವಟಿಕೆ :2** ನಮ್ಮೂರಿನ ಗ್ರಾಮ/ವಾರ್ಡ್ ಸಭೆ ಬಗ್ಗೆ ತಿಳಿಯೋಣ.

ಮಕ್ಕಳು ತಮ್ಮ ಊರಿನ ಗ್ರಾಮಸಭೆಯ ಕುರಿತು ತಮ್ಮ ಊರಿನ ಜನಪ್ರತಿನಿಧಿಗಳು ಅಥವಾ ತಮ್ಮ ಪೋಷಕರ ಸಹಾಯ ಪಡೆಯುವುದು.

**ಚಟುವಟಿಕೆ :3** ಮಕ್ಕಳ ಸಭೆ ಆಯೋಜಿಸೋಣ

ಸುಗಮಕಾರರು ಮುತುವರ್ಜಿ ವಹಿಸಿ ಪಂಚಾಯಿತಿಗೆ ಸಂಬಂಧಿಸಿದ ಅಧಿಕಾರಿಗಳ ಸಹಾಯದಿಂದ ಮಕ್ಕಳ ಸಭೆಯನ್ನು ಏರ್ಪಡಿಸುವುದು.

**ಚಟುವಟಿಕೆ :4** ನಮಗೆಷ್ಟು ಗೊತ್ತು? ಪರೀಕ್ಷಿಸಿಕೊಳ್ಳೋಣ?

ಮಕ್ಕಳ ಪೂರ್ವಜ್ಞಾನವನ್ನು ಪರೀಕ್ಷಿಸಲು ಈ ಚಟುವಟಿಕೆ ಬಳಸುವುದು. ನಂತರ ವಿದ್ಯಾರ್ಥಿಗಳು ಪ್ರಶ್ನಾವಳಿಯೊಂದಿಗೆ ಸ್ಥಳೀಯ ವ್ಯಕ್ತಿಗಳನ್ನು ಸಂದರ್ಶಿಸಿ ಸ್ವಚ್ಛತೆ, ಒಳಚರಂಡಿ, ನೈರ್ಮಲ್ಯ, ಸಾರಿಗೆಗೆ ಸಂಬಂಧಿಸಿದ ಮಾಹಿತಿ ಕಲೆಹಾಕಲು ಸಹಕರಿಸುವುದು.

**ಕಲಿಕಾ ಹಾಳೆ 57**

ನಮ್ಮ ಸ್ಥಳೀಯ ಸರ್ಕಾರದ ಬಗ್ಗೆ ತಿಳಿಯೋಣ, ಇಲ್ಲಿ ಮಕ್ಕಳು ಸ್ಥಳೀಯ ಸಂಸ್ಥೆಗೆ ಭೇಟಿ ನೀಡಿ ಪಂಚಾಯಿತಿಗೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಂದರ್ಶನ ಮಾಡುವುದು. (ಪೂರ್ವ ನಿಯೋಜಿತ)

**ಕಲಿಕಾ ಹಾಳೆ 58**

ವಿದ್ಯಾರ್ಥಿಗಳು ಯಾವುದಾದರೂ ಗ್ರಾಮಪಂಚಾಯಿತಿಗೆ ಭೇಟಿ ನೀಡಿ ಅವರ ಕರ್ತವ್ಯಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಲು ತಿಳಿಸುವುದು. ವಿದ್ಯಾರ್ಥಿಗಳು ತಾವು ವಾಸಿಸುತ್ತಿರುವ, ವಾರ್ಡ್ ಸಂಖ್ಯೆ, ಕೌನ್ಸಿಲರ್ ಮತ್ತು ಮೇಯರ್‌ಗಳಿಗೆ ಸಂಬಂಧಿಸಿದಂತೆ ಸಂಶೋಧನಾ ಕಾರ್ಯ ಕೈಗೊಳ್ಳಲು ತಿಳಿಸುವುದು.

**ಕಲಿಕಾ ಹಾಳೆ 59**

ಪ್ರಶ್ನೆಗಳಿಗೆ ಉತ್ತರಿಸೋಣ – ಮೌಲ್ಯಮಾಪನಕ್ಕೆ ಬಳಸಿಕೊಳ್ಳುವುದು.

**ಕಲಿಕಾ ಹಾಳೆ 60**

ಸುಗಮಕಾರರ ನೆರವಿನಿಂದ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಕಾರ್ಯಗಳನ್ನು ಪಟ್ಟಿ ಮಾಡುವುದು. ಎರಡು ಪಂಚಾಯಿತಿಗಿರುವ ಸಾಮ್ಯತೆ ಮತ್ತು ವ್ಯತ್ಯಾಸವನ್ನು ಗುರುತಿಸುವಂತಾಗಬೇಕು.

**ಸಾರಾಂಶೀಕರಣ:** ಶಾಲಾ ಮಕ್ಕಳನ್ನು ಖುದ್ದಾಗಿ ಸಮೀಪದ ಗ್ರಾಮ ಪಂಚಾಯಿತಿ/ ಪಟ್ಟಣ ಪಂಚಾಯಿತಿ/ತಾಲೂಕು ಪಂಚಾಯಿತಿಗಳಿಗೆ ಭೇಟಿ ಮಾಡಿಸಿ ಅಲ್ಲಿನ ಅಧಿಕಾರಿವರ್ಗದವರೊಂದಿಗೆ, ಜನಪ್ರತಿನಿಧಿಗಳೊಂದಿಗೆ ಚರ್ಚೆಯನ್ನು ಏರ್ಪಡಿಸುವುದು. ವಿದ್ಯಾರ್ಥಿಗಳು ಪ್ರಶ್ನಾವಳಿಯೊಂದಿಗೆ ಸಂದರ್ಶಿಸಿ ಸ್ವಚ್ಛತೆ, ಒಳಚರಂಡಿ, ನೈರ್ಮಲ್ಯ, ಸಾರಿಗೆಗೆ ಸಂಬಂಧಿಸಿದಂತೆ ಮಾಹಿತಿ ಕಲೆಹಾಕಲು ಸಹಕರಿಸುವುದು. ಕಾರ್ಯ ಹಾಳೆಗಳಲ್ಲಿ ತಿಳಿಸಲಾದ ಅಂಶಗಳನ್ನು ಸುಗಮಕಾರರು ಮಕ್ಕಳ ಈ ಭೇಟಿಯ ಸಂದರ್ಭದಲ್ಲಿ ಪ್ರಾಯೋಗಿಕವಾಗಿ ಪಡೆದ ಅನುಭವದೊಂದಿಗೆ ಪೂರ್ಣಗೊಳಿಸುವಂತಾಗಬೇಕು.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾ ಹಾಳೆ 59ರ 4ನೇ ಚಟುವಟಿಕೆಯನ್ನು ಬಳಸಿಕೊಳ್ಳಬಹುದು.

## ವ್ಯವಹಾರ ಅಧ್ಯಯನ

### ಕಲಿಕಾಂಶ 19: ನಮ್ಮ ಜೀವನದಲ್ಲಿ ಬ್ಯಾಂಕುಗಳು

**ಕಲಿಕಾ ಫಲ: ವಿದ್ಯಾರ್ಥಿಗಳು ವಿವಿಧ ವ್ಯವಹಾರ ಸಂಘಟನೆಗಳು ಮತ್ತು ಸಂಸ್ಥೆಗಳನ್ನು ಅವುಗಳ ಕಾರ್ಯಗಳ ಆಧಾರದ ಮೇಲೆ ವರ್ಗೀಕರಿಸುತ್ತಾರೆ. ಉದಾ; ಬ್ಯಾಂಕ್, ಪಾಲುದಾರಿಕೆ ಸಂಸ್ಥೆ ಇತ್ಯಾದಿ.**

**ಉದ್ದೇಶ:**

- ಬ್ಯಾಂಕಿನಲ್ಲಿ ವ್ಯವಹರಿಸಲು ಬೇಕಾದ ಕನಿಷ್ಠ ಅಗತ್ಯಾಂಶಗಳನ್ನು ಅರಿಯುವುದು.
- ಬ್ಯಾಂಕಿನಲ್ಲಿ ಬಳಸುವ, ವ್ಯವಹರಿಸಲು ಬೇಕಾದ ದಾಖಲೆಗಳನ್ನು ಅರ್ಥಮಾಡಿಕೊಳ್ಳುವುದು.

**ಕಲಿಕಾ ಸಾಮಾಗ್ರಿಗಳು:** ಬ್ಯಾಂಕಿನಲ್ಲಿ ಬಳಸುವ ಚೆಕ್, ಹುಂಡಿ, ಹಣ ಹಾಕುವ ಮತ್ತು ಹಣ ತೆಗೆಯುವ ಸ್ಲಿಪ್, ಡಿಡಿ, ಎ.ಟಿ.ಎಂ, ಅಪ್ಲಿಕೇಷನ್ ಅರ್ಜಿ, ಪಾಸ್‌ಬುಕ್‌ಗಳ ಮಾದರಿಗಳು.

**ಕಲಿಕಾ ಪ್ರಕ್ರಿಯೆ:** ಮಕ್ಕಳನ್ನು ಹತ್ತಿರದ ಬ್ಯಾಂಕಿಗೆ ಕರೆದೊಯ್ದು ಅಲ್ಲಿ ನಡೆಯುವ ಕಾರ್ಯವಿಧಾನಗಳನ್ನು ವೀಕ್ಷಿಸಲು ಹೇಳುವುದು. ಅಲ್ಲಿ ಬಳಸುವ ಲಿಖಿತ ಸಾಮಗ್ರಿಗಳನ್ನು ಪರಿಚಯಿಸುವುದು (ಅಪ್ಲಿಕೇಷನ್ ಅರ್ಜಿ, ಪಾಸ್ಬುಕ್ ಇತ್ಯಾದಿ). ಸಾಧ್ಯವಾದರೆ ಬ್ಯಾಂಕಿನ ಉದ್ಯೋಗಿಗಳೊಂದಿಗೆ ಸಂದರ್ಶಿಸುವುದು. ಮಕ್ಕಳ ಪ್ರಶ್ನೆಗಳಿಗೆ ಉತ್ತರವನ್ನು ನೀಡುವುದು, ಮಾಹಿತಿಗಳ ಅವಶ್ಯಕತೆ ಬಂದಾಗ ಸುಗಮಕಾರರು ಅವುಗಳನ್ನು ಒದಗಿಸುವುದು.

**ಸಾರಾಂಶೀಕರಣ:** ಜನರು ಬ್ಯಾಂಕುಗಳಲ್ಲಿ ವ್ಯವಹರಿಸುವಾಗ ಬಳಸುವ ಚೆಕ್, ಹಣ ಹಿಂಪಡೆಯುವ ಸ್ಲಿಪ್, ಹಣ ಹಾಕುವ ಸ್ಲಿಪ್, ಎಟಿಎಂ, ಡಿಡಿ ಇವುಗಳನ್ನು ನೈಜವಾಗಿ ಪ್ರದರ್ಶಿಸಿ ಅದರ ಬಳಕೆಯನ್ನು ಮತ್ತು ಅದನ್ನು ಪೂರ್ಣಗೊಳಿಸುವ ಕ್ರಮಗಳನ್ನು ಮಕ್ಕಳಿಂದಲೇ ಮಾಡಿಸುವುದು. ಈ ಬ್ಯಾಂಕುಗಳಲ್ಲಿ ಬಳಸುವ ದಾಖಲೆಗಳ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ಮಕ್ಕಳು ಹೇಳುವಂತೆ ಮಾಡಲು ಸುಗಮಕಾರರು ಅನುಕೂಲಿಸುವುದು.

**ಮೌಲ್ಯಮಾಪನ ಚಟುವಟಿಕೆ :** ಕಲಿಕಾ ಹಾಳೆ 62 ನ್ನು ಬಳಸಿಕೊಳ್ಳಬಹುದು ಮತ್ತು ಬ್ಯಾಂಕಿಗೆ ಸಂಬಂಧಿಸಿದ ನಮೂನೆಗಳನ್ನು ಮಕ್ಕಳು ಗುರುತಿಸುವುದು, ಜೊತೆಗೆ ಅವುಗಳನ್ನು ಪೂರ್ಣವಾಗಿ ಭರ್ತಿಮಾಡುವ ವಿಧಾನಗಳನ್ನು ಸುಗಮಕಾರರ ಸಹಾಯದಿಂದ ತಿಳಿಯುವುದು.

## ಭಾಗ 4 : ಅರ್ಥಶಾಸ್ತ್ರ

## ಕಲಿಕಾಂಶ 20: ಅರ್ಥವ್ಯವಸ್ಥೆಯ ವಲಯಗಳ ಪರಿಚಯ

**ಕಲಿಕಾಫಲ: ಭಾರತದ ಅರ್ಥವ್ಯವಸ್ಥೆಯಲ್ಲಿನ ವಲಯಗಳನ್ನು ತಿಳಿಯುತ್ತಾರೆ ಮತ್ತು ಭಾರತದ ಆರ್ಥಿಕತೆಯಲ್ಲಿ ಬೆಳವಣಿಗೆಯಲ್ಲಿ ಅವುಗಳ ಪಾಲನ್ನು ವಿಶ್ಲೇಷಿಸುವರು.**

**ಉದ್ದೇಶ:**

- ಆರ್ಥಿಕ ವಲಯಗಳಲ್ಲಿನ ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ವಲಯಗಳ ಅಂಶಗಳನ್ನು ತಿಳಿಯುತ್ತಾರೆ.
- ಪ್ರತಿ ವಲಯಗಳು ಒಂದಕ್ಕೊಂದು ಹೇಗೆ ಪೂರಕವಾಗಿವೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾ ದೇಶಾಭಿವೃದ್ಧಿ ಮತ್ತು ವೈಯಕ್ತಿಕ ಅಭಿವೃದ್ಧಿಯಲ್ಲಿ ಅವುಗಳ ಪಾತ್ರವನ್ನು ವಿವರಿಸುವರು.

**ಕಲಿಕಾ ಸಾಮಾಗ್ರಿಗಳು:** ಪಠ್ಯಪುಸ್ತಕ, ವಲಯಗಳ ವಿಂಗಡನೆಯ ಚಾರ್ಟುಗಳು, ಚಿತ್ರಗಳು, ವಿಡಿಯೊಗಳು.

https://youtu.be/qXTP07D0Lno

**ಕಲಿಕಾ ಪ್ರಕ್ರಿಯೆ:** ಸುಗಮಕಾರರು ಆರ್ಥ ವ್ಯವಸ್ಥೆಯ ಅರ್ಥವನ್ನು ತಿಳಿಸಿ. ಆರ್ಥಿಕ ವಲಯಗಳನ್ನು ವಿಭಜಿಸಿರುವುದರ ಉದ್ದೇಶಗಳನ್ನು ತಿಳಿಸುತ್ತಾ, ಆರ್ಥಿಕ ವಲಯಗಳನ್ನು ಒಂದೊಂದಾಗಿ ಪರಿಚಯಿಸುವುದು. ಮುಖ್ಯವಾಗಿ ಕೃಷಿ ಸಂಬಂಧಿತ ವಿಷಯಗಳು ಪ್ರಾಥಮಿಕದಲ್ಲೂ, ಕೈಗಾರಿಕೆಗಳಿಗೆ ಸಂಬಂಧಿಸಿದವು ದ್ವಿತೀಯ ವಲಯವೆಂದು ಮತ್ತು ಸೇವೆಯನ್ನು ನೀಡುವ ಚಟುವಟಿಕೆಗಳನ್ನು ತೃತೀಯ ವಲಯವೆಂದು ಅರ್ಥೈಸುವುದು. ಪ್ರತಿಯೊಂದು ವಲಯಗಳು ಒಳಗೊಳ್ಳುವ ಚಟುವಟಿಕೆಗಳನ್ನು ಮಕ್ಕಳಿಗೆ ತಾರ್ಕಿಕವಾಗಿ ತಿಳಿಸಿ, ಪರಿಕಲ್ಪನೆ ಗಟ್ಟಿಗೊಳಿಸಲು ಸರಳ ಮೌಲ್ಯಮಾಪನ ಕೈಗೊಳ್ಳುವುದು.

**ಸಾರಾಂಶೀಕರಣ:** ಭಾರತದಲ್ಲಿನ ಪ್ರಮುಖ ಆರ್ಥಿಕ ವಲಯಗಳನ್ನು ಪರಿಚಯಿಸುವುದು. ಇಲ್ಲಿ ಸುಗಮಕಾರರು ಮಕ್ಕಳಿಗೆ ಪ್ರಾಥಮಿಕ, ದ್ವಿತೀಯ ಹಾಗೂ ತೃತೀಯ ವಲಯಗಳು ಒಳಗೊಳ್ಳುವ ಚಟುವಟಿಕೆಗಳನ್ನು ಅರ್ಥೈಸುವುದು ಹಾಗೂ ಭಾರತದ ಆರ್ಥಿಕ ಬೆಳವಣಿಗೆಗೆ ಇವುಗಳ ಶೇಕಡಾವಾರು ಕೊಡುಗೆಗಳನ್ನು ಮಗು ಗುರುತಿಸುವಂತೆ ಸುಗಮಕಾರರು ಅನುಕೂಲಿಸುವುದು. ಮಕ್ಕಳು ಊರಿನಲ್ಲಿನ ಸಂಘಟನೆಯ ಮಹತ್ವವನ್ನು ಅರಿಯಬೇಕು. ಊರಿನವರ ಪರಸ್ಪರ ಆರ್ಥಿಕ ಸಹಕಾರ ಮತ್ತು ವೈಯಕ್ತಿಕ ಸಹಕಾರವು ಹಳ್ಳಿಯ ಅಥವಾ ಊರಿನ ನೆಮ್ಮದಿಯ ಬದುಕಿನಲ್ಲಿದೆ ಎಂಬುದನ್ನು ಮಕ್ಕಳು ತಿಳಿಯುವಂತೆ ಮಾಡುವುದು. ಅಲ್ಲಿನ ವಿಭಿನ್ನ ಜನರ ವಿವಿಧತೆಯಲ್ಲಿ ಸಾಮರಸ್ಯದ ಭಾವನೆಯ ಅಂಶ ಮಕ್ಕಳಿಗೆ ತಲುಪುವಂತಾಗಬೇಕಿದೆ.

**ಮೌಲ್ಯಮಾಪನ ಚಟುವಟಿಕೆ:** ಕಲಿಕಾಹಾಳೆ 63ನ್ನು ಬಳಸಿಕೊಳ್ಳಬಹುದು.

### ಕಲಿಕಾಂಶ–21 ಸ್ವಸಹಾಯ ಸಂಘಗಳು

**ಕಲಿಕಾಫಲ: ಹಳ್ಳಿ ಜನರ ಬದುಕಿನಲ್ಲಿ ಸ್ವಸಹಾಯ ಸಂಘಗಳ ಪಾತ್ರವನ್ನು ಅರಿಯುವರು.**

**ಉದ್ದೇಶ:**

- ಸ್ವಸಹಾಯ ಸಂಘದ ಗುಂಪುಗಳು ಜನಸಾಮಾನ್ಯರ ಆರ್ಥಿಕ ಸ್ಥಿತಿ ಸುಧಾರಿಸಲು ಸಹಾಯಕವಾಗಿವೆ ಎನ್ನುವುದನ್ನು ಅರಿಯುವರು.
- ಸ್ವಸಹಾಯ ಗುಂಪುಗಳು ಆರ್ಥಿಕವಾಗಿ ಜನರನ್ನು ಮೇಲೆತ್ತಲು ಸಹಾಯ ಮಾಡುವ ವಿಧಾನವನ್ನು ತಿಳಿದುಕೊಂಡು ಭಾಗೀದಾರರಾಗುವರು.

**ಕಲಿಕಾ ಸಾಮಾಗ್ರಿಗಳು:** ಚಿತ್ರಗಳು, ವಿಡಿಯೋಗಳು, ಸಂದರ್ಶನಕ್ಕೆ ಬೇಕಾದ ಪ್ರಶ್ನೋತ್ತರ ಮಾದರಿ.

**ಕಲಿಕಾ ಪ್ರಕ್ರಿಯೆ:** ಮಕ್ಕಳಿಗೆ ಸ್ವಸಹಾಯ ಸಂಘಗಳೆಂದರೇನು? ಎಂಬುದನ್ನು ಊರಿನ ಯಾವುದಾದರೂ ಸಂಘವನ್ನು ನೈಜವಾಗಿ ಉದಾಹರಣೆಯನ್ನು ತಂದು ಪರಿಚಯಿಸುವುದು ಹೆಚ್ಚು ಸೂಕ್ತ. ಇಲ್ಲವಾದಲ್ಲಿ ತರಗತಿಯ ಹಿಂದಿನ ದಿನ ಊರಿನ ಯಾವುದಾದರೂ ಸ್ವಸಹಾಯ ಸಂಘವನ್ನು ಸುಗಮಕಾರರು ಗುರುತಿಸಿ ಅಲ್ಲಿಗೆ ಹೋಗಿ ಪೂರ್ವ ಮಾಹಿತಿಯನ್ನು ಸಂಗ್ರಹಿಸಲು ಹೇಳುವುದು. ಮುಂದಿನ ಹಂತದಲ್ಲಿ ಸುಗಮಕಾರರು ಮಕ್ಕಳಿಗೆ ಸಂದರ್ಶನಕ್ಕೆ ಬೇಕಾದ ಪ್ರಶ್ನೋತ್ತರ ಮಾದರಿಯನ್ನು ನೀಡಿ ಅಗತ್ಯ ಮಾಹಿತಿ ಸಂಗ್ರಹಕ್ಕೆ ಅವಕಾಶ ನೀಡುವುದು.

**ಕಲಿಕಾ ಹಾಳೆ–64**

ಮಾಹಿತಿ ಸಂಗ್ರಹಕ್ಕೆ ಅನುಕೂಲವಾಗುವಂತೆ ಮಾದರಿ ಪ್ರಶ್ನೆಗಳನ್ನು ನೀಡಿ, ಹತ್ತಿರದ ಸ್ವ–ಸಹಾಯ ಸಂಘಕ್ಕೆ ಭೇಟಿ ನೀಡುವುದು.

**ಸಾರಾಂಶೀಕರಣ:** ಮಕ್ಕಳು ಊರಿನಲ್ಲಿನ ಸಂಘಟನೆಯ ಮಹತ್ವವನ್ನು ಅರಿಯಬೇಕು. ಊರಿನವರ ಪರಸ್ಪರ ಆರ್ಥಿಕ ಸಹಕಾರ ಮತ್ತು ವೈಯುಕ್ತಿಕ ಸಹಕಾರವು ಹಳ್ಳಿಯ ಅಥವಾ ಊರಿನ ನೆಮ್ಮದಿಯ ಬದುಕಿನಲ್ಲಿದೆ ಎಂಬುದನ್ನು ಮಕ್ಕಳು ತಿಳಿಯುವಂತೆ ಮಾಡುವುದು. ಅಲ್ಲಿನ ವಿಭಿನ್ನ ಜನರ ವಿವಿಧತೆಯಲ್ಲಿ ಸಾಮರಸ್ಯದ ಭಾವನೆಯ ಅಂಶ ಮಕ್ಕಳಿಗೆ ತಲುಪುವಂತಾಗಬೇಕಿದೆ.

**ಮೌಲ್ಯಮಾಪನ ಚಟುವಟಿಕೆ:** ಮೌಲ್ಯಮಾಪನಕ್ಕಾಗಿ ಕಲಿಕಾ ಹಾಳೆ 64 ರ 2ನೇ ಚಟುವಟಿಕೆಯನ್ನು ಬಳಸಿಕೊಳ್ಳಬಹುದು.

**22. ಸಮಾಜ ವಿಜ್ಞಾನ ಕಲಿಕೆ ಅನುಕೂಲಿಸಬಹುದಾದ ವಿಧಾನಗಳು**

ಕಲಿಕೆ ಎಂದರೆ ಶಿಕ್ಷಕರು ಹೇಳಿದ್ದನ್ನೆಲ್ಲ ಮಕ್ಕಳು ಕಲಿಯುವುದಲ್ಲ. ಕಲಿಕೆ ಮಕ್ಕಳೇ ಕ್ರಿಯಾಶೀಲರಾಗಿ ತೊಡಗಿಕೊಂಡು ಅನುಭವಗಳ ಮೂಲಕ ತಮ್ಮ ಜ್ಞಾನ ಕಟ್ಟಿಕೊಳ್ಳುವ ಪ್ರಕ್ರಿಯೆ. ಮಕ್ಕಳು ಗುಂಪು ಚರ್ಚೆಯಲ್ಲಿ, ಸಹವರ್ತಿಗಳ ಜೊತೆ ಚರ್ಚೆಯಲ್ಲಿ, ಅನುಭವ ಹಂಚಿಕೆಯಲ್ಲಿ ಸಹಕಲಿಕೆಯಲ್ಲಿ ತೊಡಗಿಕೊಂಡು ವೈಯಕ್ತಿಕವಾಗಿ ಹಾಗೂ ಗುಂಪಿನಲ್ಲಿ ಕಲಿಯುವಂತಾದರೆ ಶಿಕ್ಷಕರೊಂದಿಗೆ ಆತ್ಮೀಯವಾಗಿ, ಆತ್ಮವಿಶ್ವಾಸದಿಂದ ಚರ್ಚಿಸುವಂತಾಗಬೇಕು. ಈ ಎಲ್ಲಾ ವಿಧಾನಗಳಲ್ಲೂ ಮಕ್ಕಳು ಕ್ರಿಯಾಶೀಲರಾಗಿರುತ್ತಾರೆಯೇ ಹೊರತು ಶಿಕ್ಷಕರು ಹೇಳಿದ್ದನ್ನು ಆಲಿಸುವವರಾಗಿರುವುದಿಲ್ಲ.

1. ಕಥಾ ನಿರೂಪಣಾ ವಿಧಾನ.
2. ಯೋಜನಾ ವಿಧಾನ
3. ಪಠ್ಯಪುಸ್ತಕದ ಪಾಠ ಅವಲೋಕನ / ವಿಮರ್ಶಾ ಚಟುವಟಿಕೆ.
4. ಚರ್ಚಾ ವಿಧಾನ
5. ಸಮಸ್ಯಾ ಪರಿಹಾರ ವಿಧಾನ
6. ಮೂಲಾಧಾರ ವಿಧಾನ
7. ಶಿಶು ಕೇಂದ್ರಿತ ಉಪನ್ಯಾಸ (ಶಿಕ್ಷಕರೇ ಕೇಂದ್ರವಾಗದೇ ಎಚ್ಚರಿಕೆಯಿಂದ ಬಳಸಬೇಕು)
8. ಘಟಕ ಪದ್ಧತಿ
9. ವೀಕ್ಷಣಾ ವಿಧಾನ
10. ಪ್ರವಾಸ / ಹೊರಸಂಚಾರ ವಿಧಾನ
11. ಪಾತ್ರಾಭಿನಯ/ನಾಟಕಾಭಿನಯ ವಿಧಾನ
12. ಕ್ಷೇತ್ರ ಅಧ್ಯಯನ
13. ಪ್ರಯೋಗ
14. ಕ್ರೀಡಾ ವಿಧಾನ
15. ಪ್ರಶ್ನೋತ್ತರ ವಿಧಾನ
16. ಸಂಶೋಧನೆ
17. ಸಮೀಕ್ಷೆ / ಸಂದರ್ಶನ
18. ವಿಶ್ಲೇಷಣೆ.

ಶಿಕ್ಷಕರು ದೈನಂದಿನ ಕಲಿಕಾಂಶದ ಸ್ವರೂಪವನ್ನು ಅರ್ಥೈಸಿಕೊಂಡು ಯಾವ ವಿಧಾನದಿಂದ ಸುಲಭವಾಗಿ, ಗುಣಾತ್ಮಕವಾಗಿ ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನು ಮೈಗೂಡಿಸಬಹುದೆಂಬುದನ್ನು ಯೋಚಿಸಿ, ಯೋಜಿಸಿ ಕಾರ್ಯಪ್ರವತ್ತರಾದರೆ ಅವರ ಉದ್ದೇಶವು ಈಡೇರುವುದರಲ್ಲಿ ಸಂಶಯವಿಲ್ಲ. ಇಂಥ ಶಿಕ್ಷಕರು ಮಾತ್ರ ಉತ್ತಮ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಬಲ್ಲರು.

**ವಿವಿಧ ಮಾಹಿತಿ ಆಕರ / ಸಂಪನ್ಮೂಲಗಳನ್ನು ಬಳಸುವುದು.**

ನಿರಂತರ ಅಧ್ಯಯನ ಶೀಲರಾಗಿರುವವರು ಮಾತ್ರವೇ ಅಧ್ಯಾಪಕರೆನಿಸುತ್ತಾರೆ. 'ತಿಳಿದಿರುವುದು ಅಂಗೈ ಅಗಲದಷ್ಟು, ತಿಳಿಯಬೇಕಾಗಿರುವುದು ಸಾಗರದಷ್ಟು' ಎಂಬ ನುಡಿಯಂತೆ ನಾವು ಎಷ್ಟೇ ಕಲಿತರೂ ಕಲಿಯಲು ಬಹಳಷ್ಟಿದೆ ಎಂಬ ಅರಿವು ನಮಗಿರಬೇಕು. ಪ್ರತಿಯೊಂದು ಮಗುವಿನಿಂದಲೂ ಕಲಿಯಬೇಕಾದುದು ಇರುತ್ತದೆ. ಹುಡುಕಾಟ, ಅಂತರಾವಲೋಕನ ಮತ್ತು ಮಕ್ಕಳ ಅಗತ್ಯಗಳಿಗೆ ಸಂವೇದನಾ ಶೀಲತೆಯಿದ್ದರೆ ತನ್ನ ವೃತ್ತಿ ಜೀವನದ ದಕ್ಷತೆಯನ್ನು ಶಿಕ್ಷಕರು ಖಂಡಿತವಾಗಿಯೂ ಹೆಚ್ಚಿಸಿಕೊಳ್ಳುತ್ತಾರೆ. ಪರಿಣಾಮಕಾರಿ ತರಗತಿ ನಿರ್ವಹಣೆ, ಆಕರ್ಷಕವಾದ ರೀತಿಯಲ್ಲಿ ಕಲಿಕಾಂಶಗಳ ವರ್ಗಾಯಿಸುವಿಕೆ ನಡೆಸಲು ಹಲವು ಸಾಧನ ಸಲಕರಣೆಗಳು ಸೃಜಿಸಲ್ಪಡುತ್ತವೆ. ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ ಮೊದಲಾದ ಸುದ್ದಿ ಮಾಧ್ಯಮಗಳಲ್ಲಿ ಬರುವ ಪಾಠಕ್ಕೆ ಪೂರಕವಾಗಬಲ್ಲ ವಿಷಯ, ಚಿತ್ರ, ಅಂಕಿ–ಅಂಶಗಳನ್ನು ಅಂದೇ ಕತ್ತರಿಸಿ ಜೋಪಾನವಾಗಿ ಇಟ್ಟುಕೊಂಡಲ್ಲಿ ಅವು ಉಪಯುಕ್ತ ಕಲಿಕಾ ಸಾಧನಗಳಾಗುತ್ತವೆ. ತಾಂತ್ರಿಕ ಸಾಧನ ಸಲಕರಣೆಗಳಾದ ರೇಡಿಯೋ, ದೂರದರ್ಶನ, ಕಂಪ್ಯೂಟರ್, ಒ.ಹೆಚ್.ಪಿ, ಪ್ರೊಜೆಕ್ಟರ್‌ಗಳನ್ನು ಸೂಕ್ತ ಸಂದರ್ಭದಲ್ಲಿ ಕಲಿಕೆಗೆ ಪೂರಕವಾದ ಆಕರಗಳಾಗಿ ಬಳಸುವ ಅಭ್ಯಾಸವೂ ಒಳ್ಳೆಯದು. ಶಾಲಾ ವಾಚನಾಲಯದಲ್ಲಿರುವ ಆಕರ ಗ್ರಂಥಗಳನ್ನು ಶಿಕ್ಷಕರೂ ಓದಿ ವಿದ್ಯಾರ್ಥಿಗಳಿಗೂ ಓದಲು ಅವಕಾಶ ಕಲ್ಪಿಸಬೇಕು.

ಕೆಲವು ಆಕರ ಗ್ರಂಥಗಳು

1. ಭೂಗೋಳ ಸಂಗಾತಿ – ಭಾಗ 1, 2 ಮತ್ತು 3
2. ಕಿರಿಯರ ವಿಶ್ವ ಕೋಶ – 7 ಸಂಪುಟಗಳು – ಡಾ ನಿರಂಜನ್
3. ಸಚಿತ್ರ ಇತಿಹಾಸ
4. ಪ್ರಾಚೀನ ಭಾರತ
5. ಸಮಗ್ರ ಭಾರತದ ಇತಿಹಾಸ
6. ಭಾರತದ ಸಂವಿಧಾನ

ಇವೇ ಮುಂತಾದ ಮೌಲ್ಯಯುತ ಆಕರ ಗ್ರಂಥಗಳನ್ನು ಒಳಗೊಂಡ ಒಂದು ಇತಿಹಾಸ / ರಾಜ್ಯ ಶಾಸ್ತ್ರ / ಭೂಗೋಳದ ಪ್ರಯೋಗ ಶಾಲೆಯನ್ನು ಹೊಂದುವ ಮೂಲಕ ಸಮಾಜ ವಿಜ್ಞಾನ ವಿಷಯದ ಕಲಿಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿಸಬಹುದಾಗಿದೆ.

**ಚಟುವಟಿಕೆಗಳನ್ನು ಸಂಘಟಿಸುವುದು ಮತ್ತು ಗುಂಪು ರಚನೆ**

ಪರಿಣಾಮಕಾರಿಯಾಗಿ ಕಲಿಕೆ ಅನುಕೂಲಿಸಲು ನಿರಂತರ ಚಟುವಟಿಕೆಗಳನ್ನು ತರಗತಿ ಕೋಣೆಯ ಒಳಗೂ–ಹೊರಗೂ ರೂಪಿಸಿಕೊಳ್ಳಬೇಕಾಗುತ್ತದೆ. ಆದರೆ ಚಟುವಟಿಕೆಗಳಿಗಾಗಿ ಚಟುವಟಿಕೆಯಲ್ಲ. ತರಗತಿಯ ಏಕತಾನತೆಯನ್ನು ಹೋಗಲಾಡಿಸಿ ಜ್ಞಾನವನ್ನು ಕಟ್ಟಿಕೊಳ್ಳಲು ಅನುಕೂಲಿಸುವಂತಹ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಬೇಕು. ಉದ್ದೇಶಿತ ಚಟುವಟಿಕೆಯಿಂದ ಕಲಿಕೆಯ ಮಾರ್ಗವು ಸರಳಗೊಳ್ಳುವಂತಿರಬೇಕೇ ಹೊರತು ಅದು ವಿಷಯವನ್ನು ಮತ್ತಷ್ಟು ಕ್ಲಿಷ್ಟಗೊಳಿಸುವಂತಾಗಬಾರದು. ಕಲಿಕೆಯ ಅವಲೋಕನವನ್ನು ಕೂಡ ಚಟುವಟಿಕೆಗಳ ಮೂಲಕವೇ ನಿರ್ಣಯಿಸಬಹುದೆಂಬ ಅರಿವಿನೊಂದಿಗೆ ವಿವಿಧ ಹಂತಗಳಲ್ಲಿ ವಿವಿಧ ರೀತಿಯ ಚಟುವಟಿಕೆಗಳನ್ನು ಸಂಯೋಜಿಸಿಕೊಳ್ಳಬೇಕು. ಈ ಚಟುವಟಿಕೆಗಳಿಗೆ ಕೆಲವು ಪೂರ್ವ ಸಿದ್ಧತೆಗಳಿರಬೇಕು. ಚಟುವಟಿಕೆಯ ಭಾಗವಾಗಿ ಗುಂಪು ಕಲಿಕೆಗೆ ಅವಕಾಶ ಕಲ್ಪಿಸಿಕೊಡಿ. ವಿವಿಧ ಗುಂಪುಗಳನ್ನು ರಚಿಸುವಾಗ ಯಾವ ವಿದ್ಯಾರ್ಥಿಯನ್ನು ಯಾವ ಗುಂಪಿನಲ್ಲಿಡಬೇಕು, ಯಾರು ಕಲಿಕೆಯಲ್ಲಿ ವಿದ್ಯಾರ್ಥಿಗಳಿಗೆ ಸಹಾಯಕರು, ಯಾರು ಗುಂಪಿನ ನಾಯಕರು ಎಂದು ಮಕ್ಕಳೇ ನಿರ್ಧರಿಸುವಂತೆ ಅನುಕೂಲಿಸಿ. ಗುಂಪು ಕಲಿಕೆಯ ಗುರಿ ಮತ್ತು ಉದ್ದೇಶಗಳನ್ನು ಸಾಧಿಸಲು ವೈಯಕ್ತಿಕ ಗಮನ ನೀಡಿಕೆ ಅತಿ ಅವಶ್ಯಕ. ಪ್ರತಿ ಸಂದರ್ಭದಲ್ಲಿಯೂ ಮಕ್ಕಳ ಸಹಜ ಪ್ರವೃತ್ತಿಗಳಾದ ಕುತೂಹಲ, ಪ್ರಶ್ನಿಸುವ ಮನೋಭಾವನೆ, ಚಿಕಿತ್ಸಕ ಬುದ್ಧಿಗೆ ಪ್ರೇರಕವಾಗಬಲ್ಲ ಚಟುವಟಿಕೆಗಳನ್ನು ಸಿದ್ಧಗೊಳಿಸಲು ಹೆಚ್ಚಿನ ಆದ್ಯತೆ ನೀಡುವುದು ಅವಶ್ಯಕ. ಒಟ್ಟಿನಲ್ಲಿ

- ಚಟುವಟುಕೆಗಳು ಸರಳವಾಗಿರಲಿ
- ಚಟುವಟಿಕೆಗಳು ಕಲಿಕಾಂಶಕ್ಕೆ ಪೂರಕವಾಗಿರಲಿ
- ಎಲ್ಲಾ ವಿದ್ಯಾರ್ಥಿಗಳಿಗೂ ಭಾಗವಹಿಸಲು ಅವಕಾಶ ನೀಡುವಂತಿರಲಿ
- ವಿವಿಧ ಹಂತಗಳಿಗೆ ವಿವಿಧ ಮಾದರಿಯ ಚಟುವಟಿಕೆಗಳಿರಬಹುದು.
- ಚಟುವಟಿಕೆಯ ನಂತರ ವಿದ್ಯಾರ್ಥಿಗಳ ಅನಿಸಿಕೆಗಳನ್ನು ಸಂಗ್ರಹಿಸಿ
- ಕಲಿಕೆಯ ಅವಲೋಕನ ಮತ್ತು ಹಿಮ್ಮಾಹಿತಿಗೆ ಪ್ರತ್ಯೇಕ ಚಟುವಟಿಕೆಗಳು ಅವಶ್ಯವೆಂದಾದರೆ ಅವುಗಳ ಕಡೆ ಗಮನವಿರಲಿ.

**ಚಟುವಟಿಕೆಗಳನ್ನು ಸಂಘಟಿಸಲು ಕೆಲವು ಉದಾಹರಣೆಗಳು**

ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಕಲಿಕಾರ್ಥಿ ಕೇಂದ್ರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಕಂಠಪಾಠ ಕಲಿಕೆಯಿಂದ ಹೊರಬಂದು ನಿಜವಾದ ಕಲಿಕೆಗೆ ಕಲಿಕಾರ್ಥಿಯನ್ನು ಕರೆತರುವ ಪದ್ಧತಿಗಳು ಜಾರಿಯಾಗಿವೆ.

ಕಲಿಕೆಗೆ ಬೇಕಾದ ಅಗತ್ಯತೆಗಳನ್ನು ಅನುಕೂಲಿಸುವವರು ತಯಾರಿಸಿಕೊಂಡಿದ್ದರೂ ಅವರ ತಯಾರಿಕೆಯ ಹಿಂದೆ ಅನೇಕ ಸಮಸ್ಯೆಗಳು ಬರಬಹುದಾಗಿದೆ. ಇವುಗಳನ್ನು ಸಮರ್ಪಕವಾಗಿ ಬಿಡಿಸಿಕೊಳ್ಳಲು ಅನುಕೂಲಿಸುವವರು ಅನೇಕ ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಇಂತಹ ಸಂದರ್ಭಗಳಲ್ಲಿ ಚಟುವಟಿಕೆಗಳನ್ನು ನೀಡುವುದರ ಮೂಲಕ ಕಲಿಕೆಯನ್ನು ಸಮಗ್ರ ಕಲಿಕೆಯನ್ನಾಗಿಸಬಹುದು.

ಕಲಿಕಾರ್ಥಿಗಳಲ್ಲಿ ವೈಯಕ್ತಿಕ, ಸಹವರ್ತಿ ಗುಂಪು ಅಥವಾ ಗುಂಪುಗಳಲ್ಲಿ ಚಟುವಟಿಕೆಗಳನ್ನು ನೀಡಬಹುದು. ಕೆಲವೊಮ್ಮೆ ಇಡೀ ತರಗತಿಗೇ ಚಟುವಟಿಕೆ ನೀಡಬಹುದಾಗಿದೆ.

**1. ಕಲಿಕಾ ನಿಲ್ದಾಣ ಚಟುವಟಿಕೆ**

ಸಮಾಜ ವಿಜ್ಞಾನದಲ್ಲಿ ಬರುವ ವಂಶಾವಳಿಗಳು, ದಾರ್ಶನಿಕರು, ವಾಸ್ತುಶಿಲ್ಪಗಳು, ಆಡಳಿತದ ಅಂಗಗಳು, ಭೂಮಿಯ ಮೇಲ್ಪದರಗಳು, ಸಸ್ಯವರ್ಗ, ಪ್ರಾಣಿಗಳು ಹೀಗೆ ಯಾವುದಾದರೂ ಒಂದು ಘಟಕಕ್ಕೆ ಸೇರಿದ ಅಂಶಗಳನ್ನು ಕಾರ್ಡ್‌ನಲ್ಲಿ ವಿವರವಾಗಿ ಬರೆಯುವುದು. ಅವುಗಳನ್ನು ನಿಗಧಿತ ಸ್ಥಳದಲ್ಲಿ ಇಡುವುದು. ಮಕ್ಕಳ ನಾಲ್ಕು ಅಥವ ಐದು ಗುಂಪನ್ನು (ಕಾರ್ಡ್‌ಗಳಿಗೆ ಅನುಸಾರವಾಗಿ) ರಚಿಸಿ ಕಾರ್ಡ್ ಇಟ್ಟಿರುವ ಸ್ಥಳಕ್ಕೆ ಪ್ರತಿ ಗುಂಪೂ ಆವರ್ತಗಳಲ್ಲಿ ಚಲಿಸಬೇಕು. ಅಲ್ಲಿನ ವಿಷಯ ಓದಿ ತಮ್ಮ ತಮ್ಮಲ್ಲಿ ಚರ್ಚಿಸಬೇಕು. ನಂತರ ಮುಂದಿನ ಕಾರ್ಡ್ ಬಳಿ ಚಲಿಸಬೇಕು. ಕಾರ್ಡ ಇರಿಸಿದ ಸ್ಥಳವೇ ಕಲಿಕೆಯ ನಿಲ್ದಾಣ. ಉಪನ್ಯಾಸ ಪದ್ಧತಿ ಅನಿವಾರ್ಯ ಎಂದು ಬಾವಿಸಿದ್ದವರಿಗೆ ಅದನ್ನು ತಪ್ಪಿಸಲು ಈ ವಿಧಾನ ಹೇಳಿ ಮಾಡಿಸಿದ ವಿಧಾನ.

**2. ನಮ್ಮ ಗುಂಪು** – ಪರಿಣಿತ ಗುಂಪು ಕಲಿಕೆ (ಹೋಮ್ ಗ್ರೂಪ್ – ಎಕ್ಸಪರ್ಟ್ ಗ್ರೂಪ್)

ಇಲ್ಲಿನ ಗುಂಪಿನಲ್ಲಿ ಮೊದಲ ಹಂತದಲ್ಲಿ ಐದು ಅಥವ ಆರು ಮಕ್ಕಳ ಗುಂಪು ರಚಿಸುವುದು. ಈ ಗುಂಪು ನಮ್ಮ ಗುಂಪು ಎಂದಾಗುತ್ತದೆ. ಪ್ರಾರಂಭದಲ್ಲಿ ಈ ಗುಂಪಿಗೆ ಕೆಲಸವಿಲ್ಲ. ಕೊನೆಗೆ ಈ ಗುಂಪಿಗೆ ಕೆಲಸವಿದೆ.

ಎರಡನೇ ಹಂತದಲ್ಲಿ ನಮ್ಮ ಗುಂಪಿನಲ್ಲಿಯೇ ಸಂಖ್ಯೆಗಳನ್ನು ಒಬ್ಬೊಬ್ಬರಿಗೆ ನೀಡಬೇಕು. ಸದರಿ ಸಂಖ್ಯೆಯವರು ಒಂದೊಂದು ಗುಂಪು ರಚಿಸಿಕೊಳ್ಳುತ್ತಾರೆ. ಇದು ಪರಿಣಿತ ಗುಂಪು. ಪರಿಣಿತ ಗುಂಪು ತಮಗೆ ನೀಡಿದ ಒಂದು ಕಲಿಕಾಂಶದ ಬಗ್ಗೆ ಕೂಲಂಕುಷವಾಗಿ ಚರ್ಚಿಸುತ್ತದೆ. ನೀಡಿದ ವಿಷಯದ ಮೇಲೆ ಪರಿಣಿತಿ ಸಾಧಿಸುತ್ತದೆ. ಶಿಕ್ಷಕರು ಪ್ರತಿ ಗುಂಪಿಗೂ ಚಲಿಸುತ್ತಾ ಚರ್ಚೆ ಅನುಕೂಲಿಸುತ್ತಾರೆ.

ನಂತರ ವಾಪಾಸು ಸದಸ್ಯರು ತಮ್ಮ ಮೂಲ ಗುಂಪಿಗೆ ಮರಳಿ ತಾವು ಚರ್ಚಿಸಿದ ವಿಷಯವನ್ನು ತಮ್ಮ ಮೂಲ ಗುಂಪಿನೊಂದಿಗೆ ಹಂಚಿಕೊಳ್ಳುತ್ತಾರೆ. ಪ್ರತಿ ಸದಸ್ಯರೂ ಒಂದೊಂದು ವಿಷಯವನ್ನು ಚರ್ಚಿಸಿ ಪರಿಣತಿ ಗಳಿಸಿರುವುದರಿಂದ ಮೂಲ ಗುಂಪುಗಳು ಎಲ್ಲ ವಿಷಯಗಳನ್ನು ಹಂಚಿಕೊಳ್ಳುತ್ತವೆ. ಕೊನೆಯಲ್ಲಿ ಹೆಚ್ಚಿನ ವಿವರಗಳಿಗೆ ಶಿಕ್ಷಕರನ್ನು ಸಂಪರ್ಕಿಸಬಹುದು. ಉಪನ್ಯಾಸ ಪದ್ಧತಿ ಅನಿವಾರ್ಯ ಎಂದು ಬಾವಿಸಿದ್ದವರಿಗೆ ಅದನ್ನು ತಪ್ಪಿಸಲು ಈ ವಿಧಾನವೂ ಸಹ ಹೇಳಿ ಮಾಡಿಸಿದ ವಿಧಾನ.

**3. ಸಹವರ್ತಿ ಚಟುವಟಿಕೆ**

ಇಬ್ಬರು ಸಹವರ್ತಿಗಳ ನಡುವೆ ಸಮಾಜ ವಿಜ್ಞಾನದಲ್ಲಿ ಬರುವ ವಂಶಾವಳಿಗಳು, ವಾಸ್ತುಶಿಲ್ಪಗಳು, ಆಡಳಿತದ ಅಂಗಗಳು, ಭೂಮಿಯ ಮೇಲ್ಪದರಗಳು, ಸಸ್ಯವರ್ಗ, ಪ್ರಾಣಿಗಳು, ಸಮಾಜ ವಿಜ್ಞಾನಿಗಳ ಹೆಸರುಗಳನ್ನು ಚೀಟಿಯಲ್ಲಿ ಬರೆದು ಅವುಗಳನ್ನು ಆಯ್ಕೆ ಮಾಡಿಕೊಳ್ಳಲು ತಿಳಿಸುವುದು, ಹಾಗೂ ಸಹವರ್ತಿಗಳ ಗುಂಪುಗಳಲ್ಲಿ ಸೇರಿಕೊಳ್ಳಲು ತಿಳಿಸುವುದು. ಅಲ್ಲಿ ಅವರ ವಿಷಯ ಚರ್ಚಿಸಬಹುದು.

**4. ಗುಂಪು ಚಟುವಟಿಕೆ**

ಗುಂಪು ಚಟುವಟಿಕೆಯಲ್ಲಿ ಎರಡು ವಿದ್ಯಾರ್ಥಿಗಳ ಗುಂಪುಗಳು, ಮೂರು ವಿದ್ಯಾರ್ಥಿಗಳ ಗುಂಪು.... ಹೀಗೆ ಗರಿಷ್ಠ ಹತ್ತು ವಿದ್ಯಾರ್ಥಿಗಳ ಗುಂಪುಗಳನ್ನು ಸಂಘಟಿಸಬಹುದಾಗಿದೆ. ಈ ಗುಂಪುಗಳಿಗೆ ಸಮಾಜ ವಿಜ್ಞಾನ ಪಠ್ಯದಲ್ಲಿ ಬರುವ ಅನೇಕ ರಾಜ–ರಾಣಿ–ಆಡಳಿತಗಾರರ ಹೆಸರುಗಳು, ಸ್ಥಳಗಳು, ದಾರ್ಶನಿಕರು, ನದಿಗಳು, ರಾಷ್ಟ್ರ ನಾಯಕರು, ದೇಶ ಅಥವಾ ರಾಜಧಾನಿಗಳು, ಗ್ರಹಗಳು, ನಕ್ಷತ್ರಗಳ ಗುಂಪು / ಗೆಲಾಕ್ಸಿ ಮುಂತಾದುವುಗಳ ಹೆಸರುಗಳನ್ನು ನೀಡಬಹುದಾಗಿದೆ.

ಕಲಿಕಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ, ಕಲಿಕಾಂಶಕ್ಕೆ ಸರಿಹೊಂದುವಂತಹ ಚಟುವಟಿಕೆಗಳನ್ನು ಆಯೋಜಿಸುವುದು. ಪ್ರತಿ ಗುಂಪಿಗೂ ಅದರದೇ ಆದ ಜವಾಬ್ದಾರಿ / ಚರ್ಚಾಂಶಗಳನ್ನು ನೀಡುವುದು. ಪ್ರತಿ ಗುಂಪುಗಳಲ್ಲಿಯ ಚರ್ಚೆಯಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆಯನ್ನು ಗಮನಿಸುತ್ತಾ ಅಗತ್ಯ ಮಾರ್ಗದರ್ಶನ ನೀಡುವುದು. ಗುಂಪಿನಲ್ಲಿ ಮಗುವಿನ ಭಾಗವಹಿಸುವಿಕೆ, ಅಲ್ಲಿ ಉಂಟಾಗಬಹುದಾದ ಗೊಂದಲ / ಅಸ್ಪಷ್ಟತೆಗಳಿಗೆ ಅಗತ್ಯ ಸಲಹೆ ನೀಡುತ್ತಾ ಪರಸ್ಪರ ಕಲಿಕೆಗೆ ಹೆಚ್ಚು ಅವಕಾಶ ನೀಡುವುದು.

ಪ್ರಸ್ತುತ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಈ ರೀತಿಯ ಗುಂಪು ಚರ್ಚೆ ಹಾಗೂ ಮಾಹಿತಿ ಸಂಗ್ರಹಣಾ ಚಟುವಟಿಕೆಗಳು ಇದ್ದು, ಇವು ಮಗುವಿನ ಕಲಿಕಾ ಹಂದರಗಳನ್ನು ತುಂಬಲು ಹಾಗೂ ಅವರ ಪೂರ್ವಜ್ಞಾನದೊಂದಿಗೆ ತಾವೇ ಜ್ಞಾನವನ್ನು ಕಟ್ಟಿಕೊಳ್ಳಲು ಅವಕಾಶಗಳು ಇವೆ.

ಉದಾ :–

1. ದೇವಾಲಯ, ಮಸೀದಿ ಅಥವ ಭೌತಿಕ ಸ್ಮಾರಕಗಳಿಗೆ ಭೇಟಿ ನೀಡಿ ಅಲ್ಲಿನ ವೈಶಿಷ್ಟ್ಯ ದಾಖಲಿಸುವ ಚಟುವಟಿಕೆ. ಗ್ರಾಮ ಪಂಚಾಯ್ತಿ ಅಥವ ಅಂತಹ ಯಾವುದೇ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿ ನಡೆಯುವ ಸಭೆ ಅಥವಾ ಇತರೆ ಪ್ರಕ್ರಿಯೆ ತಿಳಿದುಕೊಂಡು ದಾಖಲಿಸುವ ಚಟುವಟಿಕೆ.
2. ವಿವಿದ ಚಿಹ್ನೆಗಳು, ಪ್ರಾಣಿವರ್ಗ, ಸಸ್ಯವರ್ಗ, ಪಕ್ಷಿಗಳು, ನಾಣ್ಯ, ಬಾವುಟಗಳ ಚಿತ್ರಗಳನ್ನು ಸಂಗ್ರಹಿಸಿ ತೋರಿಸುವ ಚಟುವಟಿಕೆ.
3. ಒಂದು ಚಟುವಟಿಕೆಯಲ್ಲಿ 'ಕಾರ್ಯನಿರತ ಮಾದರಿ'ಯೊಂದನ್ನು ವೀಕ್ಷಿಸುತ್ತಾ, ಅಲ್ಲಿ ಚರ್ಚಿಸಿ, ತೀರ್ಮಾನಿಸುವ ಅವಕಾಶಗಳೂ ಇವೆ.

ಈ ಮೇಲ್ಕಂಡ ಸಂದರ್ಭಗಳಲ್ಲಿ ಮಗುವಿನ ಮಾತುಗಾರಿಕೆ, ಪಾಲ್ಗೊಳ್ಳುವಿಕೆ, ಪರಸ್ಪರ ವಿನಿಮಯ / ಸಂವಹನ ಹಾಗೂ ದಾಖಲೀಕರಣವು ಪ್ರಧಾನವಾಗಿರುತ್ತದೆ. ತನಗೆ ತಿಳಿದಿರುವ ಜ್ಞಾನದ ಮೂಲಕ ಹೊಸ ಸನ್ನಿವೇಶವೊಂದರಲ್ಲಿ ಆ ಜ್ಞಾನವನ್ನು ಪುನರ್‌ರಚಿಸಿಕೊಳ್ಳಲು ಸಾಧ್ಯವಾಗುತ್ತದೆ. ಆ ಮೂಲಕ ತಾನೇ ಜ್ಞಾನವನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಪ್ರತಿ ಸಂದರ್ಭದಲ್ಲಿಯೂ ಮಗುವಿಗೆ ಹಿಮ್ಮಾಹಿತಿ ನೀಡಬಹುದಾದ ಅಥವಾ ಮಗುವೇ ಹಿಮ್ಮಾಹಿತಿ ನೀಡಬಹುದಾದ ಅವಕಾಶವಿರುತ್ತದೆ.

*****